ಸಿ.ಎಚ್.ಆರ್.ಐ. 2010

# ಪೊಲೀಸರ ಬಗ್ಗೆ ನೀವು ತಿಳಿಯ ಬಯಸುವ ಆದರೆ ಕೇಳಲು ತುಂಬಾ ಭಯಪಡುವ 101 ವಿಷಯಗಳು




ಕಾಮನ್‌ವೆಲ್ತ್ ಹ್ಯೂಮನ್ ರೈಟ್ಸ್ ಇನಿಶಿಯೇಟಿವ್
ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ಮಾನವ ಹಕ್ಕುಗಳ ಅನುಷ್ಠಾನಕ್ಕಾಗಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆ

# ಕಾಮನ್‌ವೆಲ್ತ್ ಹ್ಯೂಮನ್ ರೈಟ್ಸ್ ಇನಿಶಿಯೇಟಿವ್

ಕಾಮನ್‌ವೆಲ್ತ್ ಹ್ಯೂಮನ್ ರೈಟ್ಸ್ ಇನಿಶಿಯೇಟಿವ್ (ಸಿ.ಎಚ್.ಆರ್.ಐ.) ಒಂದು ಸ್ವತಂತ್ರ, ಪಕ್ಷಾತೀತ, ಅಂತರರಾಷ್ಟ್ರೀಯ ಸರ್ಕಾರೇತರ ಸ್ವಯಂಸೇವಾ ಸಂಸ್ಥೆಯಾಗಿದ್ದು, ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ಮಾನವ ಹಕ್ಕು ಸಾಕಾರಗೊಳ್ಳಲು ಶ್ರಮಿಸುತ್ತಿದೆ. 1987ರಲ್ಲಿ ಕಾಮನ್‌ವೆಲ್ತ್ ರಾಷ್ಟ್ರಗಳು ಈ ಸಂಸ್ಥೆಯನ್ನು ಆರಂಭಿಸಿದವು. ಮಾನವ ಹಕ್ಕು ಬಗ್ಗೆ ಅರಿವು ಮೂಡಿಸುವುದರ ಜೊತೆಗೆ, ಅದನ್ನು ಪುಷ್ಟೀಕರಿಸುವ ಉದ್ದೇಶದಿಂದ ಕಾಮನ್‌ವೆಲ್ತ್ ರಾಷ್ಟ್ರಗಳು ಒಂದುಗೂಡಿದುದರ ಫಲವಾಗಿ ಸಿ.ಎಚ್.ಆರ್.ಐ. ಸ್ಥಾಪನೆಗೊಂಡಿತು.

ಕಾಮನ್‌ವೆಲ್ತ್ ಹರಾರೆ ಸೂತ್ರಗಳು, ಅಂತರರಾಷ್ಟ್ರೀಯ ಮಾನವ ಹಕ್ಕು ಘೋಷಣೆ ಹಾಗೂ ಮಾನವ ಹಕ್ಕುಗಳಿಗೆ ಸಂಬಂಧಪಟ್ಟ ಇತರೆ ಕಾರ್ಯಸೂಚಿ ಮತ್ತು ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿರುವ ನಿಯಮದ ಅನುಷ್ಠಾನಕ್ಕೆ ಅಗತ್ಯವಾದ ಕ್ರಮ ಕೈಗೊಳ್ಳುವುದು ಸಿ.ಎಚ್.ಆರ್.ಐ. ಸಂಸ್ಥೆಯ ಉದ್ದೇಶ. ವರದಿಗಳು ಹಾಗೂ ತನಿಖೆಗಳ ಮುಖಾಂತರ ಸಂಸ್ಥೆಯು ಮಾನವ ಹಕ್ಕು ಅನುಷ್ಠಾನದ ಪ್ರಗತಿ ಹಾಗೂ ಅದರ ಉಲ್ಲಂಘನೆಯ ಬಗ್ಗೆ ಕಾಮನ್‌ವೆಲ್ತ್ ರಾಷ್ಟ್ರಗಳ ಗಮನ ಸೆಳೆಯುತ್ತದೆ.

ಮಾನವ ಹಕ್ಕು ಉಲ್ಲಂಘನೆಯನ್ನು ತಡೆಗಟ್ಟುವ ದೃಷ್ಟಿಯಿಂದ ಸಿ.ಎಚ್.ಆರ್.ಐ. ಹಲವಾರು ಕ್ರಮ ಕೈಗೊಳ್ಳುತ್ತದೆ. ಸದಸ್ಯ ರಾಷ್ಟ್ರಗಳು, ಕೇಂದ್ರ ಕಚೇರಿ, ಸಾರ್ವಜನಿಕ ಸೇವಾ ಸಂಸ್ಥೆಗಳನ್ನು ತನ್ನ ಕಾರ್ಯವ್ಯಾಪ್ತಿಯಲ್ಲಿ ಸೇರಿಸಿಕೊಂಡಿದೆ. ಸಾರ್ವಜನಿಕ ಶಿಕ್ಷಣ, ನೀತಿ-ನಿಯಮಗಳ ಬಗ್ಗೆ ಚರ್ಚೆ, ತುಲನಾತ್ಮಕ ಸಂಶೋಧನೆ ಹಾಗೂ ಜಾಲದ ರಚನೆಯ ಮೂಲಕ ಮಾನವ ಹಕ್ಕು ಬಗ್ಗೆ ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿದೆ.

ಸಿ.ಎಚ್.ಆರ್.ಐ.ಗೆ ಸಹಾಯ ಹಸ್ತ ನೀಡುತ್ತಿರುವ ಸಂಸ್ಥೆಗಳಾದ ಕಾಮನ್‌ವೆಲ್ತ್ ಪತ್ರಕರ್ತರ ಸಂಘ, ಕಾಮನ್‌ವೆಲ್ತ್ ವಕೀಲರ ಸಂಘ, ಕಾಮನ್‌ವೆಲ್ತ್ ಕಾನೂನು ಶಿಕ್ಷಣ ಸಂಘ, ಕಾಮನ್‌ವೆಲ್ತ್ ಸಂಸದೀಯ ವ್ಯವಹಾರಗಳ ಸಂಘ, ಕಾಮನ್‌ವೆಲ್ತ್ ಪತ್ರಿಕಾ ಸಂಘ ಹಾಗೂ ಕಾಮನ್‌ವೆಲ್ತ್ ಬ್ರಾಡ್‌ಕಾಸ್ಟಿಂಗ್ (Broadcasting) ಸಂಘಗಳ ಇರುವಿಕೆಯಿಂದ ಸಿ.ಎಚ್.ಆರ್.ಐ.ಗೆ ಅಂತರರಾಷ್ಟ್ರೀಯ ಜಾಲದ (Network) ಮಾನ್ಯತೆ ದೊರಕಿದೆ. ಈ ಸಂಸ್ಥೆಗಳು ಸಹ ಮಾನವ ಹಕ್ಕು ವಿಷಯದಲ್ಲಿ ಮಾಹಿತಿ ಒದಗಿಸುವುದಲ್ಲದೆ ಸ್ಥಳೀಯ ಮಟ್ಟದಲ್ಲಿ ಮಾನವ ಸ್ಥಿತಿಗತಿ ಬಗ್ಗೆ ಜಾಗೃತಿ ಉಂಟುಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.

ಸಿ.ಎಚ್.ಆರ್.ಐ. ಸಂಸ್ಥೆಯ ಮುಖ್ಯ ಕಚೇರಿ ನವದೆಹಲಿಯಲ್ಲಿದ್ದು ಲಂಡನ್ ಹಾಗೂ ಆಕ್ರ (ಘಾನಾ) ದಲ್ಲಿಯೂ ಕಛೇರಿಗಳಿವೆ.

**ಅಂತರರಾಷ್ಟ್ರೀಯ ಸಲಹಾ ಆಯೋಗ :** ಸ್ಯಾಮ್ ಓಕುಡ್‌ಜೇಟೊ (ಅಧ್ಯಕ್ಷರು). ಸದಸ್ಯರು : ಯುನೈಸ್ ಬ್ರೂಕಮಾನ್- ಅಮಿಸ್ಸಾಹ್, ಮುರ್ರೆ ಬರ್ಟ್, ಯಶ್ ಘಾಯ್, ಅಲಿಸನ್ ಡಕ್ಸ್‌ಬರಿ, ನೆವಿಲ್ ಲಿಂಟನ್, ಬಿ. ಜಿ. ವರ್ಗೀಸ್, ಜೋಹ್ರಾ ಯೂಸುಫ್ ಮತ್ತು ಮಾಯಾ ದಾರೂವಾಲಾ.

**ಕಾರ್ಯಕಾರಿ ಸಮಿತಿ (ಭಾರತ) :** ಬಿ. ಜಿ. ವರ್ಗೀಸ್ (ಅಧ್ಯಕ್ಷರು). ಸದಸ್ಯರು: ಅನು ಆಗಾ, ಬಿ. ಕೆ. ಚಂದ್ರಶೇಖರ್, ಭಗವಾನ್ ದಾಸ್, ನಿತಿನ್ ದೇಸಾಯಿ, ಕೆ. ಎಸ್. ಧಿಲ್ಲಾನ್, ಹರಿವಂಶ್, ಸಂಜಯ್ ಹಜ಼ಾರಿಕಾ, ಪೂನಂ ಮುತ್ರೇಜ, ರೂಮಾ ಪಾಲ್, ಆರ್. ವಿ. ಪಿಳ್ಳೈ, ಕಮಲ್ ಕುಮಾರ್ ಮತ್ತು ಮಾಯಾ ದಾರೂವಾಲಾ (ನಿರ್ದೇಶಕರು).

**ಕಾರ್ಯಕಾರಿ ಸಮಿತಿ (ಘಾನಾ) :** ಸಾಮ್ ಓಕುಡ್‌ಜೇಟೊ (ಅಧ್ಯಕ್ಷರು). ಸದಸ್ಯರು: ಅನ್ನಾ ಬೋಸ್‌ಮಾನ್, ಬಿ. ಜಿ. ವರ್ಗೀಸ್, ನೆವಿಲ್ ಲಿಂಟನ್ ಮತ್ತು ಮಾಯಾ ದಾರೂವಾಲಾ. (ನಿರ್ದೇಶಕರು).

**ಕಾರ್ಯಕಾರಿ ಸಮಿತಿ (ಯುನೈಟೆಡ್ ಕಿಂಗ್‌ಡಮ್) :** ನೆವಿಲ್ ಲಿಂಟನ್ (ಅಧ್ಯಕ್ಷರು); ಲಿಂಡ್ಸೆ ರಾಸ್ (ಉಪಾಧ್ಯಕ್ಷರು). ಸದಸ್ಯರು : ಆಸ್ಟಿನ್ ಡೇವಿಸ್, ಮೀನಾಕ್ಷಿ ಧರ್, ಫ್ರಾನ್ಸಿಸ್ ಡಿ ಸೋಜಾ, ಡೆರಿಕ್ ಇಂಗ್ರಾಮ್, ಕ್ಲೇರ್ ಮಾರ್ಟಿನ್, ಸಯ್ಯದ್ ಶರ್ಫುದ್ದೀನ್ ಮತ್ತು ಎಲಿಜಬೆತ್ ಸ್ಮಿತ್.

© CHRI 2010

ISBN - 81-88205-67-2

ಈ ಕೈಪಿಡಿಯಲ್ಲಿರುವ ಪಠ್ಯವನ್ನು ಬಳಸಿಕೊಳ್ಳುವವರು ಮೂಲ ಕೃತಿಯನ್ನು ಹಾಗೂ ಲೇಖಕರನ್ನು ಉಲ್ಲೇಖಿಸತಕ್ಕದ್ದು.

ಈ ಕೈಪಿಡಿಯ ಕರಡನ್ನು ತಿದ್ದಲು ಸಹಕರಿಸಿದ ವೆಂಕಟೇಶ್ ನಾಯಕ್ ಅವರಿಗೆ ಕೃತಜ್ಞತೆಗಳು.

**Commonwealth Human Rights Initiative**

Website : www.humanrightsinitiative.org

**CHRI Headquarters**
B-117, First Floor
Sarvodaya Enclave
New Delhi - 110017, INDIA
Tel : +91-11-2685-0523, 4318-0200
Fax : +91-11-2686-4688
E-mail : info@humanrightsinitiative.org

**CHRI London Office**
C/o Institute of Commonwealth Studies
28, Russell Square
London WC1B 5DS, UK
Tel : +44-020-7-862-8857
Fax : +44-020-7-862-8820
E-mail : chri@sas.ac.uk

**CHRI Africa Office**
House No. 9, Samora Machel Street
Asylum Down,
Opp. Beverley Hills Hotel
Near Trust Towers, Accra, Ghana
Tel/Fax : +00233-21-271170
Email : chriafr@africaonline.com.gh

# ಪೊಲೀಸರ ಬಗ್ಗೆ ನೀವು ತಿಳಿಯ ಬಯಸುವ
# ಆದರೆ ಕೇಳಲು ತುಂಬಾ ಭಯ ಪಡುವ
# 101 ವಿಷಯಗಳು



ಆಂಗ್ಲ ಮೂಲ

ಮಾಯಾ ದಾರೂವಾಲಾ, ನವಾಜ್ ಕೋಟ್ವಾಲ್

ಕನ್ನಡ ಅನುವಾದ

ಶಾಂತಾ ಎಸ್. ನಾಯಕ್ ಮತ್ತು ವೈ. ಜಿ. ಮುರಳೀಧರ

**This handbook is made possible with the support of the British High Commission, New Delhi**

# ಮುನ್ನುಡಿ

ದಿನ ನಿತ್ಯವೂ ನಮಗೆ ಪೋಲೀಸರ ಸಂಪರ್ಕವಾಗುತ್ತಿರುತ್ತದೆ. ಪೋಲೀಸ್ ಸಿಬ್ಬಂದಿ ಅನೇಕ ಚಟುವಟಿಕೆಗಳಲ್ಲಿ ತೊಡಗಿರುವುದನ್ನು ನಾವು ಕಾಣುತ್ತಿರುತ್ತೇವೆ. ವಾಹನ ಸಂಚಾರ ನಿಯಂತ್ರಣೆ, ಗಣ್ಯ ವ್ಯಕ್ತಿಗಳ ರಕ್ಷಣೆ, ಜನಸಂದಣಿಯ ನಿಯಂತ್ರಣೆ, ಆಪಾದಿತರನ್ನು ನ್ಯಾಯಾಲಯಗಳಿಗೆ ಕರೆದೊಯ್ಯುವುದು, ಸಾಕ್ಷಿ ನೀಡುವುದು, ಠಾಣೆಯಲ್ಲಿ ದೂರುಗಳನ್ನು ದಾಖಲಿಸುವುದು, ಅಪರಾಧಿಗಳನ್ನು ಎದುರಿಸುವುದು ಹಾಗೂ ಭಯೋತ್ಪಾದಕರೊಂದಿಗೆ ಸೆಣಸಾಟ ನಡೆಸುವುದು ಇತ್ಯಾದಿ ಕೆಲಸಗಳಲ್ಲಿ ಪೋಲೀಸರು ನಿರತರಾಗಿರುವುದನ್ನು ಗಮನಿಸುತ್ತಿರುತ್ತೇವೆ. ವೃತ್ತ ಪತ್ರಿಕೆ, ಟೀ.ವೀ. ಹಾಗೂ ಇತರೆ ಮಾಧ್ಯಮಗಳ ಮೂಲಕ ಕೂಡ ಪೋಲೀಸರ ಬಗ್ಗೆ ಸಾಕಷ್ಟು ಕೇಳುತ್ತಿರುತ್ತೇವೆ. ಪ್ರತಿಯೊಬ್ಬರೂ ಪೋಲೀಸರ ಬಗ್ಗೆ ಒಂದಲ್ಲ ಒಂದು ರೀತಿಯ ಅಭಿಪ್ರಾಯ ಹೊಂದಿರುತ್ತಾರೆ. ಆದರೆ ವಾಸ್ತವವಾಗಿ ಜನರಿಗೆ ಪೋಲೀಸರ ಬಗ್ಗೆ ಹೆಚ್ಚು ತಿಳಿದಿರುವುದಿಲ್ಲ.

ಪೋಲೀಸರು ಪ್ರಜಾಪ್ರಭುತ್ವದಲ್ಲಿ ಜನರನ್ನು ಹತ್ತಿಕ್ಕಿ ನಿಯಂತ್ರಿಸಲು ಸಮವಸ್ತ್ರ ತೊಟ್ಟ ಸರ್ಕಾರಿ ಏಜೆಂಟರಲ್ಲ. ಬದಲಿಗೆ ಅಗ್ನಿಶಾಮಕದಳ ಅಥವಾ ಕಂದಾಯ ವಿಭಾಗದಂತೆ ಪೋಲೀಸರು ಕಾನೂನಿನಡಿಯಲ್ಲಿ ನಮ್ಮೆಲ್ಲರನ್ನು ರಕ್ಷಿಸುವ ಜವಾಬ್ದಾರಿಯನ್ನು ಹೊತ್ತಿರುವ ಅಗತ್ಯ ಸೇವಾ ಸಿಬ್ಬಂದಿ ವರ್ಗದವರಾಗಿರುತ್ತಾರೆ. ಇತರ ಸರ್ಕಾರಿ ಅಧಿಕಾರಿಗಳಂತೆ ಪೋಲೀಸರು ನಾಗರಿಕರ ಸೇವೆಗಾಗಿ ನೇಮಿಸಲ್ಪಟ್ಟ ಹಾಗೂ ನಾಗರಿಕರು ನೀಡುವ ತೆರಿಗೆಗಳಿಂದ ವೇತನ ಪಡೆಯುವ ಜನಸೇವಕರು.

ನಾಗರಿಕರನ್ನು ರಕ್ಷಿಸುವ ಜವಾಬ್ದಾರಿ ಹೇಗೆ ಪೋಲೀಸರ ಮೇಲಿದೆಯೋ ಹಾಗೆಯೇ ಪೋಲೀಸರ ವಿಷಯದಲ್ಲಿ ನಾಗರಿಕರಿಗೂ ಕೆಲವೊಂದು ಜವಾಬ್ದಾರಿಗಳಿವೆ. ಪೋಲೀಸರ ಬಗ್ಗೆ ಭಯ ಅಥವಾ ತಾತ್ಸಾರ ಭಾವನೆ ಹೊಂದುವುದು, ಅಥವಾ ನಮಗೆ ಕಷ್ಟ ಬಂದಾಗ ಮಾತ್ರ ಅವರ ಸಹಾಯ ಬಯಸುವುದು ಒಬ್ಬ ಜವಾಬ್ದಾರಿಯುತ ನಾಗರಿಕನ ಲಕ್ಷಣವಲ್ಲ. ಕಾನೂನನ್ನು ಎತ್ತಿ ಹಿಡಿಯಲು ನಾಗರಿಕರು ಮತ್ತು ಪೋಲೀಸರು ಒಂದುಗೂಡಿ ಕೆಲಸ ಮಾಡುವ ಅಗತ್ಯವಿದೆ. ಪೋಲೀಸ್ ಸಿಬ್ಬಂದಿಯ ಕೆಲಸಕಾರ್ಯಗಳು ಮತ್ತು ಜವಾಬ್ದಾರಿಗಳೇನು, ಅವರು ಎದುರಿಸುವ ಸವಾಲುಗಳು ಯಾವುವು, ಅವರ ಕಾರ್ಯಾಚರಣೆಗಳು ಹೇಗಿರುತ್ತವೆ, ಅವರ ಸಂಸ್ಥೆಯ ರಚನೆ ಹೇಗಿರುತ್ತದೆ ಎಂಬುದರ ಬಗ್ಗೆ ಹಾಗೂ ಪೋಲೀಸರ ಕರ್ತವ್ಯಗಳು ಮತ್ತು ಅವರ ಅಧಿಕಾರದ ಇತಿಮಿತಿಗಳ ಬಗ್ಗೆ ನಾಗರಿಕರು ತಿಳಿದಿರಬೇಕು. ಅದೇ ರೀತಿ ನಾವೂ ಸಹ ನಮ್ಮ ಹಕ್ಕು ಮತ್ತು ಬಾಧ್ಯತೆಗಳನ್ನು ಅರಿತುಕೊಳ್ಳಬೇಕು ಏಕೆಂದರೆ, ಪೋಲೀಸರಾಗಲಿ ಅಥವಾ ನಾಗರಿಕರಾಗಲಿ ಕಾನೂನನ್ನು ಉಲ್ಲಂಘಿಸಿ ತಪ್ಪಿಸಿಕೊಳ್ಳಬಾರದು. ಕಾನೂನಿನ ಆಡಳಿತ (ರೂಲ್ ಆಫ್ ಲಾ) ಎಂಬುದರ ಅರ್ಥ ಇದೇ.

ನಿಮ್ಮ ಪೋಲೀಸರ ಬಗ್ಗೆ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಲು ಅನುಕೂಲವಾಗುವಂತೆ ಈ ಸರಳ ಕೈಪಿಡಿಯನ್ನು ನಿಮಗೆ ನೀಡುತ್ತಿದ್ದೇವೆ. ಒಂದು ವಿಷಯದ ಬಗ್ಗೆ ಸರಿಯಾದ ತಿಳುವಳಿಕೆ ಇದ್ದರೆ ಮಾತ್ರ ನಾವು ಆತ್ಮವಿಶ್ವಾಸದಿಂದ ದನಿ ಎತ್ತಲು ಸಾಧ್ಯ. ಅಕ್ರಮಗಳ ವಿರುದ್ಧ ನಾವು ದನಿ ಎತ್ತಿದರೆ ಮಾತ್ರ ವ್ಯವಸ್ಥೆಯಲ್ಲಿ ಬದಲಾವಣೆ ಸಾಧ್ಯ. ತಮ್ಮ ಹಕ್ಕುಗಳ ಬಗ್ಗೆ ಮತ್ತು ಪೋಲೀಸರ ಬಗ್ಗೆ ಎಲ್ಲ ಮಾಹಿತಿಯನ್ನು ಅರಿತುಕೊಂಡ ಜನರು ಮಾತ್ರ ಉತ್ತಮ ಮಟ್ಟದ ಪೋಲೀಸ್ ಸೇವೆಯನ್ನು ಪಡೆಯಲು ಶ್ರಮಿಸಲು ಸಾಧ್ಯ. ಈ ಆಶಯದಿಂದ ಈ ಕೈಪಿಡಿಯನ್ನು ಪ್ರಕಟಿಸುತ್ತಿದ್ದೇವೆ.

ಪರಿಕಲ್ಪನೆ, ಸಂರಚನೆ ಮತ್ತು ವಿನ್ಯಾಸ : ಸೆಂತಿಲ್ ಕುಮಾರ್ ಪರಮಶಿವಂ
ಚಿತ್ರಗಳು : ಸುರೇಶ್ ಕುಮಾರ್

**1. ಪೊಲೀಸ್ ಪಡೆ ನಮಗೇಕೆ ಬೇಕು?**



ನಾಗರಿಕರಲ್ಲಿ ಸುರಕ್ಷತೆ ಹಾಗೂ ಭದ್ರತೆಯ ಮನೋಭಾವವನ್ನು ಉಂಟುಮಾಡಲು ಪೊಲೀಸ್ ವ್ಯವಸ್ಥೆಯ ಅಗತ್ಯವಿದೆ. ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು, ಅಪರಾಧವನ್ನು ತಡೆಗಟ್ಟಲು ಹಾಗೂ ಅಪರಾಧಗಳ ತನಿಖೆ ನಡೆಸಲು ಪೊಲೀಸರ ಅಗತ್ಯವಿದೆ. ಪೊಲೀಸರು ಇರುವುದು ಕಾನೂನನ್ನು ಅನುಷ್ಠಾನಗೊಳಿಸುವುದಕ್ಕಾಗಿ. ಪೊಲೀಸರೂ ಸೇರಿದಂತೆ ಪ್ರತಿಯೊಬ್ಬರೂ ಪ್ರತಿಯೊಂದು ಹಂತದಲ್ಲೂ ಕಾನೂನನ್ನು ಅನುಸರಿಸುವಂತೆ ನಿಗಾವಹಿಸಲು ಪೊಲೀಸ್ ಪಡೆಯ ಅಗತ್ಯವಿದೆ.

**2. ಪೊಲೀಸರಿಂದ ಯಾವ ಯಾವ ಕೆಲಸ ಕರ್ತವ್ಯಗಳನ್ನು ಅಪೇಕ್ಷಿಸಬಹುದು?**



ರೆಡ್ ಹ್ಯಾಂಡಾಗಿ ಸಿಕ್ಕಿ ಬಿದ್ದ

ಪೊಲೀಸ್ ಪಡೆ ಅನೇಕ ಕರ್ತವ್ಯಗಳನ್ನು ನಿರ್ವಹಿಸಬೇಕು. ಅಪರಾಧಗಳು ಸಂಭವಿಸದಂತೆ ಎಚ್ಚರ ವಹಿಸುವುದು, ಒಂದು ವೇಳೆ ಸಂಭವಿಸಿದರೆ ಮಿತಿ ಮೀರದಂತೆ ಅವುಗಳನ್ನು ನಿಯಂತ್ರಿಸುವುದು ಅವರ ಜವಾಬ್ದಾರಿ. ಸಂಭವಿಸಿದ ಅಪರಾಧಗಳನ್ನು ಪತ್ತೆ ಹಚ್ಚಿ ಸಮರ್ಪಕವಾಗಿ ತನಿಖೆ ಮಾಡುವುದು ಕೂಡ ಪೊಲೀಸ್ ಪಡೆಯ ಕರ್ತವ್ಯವಾಗಿರುತ್ತದೆ. ಸರ್ಕಾರಿ ವಕೀಲರಿಗೆ ನ್ಯಾಯಾಲಯದ ಮುಂದೆ ಮಂಡಿಸಲು ನೆರವಾಗುವಂತೆ ಪ್ರಾಮಾಣಿಕವಾದ ಮತ್ತು ಸಾಕ್ಷ್ಯಾಧಾರಿತವಾದ ಪ್ರಕರಣಗಳ ವರದಿ ಒಪ್ಪಿಸುವುದು ಅವರ ಕರ್ತವ್ಯ. ಸಮಾಜದಲ್ಲಿ ಒಟ್ಟಾರೆ ಕಾನೂನು ಪರಿಪಾಲನೆ ಹಾಗು ಸುವ್ಯವಸ್ಥೆ ಕಾಪಾಡಲು ತಮ್ಮ ಸುತ್ತ ಮುತ್ತ ಏನೆಲ್ಲಾ ನಡೆಯುತ್ತಿದೆ ಎಂಬುದರ ಬಗ್ಗೆ ಮಾಹಿತಿ ಸಂಗ್ರಹಿಸುವುದು ಸಹ ಪೊಲೀಸರ ಕರ್ತವ್ಯ.




**3. ಪೊಲೀಸ್ ಅಧಿಕಾರ ಎಂದರೇನು?**

ಪೊಲೀಸರಿಗೆ ಕಾನೂನಿನ ಅಡಿಯಲ್ಲಿ ಅನೇಕ ರೀತಿಯ ಅಧಿಕಾರಗಳನ್ನು ನೀಡಲಾಗಿದೆ. ಕಾನೂನಿನ ಪ್ರಕಾರ ದೊರಕಿರುವ ಈ ಅಧಿಕಾರಗಳನ್ನು ಪೊಲೀಸರು ನಿಯಮಾನುಸಾರವಾಗಿ ಉಪಯೋಗಿಸಬೇಕು. ಈ ಅಧಿಕಾರಗಳನ್ನು ಚಲಾಯಿಸಿ ಪೊಲೀಸರು–ಆರೋಪಿಗಳನ್ನು ದಸ್ತಗಿರಿ ಮಾಡ ಬಹುದು; ಆರೋಪಿಗಳನ್ನು ಪತ್ತೆ ಹಚ್ಚಬಹುದು ಅಥವಾ ವಸ್ತುಗಳನ್ನು, ಮುಟ್ಟುಗೋಲು ಹಾಕಿಕೊಳ್ಳಬಹುದು; ಅಪರಾಧಗಳ ತನಿಖೆ ನಡೆಸಬಹುದು; ಸಾಕ್ಷ್ಯಗಳನ್ನು ಸಂಗ್ರಹಿಸಬಹುದು; ಶಂಕಿತ ವ್ಯಕ್ತಿಗಳನ್ನು ಪ್ರಶ್ನಿಸಬಹುದು; ದೊಂಬಿ ಎಬ್ಬಿಸುತ್ತಿರುವ ಗುಂಪುಗಳನ್ನು ಚದುರಿಸಬಹುದು ಹಾಗೂ ಸಮಾಜದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಬಹುದು. ಆದರೆ ಅಧಿಕಾರ ಇದೆ ಎಂದ ಮಾತ್ರಕ್ಕೆ ಪೊಲೀಸರು ತಮಗಿಷ್ಟ ಬಂದಂತೆ ವರ್ತಿಸುವಂತಿಲ್ಲ. ಈ ಅಧಿಕಾರಗಳನ್ನು ಕಾನೂನಿನಲ್ಲಿ ಹೇಳಿದಂತೆಯೇ ಚಲಾಯಿಸಬೇಕು. ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡರೆ, ಅಥವಾ ಕರ್ತವ್ಯ ವಿಮುಖರಾದರೆ, ಅದು ಶಿಸ್ತಿನ ಉಲ್ಲಂಘನೆಯಾಗುತ್ತದೆ ಅಥವಾ ಕೆಲವೊಮ್ಮೆ ಶಿಕ್ಷಾರ್ಹ ಅಪರಾಧವೂ ಆಗಬಹುದು. ಇದಕ್ಕಾಗಿ ಪೊಲೀಸರನ್ನು ದಂಡಿಸಬಹುದಾಗಿದೆ.

**4. ಸಂಪೂರ್ಣ ಭಾರತದಲ್ಲಿ ಒಂದೇ ಪೊಲೀಸ್ ಪಡೆ ಇದೆಯೇ?**

ಇಲ್ಲ. ಪ್ರತಿಯೊಂದು ರಾಜ್ಯದಲ್ಲಿಯೂ ಅದರದೇ ಆದ ಮತ್ತು ಅಲ್ಲಿಯ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟ ಪ್ರತ್ಯೇಕ ಪೊಲೀಸ್ ಪಡೆ ಇರುತ್ತದೆ. ಹಾಗಾಗಿ ದೇಶದಲ್ಲಿ ಅನೇಕ ಪೊಲೀಸ್ ಪಡೆಗಳಿವೆ. ಕೇಂದ್ರಾಡಳಿತ ಪ್ರದೇಶಗಳಾದ ದೆಹಲಿ, ಚಂಡೀಗಢ್, ಪುದುಚೇರಿ, ದಮನ್ ಮತ್ತು ದೀವ್, ಲಕ್ಷದ್ವೀಪ್, ದಾದ್ರ ಮತ್ತು ನಗರ್ ಹವೇಲಿ ಹಾಗೂ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಪೊಲೀಸ್ ಪಡೆಗಳು ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿವೆ.

**5. ಅರೆಸೈನಿಕ ಪಡೆಗಳೆಂದರೇನು?**

ಕೇಂದ್ರ ಮೀಸಲು ಪೊಲೀಸ್ ಪಡೆ, ಗಡಿ ಭದ್ರತಾ ಸಿಬ್ಬಂದಿ, ಅಸ್ಸಾಂ ರೈಫಲ್ಸ್, ಇಂಡೋ–ಟಿಬೆಟ್ ಗಡಿ ಪೊಲೀಸ್ ಮತ್ತು ರಾಷ್ಟ್ರೀಯ ಭದ್ರತಾ ಸಿಬ್ಬಂದಿಯನ್ನು ಕೇಂದ್ರ ಸರ್ಕಾರದಡಿಯಲ್ಲಿ ಸಶಸ್ತ್ರ ಪೊಲೀಸ್ ಪಡೆಗಳ ರೂಪದಲ್ಲಿ ರಚಿಸಲಾಗಿದೆ. ಸೇನಾ ಪಡೆಗಳಂತೆ ಈ ಬಲಗಳ ರಚನೆಯಾಗಿರುವುದರಿಂದ ಇವುಗಳನ್ನು ಅರ್ಧ ಸೈನಿಕ ಪಡೆಗಳೆಂದು ಕರೆಯಲಾಗುತ್ತದೆ. ಭಯೋತ್ಪಾದನೆ, ಆತಂಕವಾದ ಹಾಗೂ ಇತರೆ ಆಂತರಿಕ ಬಿಕ್ಕಟ್ಟುಗಳನ್ನು ಹತ್ತಿಕ್ಕುವ ಕೆಲಸದಲ್ಲಿ ಇವು ಪೊಲೀಸರಿಗೆ ಸಹಾಯ ಮಾಡುತ್ತವೆ.



**6. ಯಾರು ಬೇಕಾದರೂ ಪೊಲೀಸ್ ಅಧಿಕಾರಿಯಾಗಬಹುದೆ?**

ಹೌದು, ಯಾರು ಬೇಕಾದರೂ ಪೊಲೀಸ್ ಅಧಿಕಾರಿಯಾಗಬಹುದು. ಆದರೆ ಹುದ್ದೆಗಳಿಗೆ ಅನುಸಾರವಾಗಿ ನಿಗದಿಪಡಿಸಿರುವ ಷರತ್ತು, ನಿಯಮ ಹಾಗೂ ಕೆಲ ಅರ್ಹತೆಗಳನ್ನು ಹೊಂದಿರುವವರು ಮಾತ್ರ ಪೊಲೀಸ್ ಅಧಿಕಾರಿಯಾಗಲು ಸಾಧ್ಯ. ಉದಾಹರಣೆಗೆ ಪೊಲೀಸ್ ಪೇದೆಯಾಗಿ (ಕಾನ್ಸ್‌ಟೇಬಲ್) ಸೇರಬಯಸುವವರು ಕನಿಷ್ಠ ಪ್ರೌಢಶಾಲೆಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. ಸಬ್‌ಇನ್ಸ್‌ಪೆಕ್ಟರ್ ಹುದ್ದೆಗೆ ಸೇರಬಯಸುವವರು ಪದವೀಧರರಾಗಿರಬೇಕು.

**7. ನಾನು ಪೊಲೀಸ್ ಅಧಿಕಾರಿಯಾಗುವುದು ಹೇಗೆ?**

ಪೊಲೀಸ್ ಪಡೆಯಲ್ಲಿ ಮೂರು ಸ್ತರಗಳಲ್ಲಿ ಅಭ್ಯರ್ಥಿಗಳ ಭರ್ತಿಗೆ ಅವಕಾಶವಿದೆ. ರಾಜ್ಯ ಮಟ್ಟದಲ್ಲಿ ನೀವು ಪೊಲೀಸ್ ಪೇದೆಯಾಗಿ ಸೇರಿ ಉಪ ಪೊಲೀಸ್ ವರಿಷ್ಠಾಧಿಕಾರಿಯ (ಡಿ.ವೈ.ಎಸ್.ಪಿ.) ಹುದ್ದೆಯನ್ನು ತಲುಪಬಹುದು ಅಥವಾ ಸಬ್‌ಇನ್ಸ್‌ಪೆಕ್ಟರ್ ಹಂತದಲ್ಲಿ ಸೇರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹುದ್ದೆಯವರೆಗೂ ಬಡ್ತಿ ಹೊಂದಬಹುದು.

ಕಾನ್ಸ್‌ಟೇಬಲ್ ಮತ್ತು ಸಬ್‌ಇನ್ಸ್‌ಪೆಕ್ಟರ್ ಹುದ್ದೆಗೆ ಸೇರಬಯಸುವವರು ಲಿಖಿತ ಪ್ರವೇಶ ಪರೀಕ್ಷೆ ಬರೆಯಬೇಕು. ಅದರಲ್ಲಿ ಉತ್ತೀರ್ಣರಾದವರನ್ನು ದೈಹಿಕ ಪರೀಕ್ಷೆಗೆ ಆಹ್ವಾನಿಸಲಾಗುವುದು. ಅದರಲ್ಲಿ ಅರ್ಹತೆ ಪಡೆದವರನ್ನು ಸಂದರ್ಶನಕ್ಕೆ ಕರೆಯಲಾಗುವುದು. ಇದಾದ ನಂತರ ವೈದ್ಯಕೀಯ ಪರೀಕ್ಷೆ ನಡೆಸಿ ನಿಮ್ಮಲ್ಲಿ ಯಾವುದೇ ದೋಷವಿಲ್ಲ ಎಂದು ಕಂಡುಬಂದಲ್ಲಿ ಅಂತಿಮ ಆಯ್ಕೆ ಮಾಡಲಾಗುತ್ತದೆ.

ಐ.ಪೀ.ಎಸ್ ಅಧಿಕಾರಿಗಳನ್ನು ಕೇಂದ್ರ ಮಟ್ಟದಲ್ಲಿ ಆಯ್ಕೆ ಮಾಡಲಾಗುತ್ತದೆ. ಐ.ಪೀ.ಎಸ್ ಸೇವೆಗೆ ಸೇರ್ಪಡೆಯಾಗುವವರನ್ನು ಪ್ರಾರಂಭದಲ್ಲಿ ಸಹಾಯಕ ವರಿಷ್ಠಾಧಿಕಾರಿ ಇಲ್ಲವೆ ಸಹಾಯಕ ಆಯುಕ್ತರ ಹುದ್ದೆಗೆ ನೇಮಕ ಮಾಡಲಾಗುತ್ತದೆ.

**8. ಐ.ಪಿ.ಎಸ್. ಎಂದರೇನು?**

ಐ.ಪಿ.ಎಸ್. ಎಂದರೆ ಇಂಡಿಯನ್ ಪೋಲೀಸ್ ಸರ್ವೀಸ್ , ಅರ್ಥಾತ್ ಭಾರತೀಯ ಆರಕ್ಷಕ ಸೇವೆ. ಅಖಿಲ ಭಾರತ ಮಟ್ಟದ ಮೂರು ಸಾರ್ವಜನಿಕ ಸೇವೆಗಳಲ್ಲಿ ಇದೂ ಒಂದು. ಉಳಿದ ಎರಡು ಸೇವೆಗಳೆಂದರೆ ಭಾರತೀಯ ಆಡಳಿತ ಸೇವೆ (ಐ.ಎ.ಎಸ್) ಹಾಗೂ ಭಾರತೀಯ ವನ್ಯ ಸೇವೆ (ಐ.ಎಫ್.ಎಸ್). ಐ.ಪೀ.ಎಸ್ ಎಂಬುದು ಪೋಲೀಸ್ ಅಧಿಕಾರಿಗಳ ಒಂದು ಸಾಮಾನ್ಯ ಸಮೂಹವಾಗಿದ್ದು ಅದರಿಂದ ಸದಸ್ಯರನ್ನು ದೇಶದಾದ್ಯಂತ ಹಿರಿಯ ಪೋಲೀಸ್ ಹುದ್ದೆಗಳಿಗೆ ಆಯ್ಕೆ ಮಾಡಿ ಕಳುಹಿಸಲಾಗುತ್ತದೆ.

**9. ನಾನು ಐ.ಪಿ.ಎಸ್.ಗೆ ಸೇರುವುದು ಹೇಗೆ?**




ಪ್ರಥಮವಾಗಿ ನೀವು ಕೇಂದ್ರ ಲೋಕ ಸೇವಾ ಆಯೋಗವು ನಡೆಸುವ ಪ್ರಾಥಮಿಕ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ಈ ಪರೀಕ್ಷೆ ನಡೆಯುವ ದಿನಾಂಕ, ಸ್ಥಳ ಇತ್ಯಾದಿ ವಿವರಗಳನ್ನು ಸ್ಥಳೀಯ ಹಾಗೂ ರಾಷ್ಟ್ರಮಟ್ಟದ ದಿನಪತ್ರಿಕೆ ಮತ್ತು ನಿಯತಕಾಲಿಕೆಗಳಲ್ಲಿ ಪ್ರಕಟಿಸಲಾಗುವುದು. ಪ್ರಾಥಮಿಕ ಪರೀಕ್ಷೆಯಲ್ಲಿ ತೇರ್ಗಡೆ ಆದರೆ ನೀವು ಮುಖ್ಯ ಲಿಖಿತ ಪರೀಕ್ಷೆಯಲ್ಲಿ ಭಾಗವಹಿಸ ಬಹುದು. ಮುಖ್ಯ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆ ಆದರೆ ನಿಮ್ಮನ್ನು ಸಂದರ್ಶನಕ್ಕೆ ಕರೆಯಲಾಗುತ್ತದೆ. ಅದರಲ್ಲಿ ಆಯ್ಕೆಯಾದರೆ ನಿಮಗೆ ಯಾವ ಕೇಂದ್ರೀಯ ಸೇವೆ ಬೇಕೋ, ಅರ್ಥಾತ್, ವಿದೇಶ ಸೇವೆ, ಆಡಳಿತ ಸೇವೆ, ಪೋಲೀಸ್‌ಸೇವೆ, ವನ್ಯ ಸೇವೆ ಹಾಗೂ ಕಂದಾಯ ಸೇವೆ ಇತ್ಯಾದಿ, ಅದನ್ನು ಅಯ್ಕೆ ಮಾಡಿಕೊಳ್ಳಲು ಸೂಚಿಸಲಾಗುವುದು. ಅತ್ಯಂತ ಹೆಚ್ಚು ಅಂಕ ಗಳಿಸಿದಾಗ ಮಾತ್ರ ನೀವು ಕೋರಿದ ಸೇವೆ ದೊರೆಯುತ್ತದೆ. ಕಾರಣ ಸೇವೆಗೆ ಸೇರ್ಪಡೆಯಾಗುವುದು ನೀವು ಗಳಿಸಿರುವ ಅಂಕಗಳನ್ನು ಆಧರಿಸಿರುತ್ತದೆ.

**10. ಒಬ್ಬ ಐ.ಪಿ.ಎಸ್. ಅಧಿಕಾರಿಯಾಗಿ ನನಗೆ ಯಾವ ರೀತಿಯ ತರಬೇತಿ ದೊರೆಯುತ್ತದೆ?**

ಐ.ಪಿ.ಎಸ್. ಅಧಿಕಾರಿಯಾದರೆ ನಿಮಗೆ ಪ್ರಥಮವಾಗಿ ಮಸ್ಸೂರಿಯಲ್ಲಿರುವ ಲಾಲ್ ಬಹಾದ್ದೂರ್ ಶಾಸ್ತ್ರಿ ಆಡಳಿತ ತರಬೇತಿ ಸಂಸ್ಥೆಯಲ್ಲಿ (ಅಕಾಡೆಮಿ ಆಫ್ ಅಡ್ಮಿನಿಸ್ಟ್ರೇಷನ್) ತರಬೇತಿ ನೀಡಲಾಗುವುದು. ಇದಾದ ನಂತರ ಹೈದರಾಬಾದ್‌ನಲ್ಲಿರುವ ರಾಷ್ಟ್ರೀಯ ಪೋಲೀಸ್ ಅಕಾಡಮಿಯಲ್ಲಿ ತರಬೇತಿ ನೀಡಲಾಗುವುದು.

**11. ಇತರೆ ದರ್ಜೆಯ ಪೋಲೀಸ್ ಅಧಿಕಾರಿಗಳಿಗೆ ಯಾವ ರೀತಿಯ ತರಬೇತಿ ನೀಡಲಾಗುತ್ತದೆ?**

ಬಹುತೇಕ ರಾಜ್ಯಗಳಲ್ಲಿ ಐ.ಪೀ.ಎಸ್. ಅಲ್ಲದ ಪೋಲೀಸ್ ಅಧಿಕಾರಿಗಳಿಗೆ ಹಾಗೂ ಕಾನ್ಸ್‌ಟೇಬಲ್‌ಗಳಿಗೆ ತರಬೇತಿ ನೀಡುವ ಸಂಸ್ಥೆಗಳಿವೆ. ಪ್ರಾರಂಭಿಕ ತರಬೇತಿ ಮುಗಿಸಿದ ನಂತರ ಸೇವಾನಿರತ ಅಧಿಕಾರಿಗಳಿಗೆ ಅಗಾಗ್ಯೆ ಉನ್ನತ ಮಟ್ಟದ ತರಬೇತಿಯನ್ನು ನೀಡಲಾಗುತ್ತದೆ. ಇತರೆ ದರ್ಜೆಗಳ ಪೋಲೀಸ್ ಸಿಬ್ಬಂದಿಗೆ ದೈಹಿಕ ತರಬೇತಿ, ಶಸ್ತ್ರಾಸ್ತ್ರಗಳನ್ನು ಬಳಸುವುದು, ಪ್ರಥಮ ಚಿಕಿತ್ಸೆ, ದೊಂಬಿಯ ನಿಯಂತ್ರಣ ಹಾಗೂ ನಿರಾಯುಧರಾಗಿ ಕಾದಾಡಲು ತರಬೇತಿ ನೀಡಲಾಗುವುದು. ಇದರ ಜೊತೆಗೆ ಕ್ರಿಮಿನಲ್ ಕಾಯ್ದೆಗಳ ಬಗ್ಗೆ, ಅಪರಾಧಗಳ ತನಿಖೆ ನಡೆಸುವ ವಿಧಾನದ ಬಗ್ಗೆ, ದೊಂಬಿಗಳ ನಿಯಂತ್ರಣದ ಬಗ್ಗೆ ಮತ್ತು ತಮಗೆ ಎದುರಾಗುವ ವಿಶಿಷ್ಟ ಸಂದರ್ಭಗಳನ್ನು ನಿಭಾಯಿಸುವ ವಿಧಾನದ ಬಗ್ಗೆಯೂ ತರಬೇತಿ ನೀಡಲಾಗುವುದು.

**12. ನಮ್ಮ ದೇಶದಲ್ಲಿ ಎಷ್ಟು ಪೊಲೀಸ್ ಠಾಣೆಗಳಿವೆ?**
ನಮ್ಮ ದೇಶದಲ್ಲಿ 13,057 ಪೊಲೀಸ್ ಠಾಣೆಗಳಿವೆ.

**13. ನಮ್ಮಲ್ಲಿ ಸಾಕಷ್ಟು ಪೊಲೀಸ್ ಅಧಿಕಾರಿಗಳಿದ್ದಾರೆಯೇ?**
ಇಲ್ಲ. ವಿಶ್ವಸಂಸ್ಥೆಯ ಮಾನಕದ ಪ್ರಕಾರ ಪ್ರತಿ 1,00,000 ಜನಸಂಖ್ಯೆಗೆ ಸುಮಾರು 230 ಪೊಲೀಸ್ ಸಿಬ್ಬಂದಿ ಇರಬೇಕು. ಆದರೆ ಭಾರತದಲ್ಲಿರುವುದು ಪ್ರತಿ 1,00,000 ಜನಸಂಖ್ಯೆಗೆ 125 ಪೊಲೀಸ್ ಸಿಬ್ಬಂದಿ ಮಾತ್ರ. ವಿಶ್ವದಲ್ಲಿ ಇದು ಅತ್ಯಂತ ಕಡಿಮೆ ಪ್ರಮಾಣದ್ದಾಗಿರುತ್ತದೆ. ಅನೇಕ ಹುದ್ದೆಗಳು ಖಾಲಿ ಉಳಿದಿವೆ. ದೇಶದಾದ್ಯಂತ ಒಟ್ಟು 16.6 ಲಕ್ಷ ಹುದ್ದೆಗಳಿಗೆ ಮಂಜೂರಾತಿ ದೊರಕಿದ್ದರೂ ಕೇವಲ 14.2 ಲಕ್ಷ ಪೊಲೀಸ್ ಸಿಬ್ಬಂದಿ ಮಾತ್ರ ಸೇವೆಯಲ್ಲಿರುತ್ತಾರೆ. ಅಂದರೆ ಶೇಕಡ 14.2ರಷ್ಟು ಸಿಬ್ಬಂದಿಯ ಕೊರತೆಯಿದೆ. ಆದರೆ ಈ ಅಂಕಿ ಅಂಶಗಳು ಕೂಡ ಪೂರ್ಣ ಚಿತ್ರಣವನ್ನು ನೀಡುವುದಿಲ್ಲ. ಕಾರಣ ಸಣ್ಣ ಊರುಗಳಿಗೆ ಹೋಲಿಸಿದಾಗ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಹೆಚ್ಚು ಪೊಲೀಸ್ ಸಿಬ್ಬಂದಿ ಇರುತ್ತದೆ. ಅನೇಕ ಪೊಲೀಸ್ ಅಧಿಕಾರಿಗಳನ್ನು ಕೆಲವು ಗಣ್ಯ ವ್ಯಕ್ತಿಗಳ ಕಾವಲಾಗಿ ನೇಮಕ ಮಾಡಲಾಗುತ್ತದೆ. ಆಡಳಿತಾತ್ಮಕ ಕಾರ್ಯಗಳಿಗೆ ಹಾಗೂ ವಾಹನ ಸಂಚಾರ ನಿಯಂತ್ರಣಕ್ಕೆ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ನೇಮಿಸಲಾಗಿದ್ದು ಅಪರಾಧಗಳ ತಡೆಗೆ, ತನಿಖೆಗೆ ಮತ್ತು ಒಟ್ಟಾರೆ ಶಿಸ್ತು ಮತ್ತು ಕಾನೂನಿನ ಪರಿಪಾಲನೆಗೆ ಪೊಲೀಸ್ ಸಿಬ್ಬಂದಿಯ ಕೊರತೆ ಇದೆ.

**14. ಪೊಲೀಸ್ ಪಡೆಯಲ್ಲಿ ಮಹಿಳೆಯರು ಇದ್ದಾರೆಯೇ?**
ಹೌದು, ಇದ್ದಾರೆ. ಆದರೆ ಅವರ ಸಂಖ್ಯೆ ಶೇಕಡ 5ಕ್ಕಿಂತ ಕಡಿಮೆ ಇದೆ.

**15. ಮಹಿಳಾ ಪೊಲೀಸ್ ಸಿಬ್ಬಂದಿಯ ಕರ್ತವ್ಯಗಳು ವಿಭಿನ್ನವೇ?**
ಇಲ್ಲ. ಕಾನೂನು ಮತ್ತು ನಿಯಮಗಳ ಪ್ರಕಾರ ಪುರುಷ ಹಾಗೂ ಮಹಿಳಾ ಪೊಲೀಸ್ ಮಧ್ಯೆ ಯಾವುದೇ ವ್ಯತ್ಯಾಸವಿಲ್ಲ. ಅವರಿಬ್ಬರೂ ಒಂದೇ ರೀತಿಯ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಆದರೆ ಮಹಿಳಾ ಪೊಲೀಸ್ ಠಾಣೆಗೆ ಮಹಿಳಾ ಪೊಲೀಸರನ್ನೇ ನೇಮಕ ಮಾಡಲಾಗುತ್ತದೆ.



**16. ಪೊಲೀಸ್ ಸೇವೆಯಲ್ಲಿ ವಿಶೇಷ ಮೀಸಲಾತಿಗೆ ಅವಕಾಶವಿದೆಯೇ?**

ಹೌದು. ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗೆ ಶೇಕಡ 13.7 ಮತ್ತು ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳಿಗೆ ಶೇಕಡ 8.7 ಸ್ಥಾನಗಳನ್ನು ಮೀಸಲು ಇಡಲಾಗಿದೆ. ಈ ವರ್ಗಗಳಿಗೆ ಸೇರಿದವರನ್ನು ಆಯ್ಕೆ ಮಾಡಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಿಯಮಗಳನ್ನು ರಚಿಸಿವೆ. ಆದರೆ ಅಲ್ಪಸಂಖ್ಯಾತರಿಗೆ ಅಥವಾ ಮಹಿಳೆಯರಿಗೆ ಯಾವುದೇ ಪ್ರತ್ಯೇಕ ಮೀಸಲಾತಿ ಇಲ್ಲ. ಪೊಲೀಸ್ ಪಡೆಯಲ್ಲಿ ಶೇಕಡ 7.6 ಸಿಬ್ಬಂದಿ ಮುಸಲ್ಮಾನ ಜನಾಂಗಕ್ಕೆ ಸೇರಿದವರಾಗಿದ್ದಾರೆ.

**17. ಪೊಲೀಸ್ ಪಡೆಯಲ್ಲಿ ದಲಿತರು, ಮಹಿಳೆಯರು, ಮುಸಲ್ಮಾನರು, ಕ್ರೈಸ್ತರು, ಬುಡಕಟ್ಟು ಜನಾಂಗದವರು ಹಾಗೂ ಇತರರು ಏಕೆ ಇರಬೇಕು?**

ಪೊಲೀಸ್ ಪಡೆಯಲ್ಲಿ ಪುರುಷರು, ಮಹಿಳೆಯರು ಹಾಗೂ ಎಲ್ಲ ಜಾತಿ, ಮತ, ವರ್ಗ ಮತ್ತು ಪಂಗಡದವರ ಮಿಶ್ರಣ ಇರುವುದು ಅತ್ಯಾವಶ್ಯಕ. ಇದರಿಂದಾಗಿ ಪೊಲೀಸ್ ಸಿಬ್ಬಂದಿಗೆ ವಿಭಿನ್ನ ಸಮುದಾಯಗಳ ಜನರ ವರ್ತನೆ, ಸಂಸ್ಕೃತಿ ಮತ್ತು ಭಾವನೆಗಳನ್ನು ಉತ್ತಮವಾಗಿ ಅರ್ಥ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಅಷ್ಟೇ ಅಲ್ಲದೆ ಅವರ ಬಗೆಗಿನ ತಮ್ಮ ಪೂರ್ವಾಗ್ರಹಗಳನ್ನು ತ್ಯಜಿಸಲು ಸಾಧ್ಯವಾಗುತ್ತದೆ.



ಡಿ.ಜಿ.ಪಿ.

**18. ಒಬ್ಬ ವ್ಯಕ್ತಿ ಪೊಲೀಸ್ ಅಧಿಕಾರಿ ಹೌದೇ ಅಥವಾ ಅಲ್ಲವೇ ಎಂದು ನಾನು ಗುರುತಿಸುವುದು ಹೇಗೆ?**

ಪೊಲೀಸ್ ಅಧಿಕಾರಿಗಳಿಗೆ ಪ್ರತ್ಯೇಕವಾದ ಖಾಕಿ ಅಥವಾ ನೀಲಿ ಸಮವಸ್ತ್ರ, ಟೋಪಿ, ಬೆಲ್ಟ್ ಹಾಗೂ ಭುಜದ ಮೇಲೆ ಪಟ್ಟಿಗಳಿರುತ್ತವೆ. ಇವು ಅವರ ದರ್ಜೆಯನ್ನು ಹಾಗೂ ಯಾವ ಪಡೆಗೆ ಸೇರಿದವರು ಎಂಬುದನ್ನು ಸೂಚಿಸುತ್ತವೆ. ಪೊಲೀಸ್ ಅಧಿಕಾರಿಗಳು ತಮ್ಮ ಹೆಸರನ್ನು ಸೂಚಿಸುವ ಫಲಕವನ್ನು (ಟ್ಯಾಗ್) ಎದೆಯ ಮೇಲೆ ಧರಿಸಿರಬೇಕು.



ಐ.ಜಿ.ಪಿ.

**19. ಪೊಲೀಸ್ ಪಡೆಯಲ್ಲಿರುವ ವಿವಿಧ ದರ್ಜೆಗಳು ಯಾವುವು?**

ಪೊಲೀಸ್ ಸಿಬ್ಬಂದಿಯ ಶ್ರೇಣಿಯಲ್ಲಿ ಕಾನ್ಸ್‌ಟೇಬಲುಗಳ ದರ್ಜೆ ಎಲ್ಲಕ್ಕಿಂತ ಕೆಳಗಿನದ್ದು. ಇವರ ಮೇಲಧಿಕಾರಿಗಳು ಕ್ರಮವಾಗಿ ಹೆಡ್ ಕಾನ್ಸ್‌ಟೇಬಲ್, ಸಹಾಯಕ ಸಬ್‌ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್, ಇನ್ಸ್‌ಪೆಕ್ಟರ್, ಸಹಾಯಕ/ಉಪ ಪೊಲೀಸ್ ವರಿಷ್ಠಾಧಿಕಾರಿ, ಹೆಚ್ಚುವರಿ ಪೊಲೀಸ್ ಸೂಪರಿಂಟೆಂಡೆಂಟ್, ಪೊಲೀಸ್ ಸೂಪರಿಂಟೆಂಡೆಂಟ್, ಹಿರಿಯ ಪೊಲೀಸ್ ಸೂಪರಿಂಟೆಂಡೆಂಟ್, ಉಪ ಪೊಲೀಸ್ ಮಹಾ ನಿರೀಕ್ಷಕ, ಪೊಲೀಸ್ ಮಹಾ ನಿರೀಕ್ಷಕ, ಸಹಾಯಕ ಪೊಲೀಸ್ ಮಹಾನಿರ್ದೇಶಕ ಮತ್ತು ಇವರೆಲ್ಲರಿಗಿಂತಲೂ ಮೇಲೆ ಪೊಲೀಸ್ ಮಹಾನಿರ್ದೇಶಕರು ಇರುತ್ತಾರೆ.



ಡಿ.ಐ.ಜಿ.



ಎಸ್.ಎಸ್.ಪಿ.

**20. ಬೀಟ್ ಕಾನ್ಸ್‌ಟೇಬಲ್ ಎಂದರೇನು?**

ಆಂಗ್ಲ ಭಾಷೆಯಲ್ಲಿ ಬೀಟ್ ಎಂದರೆ "ಹೊಡೆಯುವುದು" ಎಂದು ಅರ್ಥ. ಹಾಗೆಂದ ಮಾತ್ರಕ್ಕೆ ಪೊಲೀಸರು ಯಾರನ್ನೂ ಹೊಡೆಯುವಂತಿಲ್ಲ. ಪೊಲೀಸರು ಯಾರನ್ನಾದರೂ ಬಂಧಿಸಲು ಬಂದಾಗ ಅವರಿಂದ ತಪ್ಪಿಸಿಕೊಳ್ಳಲು ಆತನು ಪ್ರಯತ್ನಿಸಿದರೆ ಮಾತ್ರ ಪೊಲೀಸರು ಬಲಪ್ರಯೋಗ ಮಾಡಬಹುದು. ಒಂದು ನಿರ್ದಿಷ್ಟವಾದ ಜಾಗ ಯಾ ಮಾರ್ಗವನ್ನು ಗುರುತಿಸಿ ಒಬ್ಬ ಪೊಲೀಸ್ ಕಾನ್ಸ್‌ಟೇಬಲ್ಲನ್ನು ಅಥವಾ ಕೆಲವೊಮ್ಮೆ ಇಬ್ಬರನ್ನು ಆ ಸ್ಥಳದಲ್ಲಿ ಸಂಶಯಾಸ್ಪದ ವಾತಾವರಣವಿದೆಯೇ ಇಲ್ಲವೇ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಲು ನೇಮಕ ಮಾಡಲಾಗುತ್ತದೆ. ಅವರನ್ನು ಬೀಟ್ ಕಾನ್ಸ್‌ಟೇಬಲ್ ಎಂದು ಕರೆಯುತ್ತಾರೆ. ಕೆಲವೊಮ್ಮೆ ಇವರು ರಾತ್ರಿ ಹೊತ್ತಿನಲ್ಲಿ ತಮ್ಮ ಲಾಠಿಯಿಂದ ಶಬ್ದ ಮಾಡುತ್ತಾರೆ. ಅವರು ಗಸ್ತು ತಿರುಗುತ್ತಿದ್ದಾರೆ ಎಂಬುದು ಇದರ ಅರ್ಥ.

**21. ಎಲ್ಲ ಪೊಲೀಸ್ ಅಧಿಕಾರಿಗಳು ಎಲ್ಲಾ ಕೆಲಸಗಳನ್ನೂ ಮಾಡುವರೇ?**

ಇಲ್ಲ. ಪೊಲೀಸ್ ಕಾನ್ಸ್‌ಟೇಬಲ್ಲಿನಿಂದ ಹಿಡಿದು ಡಿ.ಜಿ.ಪಿಯವರೆಗೆ ವಿವಿಧ ಹಂತಗಳ ಅಧಿಕಾರಿಗಳಿಗೆ ನಿರ್ದಿಷ್ಟ ಕರ್ತವ್ಯಗಳನ್ನು ನಿಗದಿಪಡಿಸಲಾಗುತ್ತದೆ. ಈ ಕೆಲಸಗಳ ವಿವರಗಳು ಪ್ರತಿಯೊಂದು ರಾಜ್ಯವು ತಯಾರಿಸುವ ಪೊಲೀಸ್ ಕೈಪಿಡಿಯಲ್ಲಿ (ಮಾನ್ಯುವಲ್) ದಾಖಲಾಗಿರುತ್ತವೆ. ಹಿರಿಯ ಶ್ರೇಣಿಯ ಅಧಿಕಾರಿಗೆ ನಿಗದಿಪಡಿಸಿರುವ ಕೆಲಸಕಾರ್ಯಗಳನ್ನು ಕಿರಿಯ ಶ್ರೇಣಿಯ ಅಧಿಕಾರಿ ಮಾಡುವಂತಿಲ್ಲ. ಉದಾಹರಣೆಗೆ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಸೂಪರಿಂಟೆಂಡೆಂಟ್‌ಗೆ ನಿಗದಿಪಡಿಸಿರುವ ಕೆಲಸ ಕಾರ್ಯಗಳನ್ನು ಮಾಡುವಂತಿಲ್ಲ. ಆದರೆ ಕಿರಿಯ ಅಧಿಕಾರಿಯು ಮಾಡಬಹುದಾದ ಯಾವುದೇ ಕಾರ್ಯವನ್ನು ಹಿರಿಯ ಅಧಿಕಾರಿಯು ಮಾಡಬಹುದು.

**22. ಒಬ್ಬ ಸಂಚಾರಿ ಪೊಲೀಸ್ ಅಧಿಕಾರಿಯು ನನ್ನನ್ನು ಸಂಚಾರಕ್ಕೆ ಸಂಬಂಧಪಡದ ಅಪರಾಧಕ್ಕಾಗಿ ನನ್ನನ್ನು ಬಂಧಿಸಬಹುದೆ?**

ಹೌದು. ಸಂಚಾರಿ ಪೊಲೀಸ್ ಅಧಿಕಾರಿಯೂ ಮೂಲಭೂತವಾಗಿ ಒಬ್ಬ ಪೊಲೀಸ್ ಅಧಿಕಾರಿ. ನೀವು ಯಾವುದೇ ರೀತಿಯ ಅಪರಾಧದಲ್ಲಿ ತೊಡಗಿದ್ದೀರಿ ಎಂದು ಕಂಡುಬಂದರೆ ಸಂಚಾರಿ ಪೊಲೀಸ್ ಅಧಿಕಾರಿ ಇತರೆ ಪೊಲೀಸ್ ಅಧಿಕಾರಿ ಇಲ್ಲವೇ ನಾಗರಿಕರಂತೆ ನಿಮ್ಮನ್ನು ಬಂಧಿಸಬಹುದು (ಪ್ರಶ್ನೆ 49 ನೋಡಿ).

**23. ಸಿ.ಐ.ಡಿ. ಎಂದರೇನು?**

ಸಿ.ಐ.ಡಿ. (ಕ್ರಿಮಿನಲ್ ಇನ್ವೆಸ್ಟಿಗೇಷನ್ ಡಿಪಾರ್ಟ್ಮೆಂಟ್) ಎಂದರೆ ಅಪರಾಧ ತನಿಖಾ ವಿಭಾಗ. ಇದನ್ನು ಕೆಲವೊಮ್ಮೆ ವಿಶೇಷ ಶಾಖೆ ಅಥವ ತನಿಖಾ ವಿಭಾಗ ಎಂದೂ ಕರೆಯುವುದುಂಟು. ಇದು ರಾಜ್ಯ ಪೊಲೀಸ್ ಇಲಾಖೆಯ ತನಿಖಾ ವಿಭಾಗ. ಮೋಸ, ವಂಚನೆಯಂತಹ ಗಂಭೀರ ಸ್ವರೂಪದ ಅಪರಾಧಗಳು, ಗುಂಪುಗಳ ನಡುವಿನ ಘರ್ಷಣೆ ಹಾಗೂ ಅಂತರ್ರಾಜ್ಯ ಅಪರಾಧಗಳ ತನಿಖೆ ಮಾಡುವ ಜವಾಬ್ದಾರಿಯನ್ನು ಈ ಇಲಾಖೆಗೆ ವಹಿಸಲಾಗುತ್ತದೆ.



**24. ಸಿ.ಐ.ಡಿ. ಎಂಬುದು ಪೊಲೀಸರಿಗಿಂತ ಭಿನ್ನವೇ?**
ಇಲ್ಲ, ಇವೆರಡರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಪೊಲೀಸ್ ಅಧಿಕಾರಿಗಳನ್ನೇ ಸಿ.ಐ.ಡಿ. ಶಾಖೆಗೆ ಆಯ್ಕೆಮಾಡಲಾಗುತ್ತದೆ.

**25. ಪೊಲೀಸ್ ಸಿಬ್ಬಂದಿಯನ್ನು ಯಾರು ನಿಯಂತ್ರಿಸುತ್ತಾರೆ?**
ಪ್ರತಿಯೊಂದು ರಾಜ್ಯದಲ್ಲಿಯೂ ಒಬ್ಬ ಪೊಲೀಸ್ ಮುಖ್ಯಸ್ಥರಿರುತ್ತಾರೆ. ಅವರನ್ನು ಪೊಲೀಸ್ ಮಹಾನಿರ್ದೇಶಕ ಅಥವಾ ಡಿ.ಜಿ.ಪಿ. ಎಂದು ಕರೆಯುತ್ತಾರೆ. ಅವರು ಪೊಲೀಸ್ ಇಲಾಖೆಯ ಅತ್ಯಂತ ಹಿರಿಯ ಅಧಿಕಾರಿ. ಆದರೆ ಅವರೂ ಸಹ ಸರ್ಕಾರಕ್ಕೆ ಅಧೀನರು. ರಾಜ್ಯ ಅಥವ ಕೇಂದ್ರ ಗೃಹ ಖಾತೆಯ ಸಚಿವರು ಡಿ.ಜಿ.ಪಿ.ಯ ಮೇಲಧಿಕಾರಿ.

**26. ಪೊಲೀಸ್ ಮುಖ್ಯಾಧಿಕಾರಿ ಮಂತ್ರಿಗಳಿಗೆ ಏಕೆ ಅಧೀನರಾಗಿರಬೇಕು?**
ಪ್ರತಿಯೊಬ್ಬ ನಾಗರಿಕನೂ ಸುರಕ್ಷಿತವಾಗಿ ಜೀವನ ಸಾಗಿಸುವಂತೆ ನೋಡಕೊಳ್ಳಬೇಕಾದುದು ಸರ್ಕಾರದ ಜವಾಬ್ದಾರಿ. ನಾಗರಿಕರು ತಮ್ಮ ಹಾಗೂ ತಮ್ಮ ಪರಿವಾರದವರ ಬಗ್ಗೆಯಾಗಲಿ ಅಥವಾ ತಮ್ಮ ಆಸ್ತಿಪಾಸ್ತಿಯ ಭದ್ರತೆಯ ಬಗ್ಗೆಯಾಗಲಿ ಚಿಂತಿಸುವ ಅಗತ್ಯವಿರಬಾರದು. ಸರ್ಕಾರ ಈ ಜವಾಬ್ದಾರಿಯನ್ನು ಪೊಲೀಸರಿಗೆ ನೀಡುತ್ತದೆ. ಆದುದರಿಂದ ಪೊಲೀಸ್ ಸರ್ಕಾರಕ್ಕೆ ಅಧೀನವಾಗಿರಬೇಕು. ತಾವು ಯಾವ ರೀತಿ ಕಾರ್ಯನಿರ್ವಹಿಸುತ್ತಿದ್ದೇವೆ ಎಂಬುದನ್ನು ಪೊಲೀಸರು ಸರ್ಕಾರಕ್ಕೆ ಮನವರಿಕೆಮಾಡಿಕೊಡಬೇಕು. ಅದೇ ರೀತಿ ಸರ್ಕಾರವೂ ಸಹ ಪೊಲೀಸರು ನಿಷ್ಠಾವಂತರಾಗಿ, ಕಾನೂನಿನ ಅಡಿಯಲ್ಲಿಯೇ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಂತೆ ನೋಡಿಕೊಳ್ಳಬೇಕು. ಪೊಲೀಸರು ತಮಗೆ ಇಷ್ಟ ಬಂದಂತೆ ವರ್ತಿಸುವುದನ್ನು ತಡೆಗಟ್ಟುವುದು ಸರ್ಕಾರದ ಜವಾಬ್ದಾರಿ.



**27. ಪೊಲೀಸ್ ಇಲಾಖೆಗೆ ಯಾರು ಹಣ ನೀಡುತ್ತಾರೆ?**
ಪೊಲೀಸ್ ಸೇವೆಗೆ ತಗಲುವ ಎಲ್ಲ ಖರ್ಚು ವೆಚ್ಚಗಳನ್ನು ನಾಗರಿಕರು ಪಾವತಿಸುವ ತೆರಿಗೆ ಹಣದಿಂದಲೇ ಭರಿಸಲಾಗುತ್ತದೆ. ಪೊಲೀಸ್ ಸಿಬ್ಬಂದಿಯ ಸಂಬಳವನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಆಯವ್ಯಯ ಪಟ್ಟಿಯಿಂದ (ಬಜೆಟ್) ವಿತರಿಸಲಾಗುತ್ತದೆ. ಒಟ್ಟಿನಲ್ಲಿ ಪೊಲೀಸ್ ವ್ಯವಸ್ಥೆಯ ಖರ್ಚು ವೆಚ್ಚಗಳು ತೆರಿಗೆದಾರರ ಜೇಬನ್ನೇ ಅವಲಂಬಿಸಿರುತ್ತವೆ.

**28. ಪೊಲೀಸ್ ಇಲಾಖೆಗೆ ಹಣ ಯಾವ ಮೂಲದಿಂದ ಬರುತ್ತದೆ?**
ಮೇಲೆ ಹೇಳಿದಂತೆ ಪ್ರತಿಯೊಂದು ರಾಜ್ಯ ಸರ್ಕಾರವೂ ತನ್ನ ಬಜೆಟ್ಟಿನಲ್ಲಿ ಪೊಲೀಸ್ ಇಲಾಖೆಗೆ ಪ್ರತ್ಯೇಕವಾಗಿ ಹಣವನ್ನು ಮೀಸಲು ಇಡುತ್ತದೆ. ಇದರಿಂದ ಪೊಲೀಸರಿಗೆ ಹಣ ವಿನಿಯೋಗವಾಗುತ್ತದೆ.

**29. ಬಜೆಟ್ಟನ್ನು ಯಾರು ಮಂಜೂರು ಮಾಡುತ್ತಾರೆ ಹಾಗೂ ಅದರಲ್ಲಿ ಅಧಿಕಾಂಶವು ಯಾವುದಕ್ಕೆ ಖರ್ಚಾಗುತ್ತದೆ?**
ರಾಜ್ಯ ವಿಧಾನ ಸಭೆಯು ಬಜೆಟ್ಟನ್ನು ಅನುಮೊದಿಸುತ್ತದೆ. ಕೇಂದ್ರಾಡಳಿತ ಪ್ರದೇಶಗಳ ಬಜೆಟ್ಟನ್ನು ಲೋಕಸಭೆ ಅಂಗೀಕರಿಸುತ್ತದೆ. ಕರಡು ಮುಂಗಡ ಪತ್ರವನ್ನು ಪೊಲೀಸ್ ಮಹಾನಿರ್ದೇಶಕರ ಕಾರ್ಯಾಲಯದ ಆಡಳಿತ ವಿಭಾಗವು ತಯಾರಿಸುತ್ತದೆ. ನಂತರ ಅದನ್ನು ಪೊಲೀಸ್ ಮಹಾನಿರ್ದೇಶಕರ ಅನುಮೋದನೆಗೆ ಕಳುಹಿಸಲಾಗುತ್ತದೆ. ಅಲ್ಲಿಂದ ಅದನ್ನು ಗೃಹ ಖಾತೆಗೆ ಕಳುಹಿಸಲಾಗುತ್ತದೆ. ಆರ್ಥಿಕ ಇಲಾಖೆಯು ಮುಂಗಡ ಪತ್ರವನ್ನು ಅನುಮೋದಿಸಿ ರಾಜ್ಯದ ಬಜೆಟ್ಟಿನ ಒಂದು ಅಂಗವಾಗಿ ಪರಿಗಣಿಸಿ ಸಚಿವ ಸಂಪುಟಕ್ಕೆ ಕಳುಹಿಸುತ್ತದೆ. ಅಲ್ಲಿಂದ ಅದನ್ನು ವಿಧಾನ ಸಭೆಯಲ್ಲಿ ಚರ್ಚೆಗೆ ಮಂಡಿಸಲಾಗುತ್ತದೆ. ಚರ್ಚೆ ಆದ ನಂತರ ಪೊಲೀಸ್ ಬಜೆಟ್

ಅಂತಿಮ ಸ್ವರೂಪ ಹೊಂದಿ ಅಂಗೀಕಾರ ಪಡೆಯುತ್ತದೆ. ಪೊಲೀಸ್ ಬಜೆಟ್ಟಿನಲ್ಲಿ ಹೆಚ್ಚಿನ ಅಂಶ ಸಿಬ್ಬಂದಿಯ ಸಂಬಳ ಹಾಗೂ ಭತ್ಯೆಗೆ ಖರ್ಚಾಗುತ್ತದೆ. ಉಳಿದ ಖರ್ಚಿನ ಅಂಶಗಳೆಂದರೆ ತರಬೇತಿ, ತನಿಖೆ, ಮೂಲಭೂತ ಸೌಕರ್ಯಗಳು, ಪೊಲೀಸ್ ವಸತಿ ಇತ್ಯಾದಿ.

**30. ಪೊಲೀಸ್ ಇಲಾಖೆಗೆ ಮಂಜೂರಾದ ಹಣ ಸದ್ವಿನಿಯೋಗವಾಗುತ್ತಿದೆಯೇ ಎಂದು ತಿಳಿಯುವುದು ಹೇಗೆ?**

ಪೊಲೀಸ್ ಇಲಾಖೆಯ ಖರ್ಚು ವೆಚ್ಚಗಳನ್ನು ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಅವರು ವರ್ಷಕ್ಕೊಮ್ಮೆ ಲೆಕ್ಕಪರಿಶೋಧನೆಗೆ (ಆಡಿಟ್) ಒಳಪಡಿಸುತ್ತಾರೆ. ಪೊಲೀಸ್ ಇಲಾಖೆಯ ಲೆಕ್ಕಪತ್ರ ಹಾಗೂ ಆಡಿಟರ್ ಜನರಲ್ ಅವರ ವರದಿಯನ್ನು ಲೋಕಸಭೆ ಮತ್ತು ರಾಜ್ಯ ವಿಧಾನಸಭೆಯಲ್ಲಿ ಮಂಡಿಸಲಾಗುತ್ತದೆ. ಅದಾದ ನಂತರ ಲೆಕ್ಕಪತ್ರದ ವಿವರವನ್ನು ಪೊಲೀಸ್/ಗೃಹ ಖಾತೆಯ ಅಂತರ್ಜಾಲದಲ್ಲಿ (ವೆಬ್ ಸೈಟ್) ಸೇರಿಸಲಾಗುವುದು. ಲೋಕಸಭೆಯ ಗ್ರಂಥಾಲಯದಲ್ಲೂ ಅದನ್ನು ಇಡಲಾಗುತ್ತದೆ. ನೀವು ಮಾಹಿತಿ ಹಕ್ಕು ಕಾನೂನು *2005*ರ ಪ್ರಕಾರ ಅರ್ಜಿ ಸಲ್ಲಿಸಿ ಪೊಲೀಸ್ ಇಲಾಖೆಯ ಖರ್ಚುವೆಚ್ಚಗಳ ವಿವರಗಳನ್ನು ಪಡೆಯಬಹುದು. ಪೊಲೀಸ್ ಇಲಾಖೆಯ ಎಲ್ಲ ಖರ್ಚುವೆಚ್ಚಗಳಿಗೂ ನೀವು ಪಾವತಿಸುವ ತೆರಿಗೆಯ ಹಣವೇ ಆಧಾರವಾಗಿರುವುದರಿಂದ ನೀವು ಅದರ ಸದ್ವಿನಿಯೋಗದ ಬಗ್ಗೆ ಆಸಕ್ತಿ ವಹಿಸಬೇಕು.




**31. ಪೊಲೀಸರನ್ನು ನಿಯಂತ್ರಿಸಲು ಯಾವ ಕಾಯ್ದೆಗಳಿವೆ?**

ಬಹಳಷ್ಟು ರಾಜ್ಯಗಳಲ್ಲಿ 1861ನೇ ಇಸ್ವಿಯ ಪೊಲೀಸ್ ಕಾಯ್ದೆ ಚಾಲ್ತಿಯಲ್ಲಿದೆ. ಕೆಲವು ರಾಜ್ಯಗಳು ತಮ್ಮದೇ ಆದ ಪೊಲೀಸ್ ಕಾಯ್ದೆಯನ್ನು ಹೊಂದಿವೆಯಾದರೂ ಅವೆಲ್ಲವೂ ಹಳೆಯ ಪೊಲೀಸ್

ಕಾಯ್ದೆಯನ್ನೇ ಆಧರಿಸಿವೆ. ಇತ್ತೀಚೆಗೆ ಕೆಲವು ರಾಜ್ಯಗಳು ತಮ್ಮ ಪೊಲೀಸ್ ಕಾಯ್ದೆಯನ್ನು ಪರಿಷ್ಕರಿಸಿವೆ ಅಥವಾ ಹೊಸ ಪೊಲೀಸ್ ಕಾಯ್ದೆಯನ್ನು ರಚಿಸಿವೆ. ದಂಡ ಪ್ರಕ್ರಿಯೆ, ಭಾರತೀಯ ದಂಡ ಸಂಹಿತೆ ಹಾಗ ಇತರೆ ಸ್ಥಳೀಯ ಕಾನೂನುಗಳು ಪೊಲೀಸರ ಕೆಲಸ ಕಾರ್ಯಗಳನ್ನು ನಿಯಂತ್ರಿಸುವ ಕಾಯ್ದೆಗಳು.

**32. ದಂಡ ಪ್ರಕ್ರಿಯೆ ಸಂಹಿತೆ ಹಾಗೂ ಭಾರತೀಯ ದಂಡ ಸಂಹಿತೆ ಎಂದರೇನು?**

ದಂಡ ಪ್ರಕ್ರಿಯೆ ಸಂಹಿತೆಯನ್ನು ಸಾಮಾನ್ಯವಾಗಿ ಕೋಡ್ ಆಫ್ ಕ್ರಿಮಿನಲ್ ಪ್ರೊಸೀಜರ್ ಅಥವಾ ಸಿ.ಆರ್.ಪಿ.ಸಿ ಎಂದು ಸಂಭೋದಿಸಲಾಗುತ್ತದೆ. ಅಪರಾಧ ಸಂಭವಿಸಿದಾಗ ಅದರ ತನಿಖೆಗಾಗಿ ಪೊಲೀಸರು ಎರಡು ರೀತಿಯ ಪ್ರಕ್ರಿಯೆಗಳನ್ನು ಅನುಸರಿಸಬೇಕು. ಮೊದಲನೆಯದು ಅಪರಾಧಕ್ಕೆ ಗುರಿಯಾದವರಿಗೆ ಸಂಬಂಧಪಟ್ಟ ಪ್ರಕ್ರಿಯೆ, ಮತ್ತೊಂದು ಆರೋಪಿಗಳಿಗೆ ಸಂಬಂಧಪಟ್ಟದ್ದು. ಈ ಎರಡೂ ಪ್ರಕ್ರಿಯೆಗಳನ್ನು ದಂಡ ಪ್ರಕ್ರಿಯೆ ಸಂಹಿತೆಯಲ್ಲಿ ವಿವರಿಸಲಾಗಿದೆ. ಭಾರತೀಯ ದಂಡ ಸಂಹಿತೆಯನ್ನು ಇಂಡಿಯನ್ ಪೀನಲ್ ಕೋಡ್ (ಐ.ಪಿ.ಸಿ.) ಎಂದು ಕರೆಯಲಾಗುತ್ತದೆ. ಮಾನವರ ಕೆಲವು ಪ್ರಕಾರಗಳ ವರ್ತನೆಗಳು ಕಾನೂನಿನ ದೃಷ್ಟಿಯಲ್ಲಿ ವರ್ಜ್ಯ. ಯಾವುದೇ ವ್ಯಕ್ತಿಯು ಕಾನೂನಿಗೆ ವಿರುದ್ಧವಾಗಿ ವರ್ತಿಸಿದರೆ ಅದರ ಪರಿಣಾಮವನ್ನು ಅನುಭವಿಸಲೇಬೇಕು. ಕಾನೂನು ಬಾಹಿರ ವರ್ತನೆಗಳನ್ನು 'ಅಪರಾಧಗಳು' ಎಂದು ಪರಿಗಣಿಸಲಾಗುತ್ತದೆ. ಅಪರಾಧವೆಸಗಿದ ಪರಿಣಾಮವಾಗಿ ಅಪರಾಧಿಯು 'ಶಿಕ್ಷೆ'ಯನ್ನು ಅನುಭವಿಸಬೇಕಾಗುತ್ತದೆ. ಕಾನೂನು ಬಾಹಿರ ವರ್ತನೆಗಳ, ಎಂದರೆ, ಅಪರಾಧಗಳ ಪಟ್ಟಿ ಮತ್ತು ಪ್ರತಿಯೊಂದು ಅಪರಾಧಕ್ಕೆ ದೊರೆಯತಕ್ಕ ಶಿಕ್ಷೆಗಳ ವಿವರಗಳನ್ನು ಪ್ರಮುಖವಾಗಿ ಐ.ಪೀ.ಸೀ.ಯಲ್ಲಿ ಅಳವಡಿಸಲಾಗಿದೆ.

**33. ಪೊಲೀಸ್ ಕಾಯ್ದೆ ಏನು ಹೇಳುತ್ತದೆ?**

ಪೊಲೀಸರು ಏನನ್ನು ಮಾಡಬಹುದು, ಏನನ್ನು ಮಾಡಬಾರದು, ಪೊಲೀಸ್ ವ್ಯವಸ್ಥೆ ಹೇಗಿರಬೇಕು, ಯಾವ ಯಾವ ಹುದ್ದೆಗಳು ಇರಬೇಕು, ಪೊಲೀಸ್ ವ್ಯವಸ್ಥೆಯ ಮೇಲ್ವಿಚಾರಣೆಯನ್ನು ಯಾರು ಮಾಡಬೇಕು, ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಕ ಮಾಡುವವರು ಯಾರು, ತಪ್ಪಿತಸ್ಥ ಸಿಬ್ಬಂದಿಯ ವಿರುದ್ದ ಶಿಸ್ತಿನ ಕ್ರಮ ಕೈಗೊಳ್ಳುವವರು ಯಾರು, ಪೊಲೀಸರು ಅನುಸರಿಸಬೇಕಾದ ನಿಯಮಗಳು ಯಾವುವು, ಇತ್ಯಾದಿ ವಿವರಗಳು ಪೊಲೀಸ್ ಕಾಯ್ದೆಯಲ್ಲಿ ಇರುತ್ತವೆ. ಇಷ್ಟೇ ಅಲ್ಲದೆ ಪೊಲೀಸ್ ಕಾಯ್ದೆಯಲ್ಲಿ ಜನ ಸಾಮಾನ್ಯರು ಕೂಡ ಅನುಸರಿಸಬೇಕಾದ ಕೆಲವು ನಿಯಮಗಳನ್ನು ವಿವರಿಸಲಾಗಿರುತ್ತದೆ.

ಕಾನೂನನ್ನು ಎತ್ತಿ ಹಿಡಿಯುತ್ತೇವೆ



**34. ಸಾರ್ವಜನಿಕರಿಂದ ಆಗಬಹುದಾದ ಅಪರಾಧಗಳನ್ನು ಪೊಲೀಸ್ ಕಾಯ್ದೆಯಲ್ಲಿ ಸೇರಿಸಿರುವ ಉದ್ದೇಶವೇನು?**

ಸಾರ್ವಜನಿಕರು ಎಸಗುವ ಕೆಲವು ಅಪರಾಧಗಳನ್ನು ತಡೆಗಟ್ಟಲು ಈ ಕ್ರಮ ಕೈಗೊಳ್ಳಲಾಗಿದೆ. ರಸ್ತೆ ಹಾಗೂ ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿಡುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿ. ಸಾರ್ವಜನಿಕ ಸ್ಥಳಗಳನ್ನು ಸುರಕ್ಷಿತವಾಗಿ ಮತ್ತು ರೋಗಮುಕ್ತವಾಗಿ ಇರುವಂತೆ ನಿಗಾ ವಹಿಸುವುದು ಕೂಡ ಸಾರ್ವಜನಿಕರ ಕರ್ತವ್ಯ.

ಉದಾಹರಣೆಗೆ ಯಾವುದೇ ಒಬ್ಬ ವ್ಯಕ್ತಿ: ರಸ್ತೆಗಳ ಮೇಲೆ ಪ್ರಾಣಿಗಳನ್ನು ಬೇಕಾಬಿಟ್ಟಿಯಾಗಿ ಅಲೆದಾಡಲು ಬಿಟ್ಟರೆ, ಅಥವಾ ಪಶುವಧೆ ಮಾಡಿದರೆ, ಅಥವಾ ಅವುಗಳೊಂದಿಗೆ ಕ್ರೂರವಾಗಿ ವರ್ತಿಸಿದರೆ, ಅಥವಾ ಯಾರಾದರೂ ಸಾರ್ವಜನಿಕ ರಸ್ತೆಯನ್ನು ಅತಿಕ್ರಮಿಸಿದರೆ, ಅಥವಾ ಜನರ ಓಡಾಟಕ್ಕೆ ಅಡ್ಡಿಪಡಿಸಿದರೆ ಯಾ ತಡೆಗಟ್ಟಿದರೆ, ಅಥವಾ ಪರವಾನಗಿ ಇಲ್ಲದೆ ರಸ್ತೆಯ ಬದಿಯಲ್ಲಿ ವ್ಯಾಪಾರ ನಡೆಸಿದರೆ, ಅಥವಾ ಯಾರಾದರೂ ಮಾದಕ ಪಾನೀಯಗಳನ್ನು ಸೇವಿಸಿ ಸಾರ್ವಜನಿಕ ಸ್ಥಳಗಳಲ್ಲಿ ಅನುಚಿತವಾಗಿ ವರ್ತಿಸಿದರೆ, ಅಥವಾ ಬಾವಿ ಮುಂತಾದ ಅಪಾಯಕಾರಿ ಸ್ಥಳಗಳಿಗೆ ಸೂಕ್ತ ಭದ್ರತೆ ಒದಗಿಸದಿದ್ದರೆ, ಈ ಪರಿಯ ಅಪರಾಧಗಳಿಗೆ ಆತನನ್ನು ಪೊಲೀಸರು ಕೂಡಲೆ ಬಂಧಿಸಬಹುದು.

**35. ಕಾನೂನಿನ ಆಡಳಿತ ಎಂದರೇನು?**

ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಮೇಲು, ಕೀಳು, ಸಿರಿವಂತ, ಬಡವ, ಸ್ತ್ರೀ ಯಾ ಪುರುಷ ಇತ್ಯಾದಿ ಯಾವ ಭೇದಭಾವವೂ ಇಲ್ಲದೆ ಎಲ್ಲರೂ ಸಂವಿಧಾನದ ಅಡಿಯಲ್ಲಿ ರಚಿಸಿರುವ



ಕಾನೂನನ್ನು ಗೌರವಿಸಿ ಅದಕ್ಕೆ ತಕ್ಕಂತೆ ನಡೆದುಕೊಳ್ಳುವುದಕ್ಕೆ ಕಾನೂನಿನ ಆಡಳಿತ (ರೂಲ್ ಆಫ್ ಲಾ) ಎನ್ನುತ್ತಾರೆ. ಯಾರೊಬ್ಬರೂ ಕಾನೂನಿಗಿಂತ ಮಿಗಿಲಾದವರಲ್ಲ ಎಂಬುದು ಇದರ ಅರ್ಥ. ಆದುದರಿಂದ ಪೊಲೀಸರು ಇಡುವ ಪ್ರತಿಯೊಂದು ಹೆಜ್ಜೆಯೂ ಕೂಡ ನ್ಯಾಯ ಸಮ್ಮತವಾಗಿರಬೇಕು. ಇಲ್ಲವಾದಲ್ಲಿ ಪೊಲೀಸರೂ ಸಹ ಕಾನೂನಿನ ಪ್ರಕಾರ ಕ್ರಮಕ್ಕೆ ಒಳಗಾಗುತ್ತಾರೆ. ದೇಶದಲ್ಲಿ ರಚನೆಯಾಗುವ ಕಾನೂನುಗಳು ತಾರ್ಕಿಕವಾಗಿರಬೇಕು, ನ್ಯಾಯೋಚಿತವಾಗಿರಬೇಕು ಹಾಗೂ ಎಲ್ಲರಿಗೂ ಸಮನಾಗಿ ಅನ್ವಯವಾಗುವಂತಿರಬೇಕು.

**36. ತಪ್ಪು ಮಾಡಿದ ಪೊಲೀಸರನ್ನು ಶಿಕ್ಷೆಗೆ ಗುರಿಪಡಿಸಬಹುದೇ?**
ಹೌದು. ತಪ್ಪು ಮಾಡಿದ ಜನಸಾಮಾನ್ಯರನ್ನು ಹೇಗೆ ದಂಡಿಸಲಾಗುತ್ತದೆಯೋ ಹಾಗೆಯೇ ಪೊಲೀಸರು ಕಾನೂನನ್ನು ಉಲ್ಲಂಘಿಸಿದರೆ ಅಥವಾ ಯಾವುದೇ ರೀತಿಯ ಅಪರಾಧವನ್ನೆಸಗಿದರೆ ಅವರನ್ನೂ ಸಹ ಶಿಕ್ಷೆಗೆ ಗುರಿಪಡಿಸಬಹುದು. ಕಾನೂನಿನ ರಕ್ಷಣೆಗೆಂದೇ ನೇಮಕಗೊಂಡಿರುವ ಪೊಲೀಸರು ಕಾನೂನಿಗೆ ಭಂಗ ತಂದರೆ ಅವರನ್ನು ಸಾಮಾನ್ಯರಿಗಿಂತ ಹೆಚ್ಚು ಗಂಭೀರವಾದ ಶಿಕ್ಷೆಗೆ ಗುರಿಪಡಿಸಬೇಕು.

**37. ಪೊಲೀಸರನ್ನು ಯಾವ ರೀತಿ ಶಿಕ್ಷೆಗೆ ಗುರಿಪಡಿಸಲಾಗುತ್ತದೆ?**
ತಪ್ಪು ಮಾಡಿದ ಪೊಲೀಸರನ್ನು ಶಿಕ್ಷೆಗೆ ಗುರಿಪಡಿಸಲು ಅನೇಕ ಮಾರ್ಗಗಳಿವೆ. ಅಪರಾಧವೆಸಗಿದ ಪೊಲೀಸ್ ಅಧಿಕಾರಿಯನ್ನು ನ್ಯಾಯಾಲಯದ ಮುಂದೆ ಹಾಜುರುಪಡಿಸಿ ಶಿಕ್ಷಿಸಬಹುದು. ಪೊಲೀಸ್ ಅಧಿಕಾರಿಯು ಸಾರ್ವಜನಿಕರೊಡನೆ ಒರಟಾಗಿ, ಇಲ್ಲವೇ ಅನುಚಿತವಾಗಿ ವರ್ತಿಸಿದರೆ ಅಥವಾ ಕರ್ತವ್ಯಲೋಪವೆಸಗಿದರೆ ಅವನನ್ನು/ಅವಳನ್ನು ಹಿರಿಯ ಅಧಿಕಾರಿಗಳು ದಂಡಿಸಬಹುದಾಗಿದೆ. ಉದಾಹರಣೆಗೆ ದಂಡನೆಯ ರೂಪದಲ್ಲಿ ಎಚ್ಚರಿಕೆಯನ್ನು ನೀಡಬಹುದು ಅಥವಾ ಸಂಬಳದಲ್ಲಿ ಕಡಿತ ಮಾಡಬಹುದು ಅಥವಾ ಹುದ್ದೆಯಲ್ಲಿ ಹಿಂಬಡ್ತಿ ನೀಡಬಹುದು ಅಥವಾ ಅಮಾನತ್ತಿನಲ್ಲಿ ಇಡಬಹುದು, ಇಲ್ಲವೇ ವರ್ಗಾವಣೆ ಮಾಡಬಹುದು.



**38. ಪೊಲೀಸರು ಅಪಾಯಕಾರಿ ಕೆಲಸಗಳನ್ನು ನಿರ್ವಹಿಸುತ್ತಾರೆ. ಅವರಿಗೆ ಜೀವ ವಿಮೆಯ ಸೌಲಭ್ಯ ಇದೆಯೇ?**
ಹೌದು. ಪೊಲೀಸ್ ಅಧಿಕಾರಿಗಳಿಗೆ ಜೀವ ವಿಮೆಯ ಸೌಲಭ್ಯ ಇರುತ್ತದೆ. ಸಾಮೂಹಿಕ ಜೀವ ವಿಮಾ ಸೌಲಭ್ಯವನ್ನು ಪಡೆಯಲು ಎಲ್ಲ ಪೊಲೀಸ್ ಸಿಬ್ಬಂದಿ ತಮ್ಮ ಸಂಬಳದ ಒಂದು ಚಿಕ್ಕ ಅಂಶವನ್ನು ಪಾವತಿಸಬೇಕಾಗುತ್ತದೆ. ಕರ್ತವ್ಯ ನಿರ್ವಹಣೆಯ ವೇಳೆಯಲ್ಲಿ ಸಾವನ್ನಪ್ಪಿದ ಪೊಲೀಸ್ ಅಧಿಕಾರಿಗಳ ಕುಟುಂಬಗಳಿಗೆ ಒಂದು ದೊಡ್ಡ ಮೊತ್ತದ ಪರಿಹಾರ ಧನವನ್ನು ನೀಡಲಾಗುತ್ತದೆ. ಪೊಲೀಸ್ ಅಧಿಕಾರಿಗಳು ಅಪಾಯಕಾರಿ ವಾತಾವರಣದಲ್ಲಿ ಕಾರ್ಯ ನಿರ್ವಹಿಸುತ್ತಾರೆ. 2009ನೇ ಇಸವಿಯಲ್ಲಿ ಸುಮಾರು 800ಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳು ಕರ್ತವ್ಯ ನಿರ್ವಹಣೆಯ ಹಾದಿಯಲ್ಲಿ ಸಾವನ್ನಪ್ಪಿದರು. ಕಳೆದ ದಶಕದಲ್ಲಿ ಸರಾಸರಿ ಒಂದು ವರ್ಷಕ್ಕೆ 1000ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯ ಸಾವು ಸಂಭವಿಸಿ ಪರಿಸ್ಥಿತಿ ಇನ್ನೂ ಹದಗೆಟ್ಟಿತ್ತು. ಕರ್ತವ್ಯ ನಿರ್ವಹಣೆ ಮಾಡುತ್ತಾ ಮರಣ ಹೊಂದಿದ ಪೊಲೀಸ್ ಅಧಿಕಾರಿಗಳಲ್ಲಿ ಕಾನ್‌ಸ್ಟೇಬಲುಗಳ ಸಂಖ್ಯೆ ಅಧಿಕವಾಗಿದೆ ಎಂಬುದು ಗಮನಾರ್ಹ ವಿಷಯ.

**39. ಒಬ್ಬ ಪೊಲೀಸ್ ಅಧಿಕಾರಿಯು ತನ್ನ ಮೇಲಧಿಕಾರಿಗಳು ನೀಡಿದ ಆದೇಶವನ್ನು ಪಾಲಿಸಲೇಬೇಕೇ? ಉದಾಹರಣೆಗೆ ಜಿಲ್ಲಾಧಿಕಾರಿ, ಅಥವಾ ಮಂತ್ರಿ ಅಥವಾ ಇನ್ನಾವುದೇ ಸಕ್ಷಮ ಅಧಿಕಾರಿಯು ನೀಡುವ ಎಲ್ಲ ಆದೇಶಗಳನ್ನು ಪಾಲಿಸಲು ಪೋಲಿಸರು ಬಾಧ್ಯರೇ?**
ಇಲ್ಲ. ಆದೇಶಗಳು ಕಾನೂನು ಬದ್ಧವಾಗಿದ್ದಲ್ಲಿ ಮಾತ್ರ ಪೊಲೀಸರು ಅದನ್ನು ಪಾಲಿಸಬೇಕು. ಮೇಲಿನಿಂದ ಆದೇಶ ಬಂದಿದ್ದರೂ ಸರಿಯೇ, ಪೊಲೀಸರು ಏನೇ ತಪ್ಪು ಮಾಡಿದರೂ ಅವರನ್ನೇ ಆ ಕೃತ್ಯಕ್ಕೆ ಹೊಣೆ ಮಾಡಲಾಗುವುದು. "ಹಿರಿಯ ಅಧಿಕಾರಿಗಳ ಅಪಕೃತ್ಯವನ್ನು ಅಥವಾ ಕಾನೂನು ಬಾಹಿರವಾದದ್ದನ್ನು ಮಾಡಲು ಆದೇಶಿಸಿದರು" ಎಂಬ ಸಬೂಬು ನೀಡಿ ಪೊಲೀಸ್ ಅಧಿಕಾರಿ ತನ್ನ ದುರ್ವರ್ತನೆಯನ್ನು ಸಮರ್ಥಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶವಿಲ್ಲ. ಈ ರೀತಿಯ ಸಮರ್ಥನೆ ಪೊಲೀಸ್ ಅಧಿಕಾರಿಗೆ ಯಾವುದೇ ಪ್ರಕಾರವಾದ ರಕ್ಷಣೆಯನ್ನು ಒದಗಿಸುವುದಿಲ್ಲ.



**40. ಒಬ್ಬ ಪೊಲೀಸ್ ಅಧಿಕಾರಿಯು ನಿರಂತರವಾಗಿ ಕರ್ತವ್ಯನಿರತನಾಗಿರುತ್ತಾನೆಯೇ?**

ಹೌದು. 1861ರ ಪೊಲೀಸ್ ಕಾಯ್ದೆಯಲ್ಲಿ 'ಒಬ್ಬ ಪೊಲೀಸ್ ಅಧಿಕಾರಿಯು ಸತತವಾಗಿ ಕರ್ತವ್ಯ ನಿರತನಾಗಿರುತ್ತಾನೆ' ಎಂದು ವರ್ಣಿಸಲಾಗಿದೆ. ಆದರೆ ಪೊಲೀಸರಿಗೆ ವಿಶ್ರಾಂತಿ ಇಲ್ಲವೇ ಇಲ್ಲ ಎಂಬುದು ಇದರ ಅರ್ಥವಲ್ಲ. ಇದರ ಪ್ರಕಾರ ಪೊಲೀಸ್ ಸಮವಸ್ತ್ರದಲ್ಲಿರಲಿ, ಅಥವಾ ಇಲ್ಲದಿರಲಿ, ಸರ್ವಕಾಲವೂ ಕಾನೂನಿನ ರಕ್ಷಣೆ ಮಾಡಬೇಕೆಂಬುದು ಇದರ ಉದ್ದೇಶ. ಯಾವುದಾದರೂ ಅಪರಾಧ ಸಂಭವಿಸುತ್ತಿರುವಾಗ ಅಥವಾ ಸಹಾಯ ಬೇಕೆಂದು ಯಾರಾದರೂ ಕೇಳಿದಾಗ ತಾನು ಕರ್ತವ್ಯನಿರತನಾಗಿಲ್ಲ ಎಂದು ಪೊಲೀಸರು ಹೇಳುವಂತಿಲ್ಲ.

**41. ನನ್ನ ಸ್ವಂತ ರಕ್ಷಣೆಗೆ ಪೊಲೀಸರನ್ನು ಬಳಸಿಕೊಳ್ಳಬಹುದೆ?**

ನಿಮ್ಮ ಜೀವಕ್ಕೆ ಅತೀವ ಅಪಾಯ ಇದೆ ಎಂದಾದರೆ ನೀವು ಪೊಲೀಸರ ರಕ್ಷಣೆ ಪಡೆಯಬಹುದು. ಕೆಲವೊಮ್ಮೆ ರಾಜ್ಯ ಸರ್ಕಾರವೇ ನಿಮಗೆ ರಕ್ಷಣೆ ಒದಗಿಸುತ್ತದೆ. ಕೆಲವೊಮ್ಮೆ ಅದಕ್ಕೆ ತಗಲುವ ಖರ್ಚನ್ನು ನೀವೇ ಭರಿಸಬೇಕಾಗುತ್ತದೆ. ಪೊಲೀಸ್ ಕಾಯ್ದೆಯ ಪ್ರಕಾರ ಯಾವುದಾದರೂ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರ ಅಗತ್ಯವಿದೆ ಎಂದು ತೋರಿದರೆ, ಮತ್ತು ಹಿರಿಯ ಅಧಿಕಾರಿಗಳು ಅದಕ್ಕೆ ಸಮ್ಮತಿಸಿದರೆ, ಸೀಮಿತ ಸಮಯದವರೆಗೆ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯ ವ್ಯವಸ್ಥೆಯನ್ನು ಪಡೆಯಬಹುದು. ಆದರೆ ಈ ವ್ಯವಸ್ಥೆಗೆ ತಗಲುವ ಖರ್ಚನ್ನು ನೀವು ಭರಿಸಬೇಕಾಗುತ್ತದೆ. ಉದಾಹರಣೆಗೆ ಬೃಹತ್ ಪ್ರಮಾಣದ ಮದುವೆಯ ಸಮಾರಂಭಕ್ಕೆ ಅಥವಾ ಇನ್ನಾವುದೇ ಖಾಸಗಿ ಸಮಾರಂಭಗಳಿಗೆ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯ ವ್ಯವಸ್ಥೆ ಮಾಡಲು ಅಧಿಕಾರಿಗಳು ಒಪ್ಪಬಹುದು. ಅದಕ್ಕೆ ತಗಲುವ ವೆಚ್ಚವನ್ನು ನೀವು ಭರಿಸಬೇಕಾಗುತ್ತದೆ. ಆದರೆ ಯಾವುದೇ ನಿರ್ದಿಷ್ಟ ಸ್ಥಳದಲ್ಲಿ ಗಲಭೆ ಸಂಭವಿಸುವ ಸಾಧ್ಯತೆ ಇದೆ ಎಂದಾದರೆ ಅಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪೊಲೀಸ್ ಬಂದೋಬಸ್ತಿಗೆ ಆದೇಶ ನೀಡುವುದು ಪೊಲೀಸ್ ಇಲಾಖೆಯ ಜವಾಬ್ದಾರಿ. ಅದಕ್ಕೆ ನೀವು ಯಾವುದೇ ಹಣ ನೀಡಬೇಕಾಗಿಲ್ಲ.



**42. ಪೊಲೀಸರು ಸಾರ್ವಜನಿಕ ವಾಹನಗಳಲ್ಲಿ ಬಿಟ್ಟಿಯಾಗಿ ಪ್ರಯಾಣಿಸಬಹುದೇ ಅಥವಾ ವರ್ತಕರಿಂದ ಸಾಮಾನು ಸರಂಜಾಮುಗಳನ್ನು ಬಿಟ್ಟಿಯಾಗಿ ಒಯ್ಯಬಹುದೆ?**

ಕೆಲವು ಸ್ಥಳಗಳಲ್ಲಿ ಸಾರ್ವಜನಿಕ ವಾಹನಗಳಲ್ಲಿ ಪ್ರಯಾಣ ಮಾಡಲು ಪೊಲೀಸರಿಗೆ, ವಿಶೇಷವಾಗಿ ಅವರು ಕರ್ತವ್ಯನಿರತರಾಗಿದ್ದಾಗ, ಪಾಸ್ ನೀಡಲಾಗುತ್ತದೆ. ಇದನ್ನು ಹೊರತುಪಡಿಸಿ ಪೊಲೀಸರು ಸಾರ್ವಜನಿಕ ವಾಹನಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಬಾರದು. ಅದೇ ರೀತಿ ಮಾರುಕಟ್ಟೆಯಿಂದ ಪೊಲೀಸರು ಸಾಮಾನು ಸರಂಜಾಮುಗಳನ್ನು ಖರೀದಿಸದೇ ಒಯ್ಯುವಂತಿಲ್ಲ. ಪೊಲೀಸರು ಸಹ ಇತರ ನಾಗರಿಕರಂತೆ ಸಾಮಾನುಗಳನ್ನು ಬೆಲೆ ತೆತ್ತ ಮೇಲೆಯೇ ಕೊಂಡೊಯ್ಯಬೇಕು.

**43. ಪೊಲೀಸ್ ಅಧಿಕಾರಿಯ ಪ್ರತಿಯೊಂದು ಆದೇಶವನ್ನೂ ನಾನು ಪಾಲಿಸಬೇಕೆ?**

ಹೌದು, ಪೊಲೀಸರು ನೀಡುವ ಆದೇಶವು ಕಾನೂನುಬದ್ಧವಾಗಿದ್ದು ಅದು ಅವರ ಕರ್ತವ್ಯಕ್ಕೆ ಸಂಬಂಧಪಟ್ಟಿದ್ದರೆ ಅದನ್ನು ನೀವು ಗೌರವಿಸಬೇಕು. ಪೊಲೀಸರ ಕರ್ತವ್ಯ ನಿರ್ವಹಣೆಯ ಸಂದರ್ಭದಲ್ಲಿ, ಉದಾಹರಣೆಗೆ, ಪೊಲೀಸರು ಯಾವುದೇ ಜಗಳವನ್ನು ಅಥವಾ ಅಪರಾಧವನ್ನು ತಡೆಗಟ್ಟಲು ಪ್ರಯತ್ನಿಸುತ್ತಿದ್ದರೆ ಅಥವಾ ಅಪರಾಧಿಗಳು ಅವರ ವಶದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೆ, ಪೊಲೀಸರಿಗೆ ಸಹಾಯ ಮಾಡುವುದು ನಾಗರಿಕರ ಕರ್ತವ್ಯ. ಯಾವುದೇ ಅಪರಾಧದ ಬಗ್ಗೆ ನಿಮ್ಮ ಬಳಿ ಮಾಹಿತಿ ಇದ್ದರೆ ಅದನ್ನು ಕೂಡಲೇ ಪೊಲೀಸರಿಗೆ ತಿಳಿಸುವುದು ನಿಮ್ಮ ಕರ್ತವ್ಯ ಹಾಗೆಯೇ ಕಾನೂನಿನ ದೃಷ್ಟಿಯಲ್ಲಿ 'ಅಪರಾಧಿ' ಎಂದು ಘೋಷಿಸಲ್ಪಟ್ಟ ವ್ಯಕ್ತಿಗೆ ಆಶ್ರಯ ನೀಡಲು ನಿರಾಕರಿಸುವುದು ನಿಮ್ಮ ಕರ್ತವ್ಯ. ಯಾವುದೇ ಪ್ರಕರಣಕ್ಕೆ ಸಂಬಂಧಪಟ್ಟ ವಿಷಯಗಳನ್ನು ನೀವು ನೋಡಿದ್ದರೆ ಅಥವಾ ತಿಳಿದಿದ್ದರೆ ನ್ಯಾಯಾಲಯದ ಮುಂದೆ ಸಾಕ್ಷಿ ಹೇಳುವುದು ಕೂಡ ನಿಮ್ಮ ಕರ್ತವ್ಯವಾಗುತ್ತದೆ.



**44. ಪೊಲೀಸರು ಕರೆದಲ್ಲಿಗೆಲ್ಲಾ ಅವರೊಡನೆ ನಾನು ಹೋಗಲೇ ಬೇಕೇ?**

ಇಲ್ಲ. ಆದರೆ ಪೊಲೀಸರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಸಹಕರಿಸಲು ಕರೆದರೆ ಅವರೊಡನೆ ಹೋಗುವುದು ನಿಮ್ಮ ಕರ್ತವ್ಯವಾಗುತ್ತದೆ. ಉದಾಹರಣೆಗೆ ಪೊಲೀಸರು ಯಾರನ್ನಾದರೂ ಬಂಧಿಸುವಾಗ, ವಸ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಾಗ ಅಥವಾ ಅಪರಾಧ ನಡೆದ ಸ್ಥಳದ ಪರಿಶೀಲನೆ ನಡೆಸುವಾಗ ಸಾಕ್ಷಿಗಾಗಿ ನಿಮ್ಮನ್ನು ಕರೆಯಬಹುದು. ಇದನ್ನು ಮಹಜರು ಪ್ರಕ್ರಿಯೆ ಎಂದು ಕರೆಯುತ್ತಾರೆ. ಮಹಜರು ಸಾಕ್ಷಿ ಎಂದರೆ ತಾನು ಕಂಡದ್ದನ್ನು ನ್ಯಾಯಾಲಯದಲ್ಲಿ ಸ್ವತಂತ್ರವಾಗಿ ಹೇಳುವ ಒಬ್ಬ ವ್ಯಕ್ತಿ ಎಂದರ್ಥ.




**45. ಪೊಲೀಸ್ ಅಧಿಕಾರಿಯು ನನ್ನನ್ನು ಪೊಲೀಸ್ ಠಾಣೆಗೆ ಬರಹೇಳಿದರೆ ನಾನು ಅಲ್ಲಿಗೆ ಹೋಗಲೇಬೇಕೇ?**

ಇಲ್ಲ, ಹಾಗೇನೂ ಇಲ್ಲ. ಕೆಲವು ಸಂದರ್ಭಗಳಲ್ಲಿ ಮಾತ್ರ ನೀವು ಠಾಣೆಗೆ ಹೋಗಬೇಕಾಗುತ್ತದೆ. ಪೊಲೀಸರೊಂದಿಗೆ ಸಹಕರಿಸುವುದು ಒಳ್ಳೆಯದೇ ಸರಿ, ಆದರೆ ಪೊಲೀಸ್ ಅಧಿಕಾರಿಯು ನಿಮ್ಮನ್ನು ಬಂಧನಕ್ಕೊಳಪಡಿಸದಿದ್ದರೆ (ಅರೆಸ್ಟ್ ಮಾಡದಿದ್ದರೆ) ನೀವು ಠಾಣೆಗೆ ಹೋಗುವ ಅಗತ್ಯವಿಲ್ಲ. ನಿಮ್ಮನ್ನು ಪ್ರಶ್ನಿಸುವ ಸಲುವಾಗಿ ಅಥವಾ ಯಾವುದೇ ಅಪರಾಧದ ತನಿಖೆಯ ಸಂದರ್ಭದಲ್ಲಿ ನಿಮ್ಮನ್ನು ಠಾಣೆಗೆ ಕರೆತರಲು ಪೊಲೀಸರು ಲಿಖಿತ ರೂಪದಲ್ಲಿ ಸಮನ್ಸ್ ನೀಡಬೇಕು. ಇತರ ಸಂದರ್ಭಗಳಲ್ಲಿ ಪೊಲೀಸರು ನಿಮ್ಮನ್ನು ಠಾಣೆಗೆ ಹೋಗುವಂತೆ ಬಲವಂತ ಮಾಡುವ ಹಾಗಿಲ್ಲ. ಮಹಿಳೆಯರನ್ನು ಮತ್ತು 15 ವರ್ಷಗಳಿಗಿಂತ ಕಿರಿಯ ವಯಸ್ಸಿನ ಮಕ್ಕಳನ್ನು ಅವರ ಮನೆಯಲ್ಲಿಯೇ ಪ್ರಶ್ನಿಸಬೇಕು, ಠಾಣೆಗೆ ಹೋಗಲು ಒತ್ತಾಯಿಸುವಂತಿಲ್ಲ.

**46. ಪೊಲೀಸರು ಕೇಳುವ ಎಲ್ಲ ಪ್ರಶ್ನೆಗಳಿಗೆ ನಾನು ಉತ್ತರಿಸಬೇಕೇ?**

ಹೌದು. ಅವರು ಕೇಳುವ ಎಲ್ಲಾ ಪ್ರಶ್ನೆಗಳಿಗೆ ಪ್ರಾಮಾಣಿಕವಾಗಿ, ಮುಚ್ಚು ಮರೆಯಿಲ್ಲದೆ ಉತ್ತರಿಸಿ ನಿಮಗೆ ತಿಳಿದ ಎಲ್ಲ ಮಾಹಿತಿಯನ್ನು ಬಹಿರಂಗ ಪಡಿಸುವುದು ಒಳಿತು. ಯಾವುದಾದರೂ ಅಂಶವು ನಿಮಗೆ ತಿಳಿದಿಲ್ಲದಿದ್ದರೆ ಅದರ ಬಗ್ಗೆ ಬಲವಂತವಾಗಿ ನಿಮ್ಮಿಂದ ಹೇಳಿಕೆಯನ್ನು ಪಡೆಯುವ ಅಧಿಕಾರ ಪೊಲೀಸರಿಗೆ ಇಲ್ಲ. ನಿಮ್ಮನ್ನು ಪೊಲೀಸರು ಪ್ರಶ್ನಿಸುವಾಗ ನಿಮಗೆ ಪರಿಚಿತನಾದ ಇನ್ನಾವುದೆ ವ್ಯಕ್ತಿಯು ನಿಮ್ಮೊಡನೆ ಇರುವುದು ಒಳಿತು.

**47. ನಾನು ಸಂಕಷ್ಟದಲ್ಲಿ ಸಿಲುಕಿರುವಾಗ ನನಗೆ ಸಹಾಯ ಮಾಡುವುದು ಪೊಲೀಸರ ಕರ್ತವ್ಯವಲ್ಲವೆ?**

ಹೌದು. ಕೇಂದ್ರ ಗೃಹ ಖಾತೆಯ ಸಚಿವಾಲಯವು 1985ರಲ್ಲಿ ಪೊಲೀಸರು ಪಾಲಿಸಬೇಕಾದ ನೀತಿ ಸಂಹಿತೆಯನ್ನು ಪ್ರಕಟಿಸಿದೆ. ಇದನ್ನು ಎಲ್ಲಾ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ಹಾಗೂ ಕೇಂದ್ರ ಪೊಲೀಸ್ ಸಂಸ್ಥೆಗಳ ಮುಖ್ಯಸ್ಥರಿಗೆ ರವಾನಿಸಲಾಗಿದೆ. ಇದರ ಪ್ರಕಾರ ಪೊಲೀಸರು ಸಮಾಜಿಕ ಯಾ ಆರ್ಥಿಕ ಸ್ಥಾನಮಾನಗಳ ಆಧಾರದ ಮೇಲೆ ಭೇದಭಾವ ಮಾಡದೆ ಸಾರ್ವಜನಿಕರಿಗೆ ಸಹಾಯ ಹಸ್ತವನ್ನು ನೀಡಬೇಕು. ನೀತಿ ಸಂಹಿತೆಯ ಪ್ರಕಾರ ಸಾರ್ವಜನಿಕರ ಒಳಿತನ್ನು ಮನದಲ್ಲಿಟ್ಟುಕೊಂಡು ಅವರೊಡನೆ ಸಹಾನುಭೂತಿಯಿಂದ ಮತ್ತು ಅನುಕಂಪದಿಂದ ವರ್ತಿಸಿ ಸದಾ ಸೇವಾ ಮನೋಭಾವದಿಂದ ಭಯ ಅಥವಾ ಪಕ್ಷಪಾತವಿಲ್ಲದೆ ಸರ್ವರಿಗೂ ರಕ್ಷಣೆ ನೀಡುವುದು ಪೊಲೀಸರ ಆದ್ಯ ಕರ್ತವ್ಯ.

**48. ನನ್ನ ಪಾರಿವಾರಿಕ ಸಮಸ್ಯೆಗಳನ್ನು ಬಗೆಹರಿಸಲು ಪೊಲೀಸರ ಸಹಾಯ ಕೇಳಬಹುದೆ?**

ಇದು ನಿಮ್ಮ ಸಮಸ್ಯೆಗಳನ್ನು ಅವಲಂಬಿಸಿದೆ. ಒಂದು ವೇಳೆ ನಿಮ್ಮ ಮನೆಯಲ್ಲಿ ನಡೆಯುವ ಕೃತ್ಯವು ಕಾನೂನಿನ ದೃಷ್ಟಿಯಲ್ಲಿ ಅಪರಾಧವೆಂದು ಪರಿಗಣಿಸಲ್ಪಟ್ಟಿದ್ದರೆ, ಉದಾಹರಣೆಗೆ, ಪರಿವಾರದ ಸದಸ್ಯರ ಮೇಲೆ ದೌರ್ಜನ್ಯ, ಮನೆಯ ಹೆಂಗಸರ ಅಥವಾ ಮಕ್ಕಳ ಮೇಲೆ ಹಲ್ಲೆ, ರಕ್ತಸಂಬಂಧಿಗಳೊಂದಿಗೆ ಲೈಂಗಿಕ ಸಂಪರ್ಕ ಅಥವಾ ಮನೆಯೊಳಗೆ ಅಪರಿಚಿತ ವ್ಯಕ್ತಿಗಳ ಅತಿಕ್ರಮ ಪ್ರವೇಶ, ಮುಂತಾದ ಸಂದರ್ಭಗಳಲ್ಲಿ ಪೊಲೀಸರು ನಿಮಗೆ ಸಹಾಯ ಮಾಡಲೇಬೇಕು. ಈ ಕೃತ್ಯಗಳನ್ನು ನಿಮ್ಮ ವೈಯಕ್ತಿಕ ಹಾಗೂ ಕೌಟುಂಬಿಕ ಸಮಸ್ಯೆಗಳೆಂದು ಬಣ್ಣಿಸಿ ತಳ್ಳಿ ಹಾಕುವಂತಿಲ್ಲ. ಆದರೆ ವಿವಾಹ ಯೋಗ್ಯ ವಯಸ್ಸಿನ ಮಕ್ಕಳು ಅವಿಧೇಯರಾದರೆ, ಉದಾಹರಣೆಗೆ ಮದುವೆ ಮಾಡಿಕೊಳ್ಳಲು ಹಿರಿಯರಿಗೆ ಹೇಳದೆ ಮನೆಯಿಂದ ಓಡಿಹೋದರೆ ಅವರನ್ನು ಹಿಂಬಾಲಿಸಿ, ಹಿಡಿದು, ಮನೆಗೆ ಹಿಂದಿರುಗುವಂತೆ ಬಲವಂತ ಮಾಡುವುದು ಪೊಲೀಸರ ಜವಾಬ್ದಾರಿ ಅಲ್ಲ. ಇದು ಸಂಪೂರ್ಣವಾಗಿ ಕೌಟುಂಬಿಕ ವಿಷಯವೇ ಸರಿ.

**49. ಪೊಲೀಸರು ಸಹಾಯ ಮಾಡದಿದ್ದರೆ ಅಥವ ಪೊಲೀಸರು ಹಾಜರಿಲ್ಲದ ವೇಳೆಯಲ್ಲಿ ಸಾರ್ವಜನಿಕರು ಕಳ್ಳರನ್ನು ಅಥವಾ ತಪ್ಪಿತಸ್ಥರನ್ನು ಹಿಡಿದು ಸ್ಥಳದಲ್ಲೇ ಶಿಕ್ಷಿಸಬಹುದೇ?**




ಹೌದು ಮತ್ತು ಇಲ್ಲ. ನೀವು ಕಳ್ಳರನ್ನು ಅಥವ ಅಪರಾಧ ಎಸಗುವವರನ್ನು ಹಿಡಿದು ಹತ್ತಿರದ ಪೊಲೀಸ್ ಠಾಣೆಗೆ ಕರೆದೊಯ್ಯಬಹುದು. ಇದನ್ನು 'ನಾಗರಿಕರ ಬಂಧನ' ಅಥವ ಸಿಟಿಜ಼ನ್ಸ್ ಅರೆಸ್ಟ್ ಎಂದು ಕರೆಯಲಾಗುತ್ತದೆ. ಆದರೆ ನೀವು ತಪ್ಪಿತಸ್ಥರನ್ನು ಥಳಿಸುವಂತಿಲ್ಲ, ಅಥವಾ ತಪ್ಪಿತಸ್ಥರನ್ನು ಥಳಿಸುತ್ತಿರುವ ಜನರ ಗುಂಪನ್ನು ಸೇರುವುದೂ ಸರಿಯಲ್ಲ. ಪ್ರತಿಯೊಬ್ಬ ನಾಗರಿಕನಿಗೂ ಬಲಪ್ರಯೋಗಿಸಿ ತನ್ನನ್ನು ತಾನು ರಕ್ಷಿಸಿಕೊಳ್ಳುವ ಹಕ್ಕೇನೋ ಇದೆ, ಆದರೆ ಈ ಆತ್ಮರಕ್ಷಣೆಯ ಹಕ್ಕನ್ನು ಸಂಯಮಪೂರ್ವಕವಾಗಿ ಚಲಾಯಿಸಬೇಕು. ಯಾರನ್ನೇ ಆಗಲಿ ಏಕಪಕ್ಷೀಯವಾಗಿ ಮೇಲಿಂದ ಮೇಲೆ ಥಳಿಸುವುದಾಗಲಿ, ಅಥವಾ ಭೀಕರವಾಗಿ ಅವಮಾನಿಸುವುದಾಗಲಿ ಸಲ್ಲದು. ಈ ರೀತಿಯ ದುಷ್ಕೃತ್ಯಗಳನ್ನು ತಡೆಯದ ಅಥವಾ ಅವುಗಳಲ್ಲಿ ತೊಡಗುವ ಪೊಲೀಸ್ ಅಧಿಕಾರಿಯ ವಿರುದ್ಧ ಶಿಸ್ತಿನ ಕ್ರಮ ಅಥವಾ ಕ್ರಿಮಿನಲ್ ಮೊಕದ್ದಮೆಯನ್ನು ಜರುಗಿಸಬಹುದಾಗಿದೆ.

**50. ಪೊಲೀಸರು ನನಗೆ ಸಹಾಯ ಮಾಡದಿದ್ದರೆ ನಾನೇನು ಮಾಡಬಹುದು?**

ಉದ್ದೇಶಪೂರ್ವಕವಾಗಿ ಕರ್ತವ್ಯ ಉಲ್ಲಂಘನೆ ಮಾಡುವ ಅಥವಾ ಕರ್ತವ್ಯದೆಡೆ ನಿರ್ಲಕ್ಷ್ಯ ತೋರುವ ಪೊಲೀಸ್ ಅಧಿಕಾರಿಯನ್ನು ಸೆರೆಮನೆ ವಾಸಕ್ಕೆ ಕಳುಹಿಸಬಹುದಾಗಿದೆ. ಪೊಲೀಸ್ ಅಧಿಕಾರಿಯು ಸಹಾಯ ಮಾಡದೇ ಹೋದುದರಿಂದ ನಿಮಗೆ ಏನಾದರೂ ತೊಂದರೆಯಾಗಿದ್ದರೆ ನೀವು ಆತನ ಮೇಲಧಿಕಾರಿಗೆ ದೂರು ಸಲ್ಲಿಸಬಹುದು. ಇಂತಹ ಪ್ರಕರಣದಲ್ಲಿ ಆ ಪೊಲೀಸ್ ಅಧಿಕಾರಿಯನ್ನು ಕರ್ತವ್ಯಲೋಪದ ಅಪರಾಧಕ್ಕಾಗಿ ದಂಡಿಸಬಹುದಾಗಿದೆ.

**51. ಪೊಲೀಸರು ಮನಬಂದಂತೆ ವರ್ತಿಸಬಹುದೇ?**

ಖಂಡಿತವಾಗಿಯೂ ಇಲ್ಲ. ಪೊಲೀಸರು ಕೈಗೊಳ್ಳುವ ಯಾವುದೇ ಕ್ರಮವು ಕಾನೂನಿನ ಚೌಕಟ್ಟಿನೊಳಗೆ ಇರಬೇಕು. ಪೊಲೀಸರ ವರ್ತನೆಯನ್ನು ನಿಯಂತ್ರಿಸಲು ಹಲವಾರು ಕಟ್ಟುನಿಟ್ಟಾದ ನಿಯಮಗಳಿವೆ. ಅವರದೇ ಆದ ಕಟ್ಟಳೆಗಳ, ಕ್ರಿಮಿನಲ್ ಕಾಯ್ದೆಯಲ್ಲಿ ವರ್ಣಿಸಲ್ಪಟ್ಟ ಪ್ರಕ್ರಿಯೆಗಳ ಮತ್ತು ಸರ್ವೋಚ್ಚ ನ್ಯಾಯಾಲಯ ಹಾಗೂ ಮಾನವ ಹಕ್ಕುಗಳ ಆಯೋಗವು ನೀಡುವ ಆದೇಶಗಳ ಪ್ರಕಾರ ಪೊಲೀಸರು ನಡೆದುಕೊಳ್ಳಬೇಕು.

**52. ಪೊಲೀಸರು ಈ ಕಾನೂನುಗಳನ್ನು ಮತ್ತು ಆದೇಶಗಳನ್ನು ಪಾಲಿಸದಿದ್ದರೆ?**
ಕಾನೂನನ್ನು ಉಲ್ಲಂಘಿಸುವ ಪೊಲೀಸ್ ಅಧಿಕಾರಿಯ ವಿರುದ್ಧ, ಪ್ರಕರಣದ ಗಂಭೀರತೆಯ ಅನುಸಾರ, ನೀವು ಆತನ ಮೇಲಧಿಕಾರಿಗೆ ಅಥವಾ ಸಂಬಂಧಿತ ದಂಡಾಧಿಕಾರಿಗೆ (ಮ್ಯಾಜಿಸ್ಟ್ರೇಟ್) ದೂರು ಸಲ್ಲಿಸಬಹುದು. ದೂರನ್ನು ಲಿಖಿತ ರೂಪದಲ್ಲಿ ಸಲ್ಲಿಸಿ ಅದಕ್ಕೆ ಸೂಕ್ತ ಸ್ವೀಕೃತಿ ಪಡೆಯಬೇಕು.

**53. ನಾನು ಯಾವುದರ ಬಗ್ಗೆ ದೂರು ಸಲ್ಲಿಸಬಹುದು?**
ಪೊಲೀಸರನ್ನು 'ಸತತವಾಗಿ ಕರ್ತವ್ಯ ನಿರತರಾಗಿರುವ ಜನ ಸೇವಕರು' ಎಂದು ಪರಿಗಣಿಸಲಾಗಿರುವು ದರಿಂದ ಅವರ ಯಾವುದೇ ಅಕ್ರಮಗಳ ವಿರುದ್ಧ ನೀವು ದೂರು ಸಲ್ಲಿಸಬಹುದು. ಪೊಲೀಸರು ತಮ್ಮ ಕರ್ತವ್ಯಗಳನ್ನು ನಿರ್ಲಕ್ಷಿಸುವಂತಿಲ್ಲ ಅಥವಾ ಕರ್ತವ್ಯ ನಿರ್ವಹಣೆಯಲ್ಲಿ ವಿಳಂಬಗತಿ ಅನುಸರಿಸುವಂತಿಲ್ಲ.

**54. ಪೊಲೀಸರು ಒರಟಾಗಿ ವರ್ತಿಸಿದರೆ ಹಾಗೂ ನನ್ನನ್ನು ಅವಮಾನಿಸಿದರೆ ನಾನೇನು ಮಾಡಬಹುದು?**
ಹಿಂದೆ ಹೇಳಿದಂತೆ ಪೊಲೀಸ್ ಅಧಿಕಾರಿಯ ಕರ್ತವ್ಯ ಲೋಪ ಅಥವಾ ಅಶಿಸ್ತಿನ ಬಗ್ಗೆ ನೀವು ಆತನ ಮೇಲಧಿಕಾರಿಗೆ ದೂರು ನೀಡಬಹುದು. ಆತನ ಅಕ್ರಮವು ಇನ್ನೂ ಗಂಭೀರಮಟ್ಟದಾಗಿದ್ದು ಅಪರಾಧದ ರೂಪ ತಾಳಿದ್ದರೆ ನೀವು ಆತನ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ನೀಡಬಹುದು, ಅಥವಾ ಸ್ಥಳೀಯ ನ್ಯಾಯಿಕ ದಂಡಾಧಿಕಾರಿಗೆ (ಜುಡಿಷಿಯಲ್ ಮ್ಯಾಜಿಸ್ಟ್ರೇಟ್) ದೂರು ಸಲ್ಲಿಸಬಹುದು.

**55. ಪೊಲೀಸ್ ಠಾಣೆಗೆ ಹೋದರೆ ಪೊಲೀಸರು ತಮ್ಮ ಅಧಿಕಾರಿಯ ವಿರುದ್ಧವೇ ದೂರನ್ನು ದಾಖಲಿಸಲು ನಿರಾಕರಿಸುವುದಿಲ್ಲವೆ?**
ಹೌದು ನಿರಾಕರಿಸಬಹುದು. ತಮ್ಮ ಸಿಬ್ಬಂದಿಯ ವಿರುದ್ಧವೇ ದೂರನ್ನು ದಾಖಲಿಸಿಕೊಳ್ಳಲು ಪೊಲೀಸರು ನಿರಾಕರಿಸುವುದು ಸರ್ವೇಸಾಧಾರಣವಾದ ವಿಷಯ. ಆದರೆ ಆ ವಿಷಯವನ್ನು ಅಲ್ಲಿಗೇ ಕೊನೆಗೊಳಿಸಬೇಕಾಗಿಲ್ಲ. ಪೊಲೀಸ್ ಅಧಿಕಾರಿಯ ಒರಟಾದ ಅಥವಾ ಅಸಭ್ಯ ವರ್ತನೆಯ ವಿರುದ್ಧ, ಅಥವಾ ಕರ್ತವ್ಯದೆಡೆ ನಿರ್ಲಕ್ಷ್ಯ ತೋರಿದ ಬಗ್ಗೆ, ಅಥವಾ ಅಧಿಕಾರದ ದುರುಪಯೋಗದ ಬಗ್ಗೆ, ಮುಖ್ಯ ಪೊಲೀಸ್ ಅಧಿಕಾರಿಗೆ ದೂರು ಕೊಡಬಹುದು. ಆತನ ಅಕ್ರಮವು ಅಪರಾಧದ ರೂಪ ತಾಳಿದ್ದರೆ ನಿಮ್ಮ ದೂರನ್ನು ಹತ್ತಿರದ ದಂಡಾಧಿಕಾರಿಯ (ಮ್ಯಾಜಿಸ್ಟ್ರೇಟ್) ಬಳಿ ದಾಖಲಿಸುವುದು ಸೂಕ್ತ.

**56. ಆದರೆ ನ್ಯಾಯಾಲಯಕ್ಕೆ ದೂರುಗಳನ್ನು ಕೊಂಡೊಯ್ಯುವುದು ಬಹಳ ಕಠಿಣವಲ್ಲವೇ? ಪ್ರಕರಣಗಳ ಇತ್ಯರ್ಥಕ್ಕೆ ಬಹಳ ಸಮಯ ತಗಲುವುದಿಲ್ಲವೇ?**
ಪೊಲೀಸರ ವಿರುದ್ಧ ದೂರುಗಳನ್ನು ಸುಲಭವಾಗಿ ದಾಖಲಿಸಲು ಮತ್ತು ಆ ಪ್ರಕರಣಗಳನ್ನು ವಿಳಂಬ ವಿಲ್ಲದೆ ಇತ್ಯರ್ಥಗೊಳಿಸಲು ಕೆಲವು ರಾಜ್ಯಗಳು ಪೊಲೀಸ್ ದೂರುಗಳ ಪ್ರಾಧಿಕಾರಗಳನ್ನು (ಪೊಲೀಸ್ ಕಂಪ್ಲೇಂಟ್ಸ್ ಅಥಾರಿಟಿ) ಸ್ಥಾಪಿಸಿವೆ. ಪೊಲೀಸರ ವಿರುದ್ಧ ಸಾರ್ವಜನಿಕರಿಂದ ಬರುವ ದೂರುಗಳ ವಿಚಾರಣೆಗೆ ಇಂತಹ ವಿಶೇಷ ಪ್ರಾಧಿಕಾರಗಳನ್ನು ರಚಿಸಲಾಗಿದೆ. ಇವುಗಳ ಹೊರತಾಗಿ ಇನ್ನೂ ಅನೇಕ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಆಯೋಗಗಳನ್ನು ಪೊಲೀಸರ ವಿರುದ್ಧದ ದೂರುಗಳ ಬಗ್ಗೆ ವಿಚಾರಣೆ ನಡೆಸಲು ಸ್ಥಾಪಿಸಲಾಗಿದೆ. ಅವುಗಳಲ್ಲಿ ಮುಖ್ಯವಾದವು ಎಂದರೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ರಾಜ್ಯ ಮಾನವ ಹಕ್ಕುಗಳ ಆಯೋಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆಯೋಗ, ರಾಷ್ಟ್ರೀಯ ಮಹಿಳಾ ಆಯೋಗ, ರಾಜ್ಯ ಮಹಿಳಾ ಆಯೋಗ, ಮಕ್ಕಳ ಆಯೋಗ, ಇತ್ಯಾದಿ. ಭ್ರಷ್ಟಾಚಾರದ ಬಗೆಗಿನ ದೂರುಗಳ ವಿಚಾರಣೆ ನಡೆಸಲು ಕೇಂದ್ರೀಯ ತನಿಖಾ ಬ್ಯೂರೋ (ಸಿ.ಬಿ.ಐ.), ಕೇಂದ್ರೀಯ ವಿಚಕ್ಷಣಾ ಆಯೋಗ (ಸಿ.ವಿ.ಸಿ.), ಲೋಕಾಯುಕ್ತ ಮತ್ತು ರಾಜ್ಯ ಸರ್ಕಾರದ ವಿಚಕ್ಷಣಾ ವಿಭಾಗಗಳನ್ನು ಸ್ಥಾಪಿಸಲಾಗಿದೆ. ಈ ಪ್ರಾಧಿಕಾರಗಳು ನಿಮ್ಮ ದೂರುಗಳನ್ನು ಪರಿಶೀಲಿಸಿ, ತನಿಖೆ ನಡೆಸಿ ತಮ್ಮ ವಿಧಿವತ್ತಾದ ಅಧಿಕಾರಗಳ ಅನುಸಾರ ಒಂದೋ ಪೊಲೀಸರ ವಿರುದ್ಧ ಪ್ರಥಮ ಮಾಹಿತಿ ವರದಿಯನ್ನು (ಎಫ್.ಐ.ಆರ್) ದಾಖಲಿಸಲು ನಿರ್ದೇಶಿಸಬಹುದು ಇಲ್ಲವೇ ಸಂತ್ರಸ್ತರಿಗೆ ಪರಿಹಾರ ಧನ ನೀಡುವಂತೆ ಸರ್ಕಾರವನ್ನು ಆದೇಶಿಸಬಹುದು.






**57. ಒಂದು ಅಪರಾಧದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಬೇಕಾದರೆ ನಾನೇನು ಮಾಡಬೇಕು?**

ಕಳ್ಳತನ, ದರೋಡೆ, ಹುಡುಗಿಯರನ್ನು ಛೇಡಿಸುವುದು, ಹಲ್ಲೆಮಾಡುವುದು, ಮಾನಭಂಗ, ಅಪಹರಣ ಇತ್ಯಾದಿ ಗಂಭೀರ ಸ್ವರೂಪದ ಅಪರಾಧಗಳಾದರೆ ನೀವು ತಕ್ಷಣ ಪೊಲೀಸ್ ಠಾಣೆಯ ಮುಖ್ಯಸ್ಥರ ಬಳಿ ಎಫ್.ಐ.ಆರನ್ನು ದಾಖಲಿಸಬಹುದು. ಪೊಲೀಸರು ಅದನ್ನು ಸ್ವೀಕರಿಸಲೇಬೇಕು ಹಾಗೂ ಎಫ್.ಐ.ಆರಿನ ಪ್ರತಿಯೊಂದನ್ನು ನಿಮಗೆ ಉಚಿತವಾಗಿ ನೀಡಬೇಕು. ಅಗತ್ಯವಿದ್ದಲ್ಲಿ ನೀವು ನೇರವಾಗಿ ಮ್ಯಾಜಿಸ್ಟ್ರೇಟರಲ್ಲಿ ದೂರನ್ನು ದಾಖಲಿಸಬಹುದು.

**58. ಎಫ್.ಐ.ಆರ್ ಎಂದರೇನು?**

ಪ್ರಥಮ ಮಾಹಿತಿ ವರದಿಯನ್ನು ಆಂಗ್ಲ ಭಾಷೆಯಲ್ಲಿ ಸಂಕ್ಷಿಪ್ತವಾಗಿ ಎಫ್.ಐ.ಆರ್ ಎಂದು ಕರೆಯುತ್ತಾರೆ. ಅಪರಾಧಕ್ಕೀಡಾದವರು ಅಥವಾ ಅಪರಾಧವು ನಡೆಯುತ್ತಿರುವುದನ್ನು ಕಂಡಂತಹ ಸಾಕ್ಷಿಗಳು ಅಥವಾ ಅಪರಾಧದ ಬಗ್ಗೆ ಮಾಹಿತಿ ಇರುವ ಇನ್ಯಾವುದೇ ವ್ಯಕ್ತಿಯು ಎಫ್.ಐ.ಆರ್‌ನ್ನು ದಾಖಲುಗೊಳಿಸಬಹುದು. ಎಫ್.ಐ.ಆರಿನಲ್ಲಿ ನೀವು ನೀಡಿದ ಮಾಹಿತಿಯ ಆಧಾರದ ಮೇಲೆ ಪೊಲೀಸರು ತನಿಖೆ ನಡೆಸಲು ಪ್ರಾರಂಭಿಸುತ್ತಾರೆ. ತನಿಖೆಯ ಮೂಲಕ ನಿಜಾಂಶಗಳನ್ನು ಸಂಗ್ರಹಿಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಬಹುದೇ ಎಂದು ತೀರ್ಮಾನಿಸುತ್ತಾರೆ.

**59. ನಾನು ಸ್ಥಳೀಯ ಪೊಲೀಸ್ ಠಾಣೆಯಲ್ಲಿಯೇ ಎಫ್.ಐ.ಆರನ್ನು ದಾಖಲಿಸಬೇಕೇ ಅಥವಾ ಇನ್ಯಾವುದೇ ಠಾಣೆಯಲ್ಲಿ ಅದನ್ನು ದಾಖಲಿಸಬಹುದೇ?**

ನೀವು ಯಾವುದೇ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರನ್ನು ದಾಖಲಿಸಬಹುದು. ಆದರೆ ಅಪರಾಧ ನಡೆದ ಸ್ಥಳದ ವ್ಯಾಪ್ತಿಗೆ ಒಳಪಡುವ ಠಾಣೆಯಲ್ಲಿ ದಾಖಲಿಸುವುದರಿಂದ ಕೆಲವೊಂದು ಪ್ರಯೋಜನಗಳಿವೆ. ಪೊಲೀಸರು ತಕ್ಷಣ ಕಾರ್ಯೋನ್ಮುಖರಾಗಬಹುದು. ಬೇರೆ ಯಾವುದೇ ಪೊಲೀಸ್ ಠಾಣೆಯಲ್ಲಿ ನೀವು ದೂರು ನೀಡಿದರೆ ಆ ಠಾಣೆಯ ಸಿಬ್ಬಂದಿಯು ಅದರ ಸ್ವೀಕೃತಿಯನ್ನು ದಾಖಲಿಸಿ ಅದನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗೆ ರವಾನಿಸಬೇಕು. ಅಪರಾಧವು ತಮ್ಮ ಠಾಣೆಯ ವ್ಯಾಪ್ತಿಯಲ್ಲಿ ಘಟಿಸಿಲ್ಲ ಎಂಬ ಸಬೂಬು ನೀಡಿ ಎಫ್.ಐ.ಆರನ್ನು ದಾಖಲಿಸಲು ನಿರಾಕರಿಸುವಂತಿಲ್ಲ.

**60. ಪೊಲೀಸರು ನನ್ನ ದೂರನ್ನು ದಾಖಲಿಸಲು ನಿರಾಕರಿಸಬಹುದೇ?**

ಸಾಧಾರಣವಾಗಿ ನಿರಾಕರಿಸಬಾರದು ಆದರೆ ಕೆಲವು ಸಂದರ್ಭಗಳಲ್ಲಿ ಪೊಲೀಸರು ನಿರಾಕರಿಸಬಹುದು. ಭಾರತದಲ್ಲಿ ಅಪರಾಧಗಳನ್ನು 'ಕಾಗ್ನಿಜ಼ಿಬಲ್' ಮತ್ತು 'ನಾನ್ ಕಾಗ್ನಿಜ಼ಿಬಲ್' ಎಂಬ ಎರಡು ವರ್ಗಗಳನ್ನಾಗಿ ವಿಂಗಡಿಸಲಾಗಿದೆ. ಕಾಗ್ನಿಜ಼ಿಬಲ್ ಗುಂಪಿಗೆ ಸೇರುವ ಅಪರಾಧಗಳೆಂದರೆ ಕೊಲೆ, ಮಾನಭಂಗ, ಗಲಭೆ, ದರೋಡೆ ಇತ್ಯಾದಿ. ಈ ಅಪರಾಧಗಳು ನಡೆದಾಗ ಪೊಲೀಸರು ನೇರವಾಗಿ ಕ್ರಮ ಕೈಗೊಂಡು ಎಫ್.ಐ.ಆರನ್ನು ದಾಖಲು ಮಾಡಿ ಮುಂದಿನ ತನಿಖೆ ನಡೆಸಬಹುದು. ನಾನ್ ಕಾಗ್ನಿಜ಼ಿಬಲ್ ಅಪರಾಧಗಳೆಂದರೆ ಮೋಸ, ವಂಚನೆ, ನಕಲು ಮಾಡುವುದು, ಇಬ್ಬರು ಹೆಂಡಿರ ಸಹವಾಸ, ತೂಕದಲ್ಲಿ ಮೋಸ ಮಾಡಿ ಸಾಮಾನುಗಳನ್ನು ಮಾರುವುದು, ಆಹಾರ ಪದಾರ್ಥಗಳ ಕಲಬೆರಕೆ ಇತ್ಯಾದಿ. ಈ ಅಪರಾಧಗಳ ಬಗ್ಗೆ ತನಿಖೆ ನಡೆಸಲು ಹಾಗೂ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಲು ಮ್ಯಾಜಿಸ್ಟ್ರೇಟರ ಅನುಮತಿ ಅಗತ್ಯ. ಈ ವರ್ಗೀಕರಣವನ್ನು ಈ ರೀತಿಯಾಗಿ ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು: ಶೀಘ್ರವಾಗಿ ಕ್ರಮ ಕೈಗೊಳ್ಳಬೇಕಾದಂತಹ ಅಪರಾಧಗಳ ಬಗ್ಗೆ ನೇರವಾಗಿ ಪೊಲೀಸರಿಗೆ ದೂರು ನೀಡಬಹುದು. ಇತರೆ ಅಪರಾಧಗಳು ದಂಡಾಧಿಕಾರಿಯ ಬಳಿ ಹೋಗುತ್ತವೆ. ಆದುದರಿಂದ ಪೊಲೀಸರು ನಿಮ್ಮ ದೂರನ್ನು ಎಫ್.ಐ.ಆರಿನ ರೂಪದಲ್ಲಿ ದಾಖಲಿಸದಿದ್ದರೂ ಅವರು ನಿಮ್ಮ ದೂರಿನ ಬಗ್ಗೆ ಮಾಹಿತಿ ಪಡೆದು ಅದನ್ನು ಪೊಲೀಸ್ ಠಾಣೆಯ ದಿನಚರಿಯಲ್ಲಿ ದಾಖಲಿಸಬೇಕು. ಅದರ ಪ್ರತಿಯನ್ನು ಉಚಿತವಾಗಿ ನಿಮಗೆ ನೀಡಬೇಕು ಹಾಗೂ ಮ್ಯಾಜಿಸ್ಟ್ರೇಟರಲ್ಲಿಗೆ ಹೋಗಲು ನಿಮಗೆ ಸೂಚಿಸಬೇಕು.

**61. ಕಾಗ್ನಿಜೆಬಲ್ ಅಪರಾಧದ ಬಗ್ಗೆ ದೂರು ನೀಡಲು ಹೋದರೂ ಕೂಡ ಪೊಲೀಸರು (ಸ್ಟೇಶನ್ ಹೌಸ್ ಅಧಿಕಾರಿ) ಅದನ್ನು ದಾಖಲು ಮಾಡಿಕೊಳ್ಳಲು ನಿರಾಕರಿಸಿದರೆ ನಾನೇನು ಮಾಡಬೇಕು?**

ಇಂತಹ ಸಂದರ್ಭ ಎದುರಾದರೆ ನೀವು ನಿಮ್ಮ ದೂರನ್ನು ಹಿರಿಯ ಅಧಿಕಾರಿಗಳ ಬಳಿ ಒಯ್ಯಬಹುದು. ಜಿಲ್ಲೆಯ ಉನ್ನತ ಮಟ್ಟದ ಪೊಲೀಸ್ ಅಧಿಕಾರಿ ಅಥವಾ ಹತ್ತಿರದ ನ್ಯಾಯಿಕ ದಂಡಾಧಿಕಾರಿಗೆ ದೂರು ನೀಡಬಹುದು. ಅವರು ನಿಮ್ಮ ದೂರನ್ನು ದಾಖಲು ಮಾಡಿಕೊಳ್ಳುವಂತೆ ಪೊಲೀಸರಿಗೆ ಆದೇಶ ನೀಡುತ್ತಾರೆ. ನಿಮ್ಮ ದೂರು ದಾಖಲಾಗಿದ್ದು ಅದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಲು ನೀವು ದೂರನ್ನು ನಿಮ್ಮ ಕೈಯಾರೆ ನೀಡಿ ಸ್ವೀಕೃತಿಯನ್ನು ಕೇಳಿ ಪಡೆಯಿರಿ. ಅಥವಾ ಅದನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ರವಾನಿಸಿರಿ. ಹೀಗೆ ಮಾಡಿದರೂ ಸಹ ದೂರಿನ ಸ್ವೀಕೃತಿಯ ದಾಖಲೆಯು ನಿಮಗೆ ದೊರಕುವುದು. ಅದನ್ನು ಜೋಪಾನವಾಗಿ ಇಟ್ಟುಕೊಳ್ಳಿ. ನಿಮ್ಮ ಬಳಿ ಇರುವ ಸ್ವೀಕೃತಿಯೇ ನಿಮ್ಮ ದೂರು ಸಂಬಂಧಪಟ್ಟ ಅಧಿಕಾರಿಯನ್ನು ತಲುಪಿದೆ ಎಂಬುದಕ್ಕೆ ಪುರಾವೆ. ಪ್ರಥಮ ಬಾರಿಗೆ ದೂರನ್ನು ದಾಖಲಿಸಲು ಹೋದಾಗ ನೀವು ಎದುರಿಸಿದ ಸಮಸ್ಯೆಗಳ ಬಗ್ಗೆ ಕೂಡ ವಿವರವಾಗಿ ಬರೆಯಿರಿ. ಹೀಗೆ ಮಾಡಿದರೆ ಆ ಅಧಿಕಾರಿಯು ಪುನ: ಅಂತಹ ತಪ್ಪುಗಳನ್ನು ಮಾಡಲು ಹಿಂಜರಿಯಬಹುದು.

**62. ಎಫ್.ಐ.ಆರಿನಲ್ಲಿ ಏನೆಲ್ಲಾ ಮಾಹಿತಿ ಇರಬೇಕು?**

ಎಫ್.ಐ.ಆರ್ ಎಂಬುದು ನಿಮಗೆ ತಿಳಿದಿರುವ ಅಥವಾ ನೀವು ಇನ್ನೊಬ್ಬರಿಂದ ಕೇಳಿ ತಿಳಿದುಕೊಂಡ ವಾಸ್ತವ ಘಟನೆಗಳ ವರದಿ. ಒಂದು ಅಪರಾಧ ಜರುಗಿದ್ದನ್ನು ನೀವು ಕಣ್ಣಾರೆ ನೋಡಿದ್ದರೆ ಮಾತ್ರ ದೂರು ನೀಡಬೇಕು ಎಂಬ ನಿಯಮವಿಲ್ಲ. ಕಣ್ಣಾರೆ ನೋಡಿರದಿದ್ದರೆ ಅಪರಾಧದ ಬಗ್ಗೆ ಎಲ್ಲ ನಿಜ ಸಂಗತಿಗಳನ್ನು ತಿಳಿದುಕೊಂಡ ನಂತರವೇ ಎಫ್.ಐ.ಆರನ್ನು ದಾಖಲಿಸುವುದು ಸೂಕ್ತ. ಏನೇ ಆದರೂ ನೀವು ಸತ್ಯವಾದ ಮಾಹಿತಿಯನ್ನೇ ನೀಡಬೇಕು. ವಾಸ್ತವಾಂಶಗಳನ್ನು ಉತ್ಪ್ರೇಕ್ಷಿಸುವುದಾಗಲಿ, ಅಥವಾ ಕಪೋಲಕಲ್ಪಿತ ವಿಷಯಗಳನ್ನು ಇಲ್ಲವೇ ನಿಮ್ಮ ಅನಿಸಿಕೆಗಳನ್ನು ದಾಖಲಿಸುವುದಾಗಲಿ ಸಲ್ಲದು.

ಎಫ್.ಐ.ಆರನ್ನು ದಾಖಲಿಸುವಾಗ ಅಪರಾಧ ನಡೆದ ದಿನಾಂಕ, ಸಮಯ ಮತ್ತು ಸ್ಥಳದ ಬಗ್ಗೆ ಮಾಹಿತಿ ನೀಡಿ. ಸಂಬಂಧಪಟ್ಟ ಎಲ್ಲ ವ್ಯಕ್ತಿಗಳ ಪಾತ್ರಗಳ ಬಗ್ಗೆ ವಿವರಣೆ ನೀಡಿ: ಅವರು ಎಲ್ಲಿದ್ದರು, ಏನು ಮಾಡುತ್ತಿದ್ದರು ಎಂಬುದರ ಬಗ್ಗೆ ಮತ್ತು ಪ್ರತಿಯೊಬ್ಬ ವ್ಯಕ್ತಿಯ ಕೃತ್ಯಗಳ ಬಗ್ಗೆ ಕ್ರಮವಾಗಿ ವಿವರಿಸಿ. ದೈಹಿಕವಾದ ಅಥವಾ ಆಸ್ತಿಪಾಸ್ತಿಗಳ ಹಾನಿಯ ಬಗ್ಗೆ ವಿವರಣೆ ನೀಡಿ. ಅಪರಾಧವನ್ನೆಸಗಲು ಉಪಯೋಗಿಸಿದ ಆಯುಧಗಳ ಬಗ್ಗೆ ಮಾಹಿತಿ ನೀಡಲು ಮರೆಯಬೇಡಿ. ಈ ರೀತಿಯಾಗಿ ಎಲ್ಲ ಮಾಹಿತಿಗಳ ಮತ್ತು ಸನ್ನಿವೇಶಗಳ ಬಗ್ಗೆ ವಿವರಗಳನ್ನು ಆದಷ್ಟು ಬೇಗ ದಾಖಲಿಸುವುದು ಒಳ್ಳೆಯದು. ದೂರನ್ನು ದಾಖಲಿಸುವುದು ವಿಳಂಬವಾದರೆ ವಿಳಂಬಕ್ಕೆ ಕಾರಣವನ್ನು ದೂರಿನಲ್ಲಿ ನಮೂದಿಸುವುದು ಸೂಕ್ತ.

**63. ನಾನು ಹೇಳಿದ್ದನ್ನೇ ಪೊಲೀಸರು ಬರೆದಿದ್ದಾರೆ ಎಂದು ಖಚಿತಪಡಿಸಿಕೊಳ್ಳುವುದು ಹೇಗೆ?**

ಎಫ್.ಐ.ಆರ್. ಎಂಬುದು ಅಪರಾಧ ಜರುಗಿದುದರ ಬಗ್ಗೆ ನಿಮಗೆ ತಿಳಿದ ವಾಸ್ತವಾಂಶಗಳ ವರದಿ ಎಂಬುದನ್ನು ನೆನಪಿಡಿ. ಯಾವುದೇ ರೀತಿಯಲ್ಲಿ ಎಫ್.ಐ.ಆರ್. ಪೊಲೀಸರ ವ್ಯಾಖ್ಯಾನವಲ್ಲ. ನೀವು ಹೇಳಿದ್ದನ್ನು ತಪ್ಪಿಲ್ಲದಂತೆ, ಸರಿಯಾಗಿ, ಏನನ್ನೂ ಬಿಡದಂತೆ ಅಥವಾ ಹೆಚ್ಚಾಗಿ ಏನನ್ನೂ ಸೇರಿಸದಂತೆ ಬರೆದುಕೊಳ್ಳುವುದು ಪೊಲೀಸರ ಕರ್ತವ್ಯ. ಕಾನೂನಿನ ಪ್ರಕಾರ ನಿಮ್ಮ ದೂರನ್ನು ಬರೆದುಕೊಂಡ ನಂತರ ಪೊಲೀಸ್ ಅಧಿಕಾರಿಯು ಅದನ್ನು ನಿಮಗೆ ಓದಿ ಹೇಳಬೇಕು. ಎಫ್.ಐ.ಆರಿನಲ್ಲಿ ಬರೆದಿದ್ದೆಲ್ಲವೂ ಸರಿ ಇದೆ ಎಂದು ನಿಮಗೆ ಒಪ್ಪಿಗೆಯಾದ ನಂತರವೇ ಅದಕ್ಕೆ ಸಹಿ ಮಾಡಿ. ಪೊಲೀಸ್ ಎಫ್.ಐ.ಆರಿನ ಒಂದು ಸತ್ಯಪ್ರತಿಯನ್ನು ನಿಮಗೆ ಉಚಿತವಾಗಿ ನೀಡಬೇಕು. ಎಫ್.ಐ.ಆರನ್ನು ಎಫ್.ಐ.ಆರ್. ರಿಜಿಸ್ಟರ್‌ನಲ್ಲಿ ದಾಖಲಿಸಲಾಗುತ್ತದೆ. ನಂತರ ಅದರ ಪ್ರತಿಗಳನ್ನು ಓರ್ವ ಹಿರಿಯ ಪೊಲೀಸ್ ಅಧಿಕಾರಿಗೆ ಮತ್ತು ಸಂಬಂಧಪಟ್ಟ ಮ್ಯಾಜಿಸ್ಟ್ರೇಟರಿಗೆ ರವಾನಿಸಲಾಗುತ್ತದೆ.






**64. ಎಫ್.ಐ.ಆರ್ ದಾಖಲಾದ ನಂತರ ಯಾವ ಕ್ರಮ ಕೈಗೊಳ್ಳಲಾಗುತ್ತದೆ?**

ಎಫ್.ಐ.ಆರನ್ನು ದಾಖಲು ಮಾಡಿಕೊಳ್ಳುವುದರ ಮೂಲಕ ಪೊಲೀಸರ ತನಿಖೆಯ ಕಾರ್ಯವು ಪ್ರಾರಂಭವಾಗುತ್ತದೆ. ತನಿಖೆಯ ಅಂಗವಾಗಿ ಪೊಲೀಸರು ಅಪರಾಧಕ್ಕೀಡಾದವರನ್ನು ಮತ್ತು ಸಾಕ್ಷಿಗಳನ್ನು ವಿಚಾರಿಸಬಹುದು; ಅವರ ಹೇಳಿಕೆಗಳನ್ನು ಬರೆದುಕೊಳ್ಳಬಹುದು (ಇದರಲ್ಲಿ ಮರಣಪೂರ್ವ ಘೋಷಣೆಯೂ ಸೇರಿದೆ); ಅಪರಾಧ ನಡೆದ ಸ್ಥಳವನ್ನು ಪರೀಕ್ಷಿಸಬಹುದು; ಅಗತ್ಯವಿದ್ದರೆ ಶವಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಬಹುದು. ಈ ರೀತಿಯಾಗಿ ಪೊಲೀಸರು ಹಲವಾರು ವ್ಯಕ್ತಿಗಳನ್ನು ಪ್ರಶ್ನಿಸಬಹುದು ಮತ್ತು ದೊರೆತಂತಹ ಪ್ರತಿಯೊಂದು ಸುಳಿವಿನ ಆಧಾರದ ಮೇಲೆ ಮುಂದಿನ ತನಿಖೆಯನ್ನು ನಡೆಸಬಹುದು. ತನಿಖಾ ಕಾರ್ಯವು ಸಂಪೂರ್ಣಗೊಂಡ ನಂತರ ತನಿಖಾಧಿಕಾರಿಯು ಎಲ್ಲ ವಿವರಗಳನ್ನು ಒಳಗೊಂಡ ದಾಖಲೆಯೊಂದನ್ನು ತಯಾರಿಸಬೇಕು. ಇದನ್ನು ಚಲಾನ್ ಅಥವಾ ಆರೋಪಪಟ್ಟಿ (ಚಾರ್ಜ್‌ಶೀಟ್) ಎಂದು ಕರೆಯಲಾಗುತ್ತದೆ.

**65. ಚಲಾನ್ (ಆರೋಪ ಪಟ್ಟಿ) ಎಂದರೇನು?**

ತನಿಖೆ ಮುಗಿದ ಬಳಿಕ ತನಿಖಾಧಿಕಾರಿಯು ಎಲ್ಲಾ ವಾಸ್ತವಾಂಶಗಳನ್ನು ಪರಿಶೀಲಿಸಿ ಅಪರಾಧವು ನಿಜವಾಗಿಯೂ ಘಟಿಸಿರುವುದರ ಬಗ್ಗೆ ಸಾಕಷ್ಟು ಪುರಾವೆಗಳಿವೆಯೇ ಎಂದು ತೀರ್ಮಾನಿಸಬೇಕು. ನಂತರ ಅದನ್ನು ಪ್ರಾಸಿಕ್ಯುಶನ್ ಮತ್ತು ನ್ಯಾಯಾಲಯದ ಸಲುವಾಗಿ ಆರೋಪ ಪಟ್ಟಿಯಲ್ಲಿ ದಾಖಲಿಸಬೇಕು. ಅಪರಾಧವು ಘಟಿಸಿದೆಯೇ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಪ್ರಾಸಿಕ್ಯೂಶನ್ ಮತ್ತು ನ್ಯಾಯಾಲಯವು ಸ್ವತಂತ್ರವಾಗಿ ಆರೋಪ ಪಟ್ಟಿಯನ್ನು ಪರಿಶೀಲಿಸುತ್ತವೆ.

**66. ಎಫ್.ಐ.ಆರ್.ನಲ್ಲಿ ಹೆಸರಿಸಿದ ಎಲ್ಲ ವ್ಯಕ್ತಿಗಳನ್ನು ಯಾಂತ್ರಿಕವಾಗಿ ಪೊಲೀಸರು ಬಂಧಿಸಬಹುದೇ?**

ಇಲ್ಲ. ಹಾಗೆ ಮಾಡುವಂತಿಲ್ಲ. ಕೇವಲ ಒಬ್ಬರ ಹೆಸರು ಎಫ್.ಐ.ಆರಿನಲ್ಲಿದೆ ಎಂದಾಕ್ಷಣ ಅವರನ್ನು ಬಂಧಿಸುವಂತಿಲ್ಲ. ಅವರು ಅಪರಾಧ ಎಸಗಿದ್ದಾರೆ ಅಥವಾ ಅದರಲ್ಲಿ ಅವರ ಪಾತ್ರ ಇದೆ ಎಂದು ಖಚಿತ ಪಡಿಸಿಕೊಂಡ ನಂತರವೇ ಅವರನ್ನು ಬಂಧಿಸಬಹುದು.

**67. ಪೊಲೀಸರು ನನ್ನ ದೂರನ್ನು ಮುಕ್ತಾಯಗೊಳಿಸಿ ಮುಂದೇನೂ ಕ್ರಮ ಕೈಗೊಳ್ಳದೇ ಇರಬಹುದೆ?**

ಹೌದು. ಪೊಲೀಸರು ವಿಚಾರಣೆ ನಡೆಸಿದ ಬಳಿಕ ಅಪರಾಧ ಜರುಗಿದೆ ಎನ್ನುವುದಕ್ಕೆ ಆಧಾರವಾಗಿ ಯಾವುದೇ ಸಾಕ್ಷಿ, ಪುರಾವೆಗಳಿಲ್ಲ ಎಂದು ತೀರ್ಮಾನಿಸಿದರೆ ಅಥವಾ ಆರೋಪಗಳನ್ನು ಸಾಬೀತು ಪಡಿಸಲು ಸಾಕಷ್ಟು ಆಧಾರಗಳಿಲ್ಲ ಎಂದು ಕಂಡುಕೊಂಡರೆ ಅಥವಾ ಅಪರಾಧ ನಡೆದಿದೆ ಎಂದು ಸಾಬೀತಾದರೂ ಅಪರಾಧಿಗಳು ಯಾರೆಂದು ಪತ್ತೆಯಾಗದಿದ್ದರೆ, ಆ ಪ್ರಕರಣವನ್ನು ಮುಕ್ತಾಯಗೊಳಿಸಬಹುದು. ಪ್ರಕರಣವನ್ನು ಕೊನೆಗೊಳಿಸುವ ನಿರ್ಧಾರಕ್ಕೆ ಸಮರ್ಪಕವಾದ ಕಾರಣಗಳನ್ನು ಪೊಲೀಸರು ನ್ಯಾಯಾಲಯಕ್ಕೆ ನೀಡಬೇಕಾಗುತ್ತದೆ. ತಮ್ಮ ಈ ನಿರ್ಧಾರದ ಬಗ್ಗೆ ಪೊಲೀಸರು ದೂರು ನೀಡಿದ ನಿಮಗೂ ತಿಳಿಸಬೇಕಾಗುತ್ತದೆ. ಹೀಗೆ ಮಾಡಿದಾದಲ್ಲಿ ಪ್ರಕರಣವನ್ನು ಮುಕ್ತಾಯಗೊಳಿಸಿದುದರ ವಿರುದ್ಧ ನೀವು ನ್ಯಾಯಾಲಯದ ಮೊರೆ ಹೋಗಬಹುದು.

**68. ಪ್ರಕರಣವು ಯಾವ ಹಂತದಲ್ಲಿದೆ ಎಂಬುದರ ಬಗ್ಗೆ ನನಗೆ ಮಾಹಿತಿ ನೀಡಲಾಗುವುದೇ?**

ನಿಮ್ಮ ಪ್ರಕರಣವು ಯಾವ ಹಂತದಲ್ಲಿದೆ ಎಂಬುದನ್ನು ನಿಮಗೆ ತಿಳಿಸಬೇಕೆಂಬ ಯಾವುದೇ ನಿಯಮ ಅಥವಾ ಕಾನೂನು ಇಲ್ಲ. ಆದರೂ ದೂರಿನ ಬಗ್ಗೆ ಮಾಹಿತಿ ನೀಡುವುದನ್ನು ಉತ್ತಮ ವ್ಯವಹಾರ ಎಂದು ಪರಿಗಣಿಸಬಹುದು. ಆದರೆ ಮಾಹಿತಿ ನೀಡುವುದರಿಂದ ತನಿಖೆಗೆ ಧಕ್ಕೆ ಆಗಬಾರದು.

**69. ಪೊಲೀಸರು ತನಿಖೆ ನಡೆಸಲು ನಿರಾಕರಿಸಿದರೆ, ವಿಳಂಬ ನೀತಿ ಅನುಸರಿಸಿದರೆ ಅಥವಾ ದೊರೆತ ಸುಳಿವುಗಳ ಜಾಡನ್ನು ಹಿಡಿದು ಸರಿಯಾಗಿ ತನಿಖೆ ಮಾಡಲು ನಿರಾಕರಿಸಿದರೆ ನಾನೇನು ಮಾಡಬಹುದು?**

ಪೊಲೀಸರು ನಡೆಸುವ ತನಿಖೆಯಲ್ಲಿ ಯಾರೂ ಹಸ್ತಕ್ಷೇಪ ಮಾಡಬಾರದು ಎಂಬುದು ಕ್ರಿಮಿನಲ್ ಕಾನೂನಿನ ಒಂದು ಪ್ರಮುಖ ಸಿದ್ಧಾಂತ, ಆದರೆ ಪೊಲೀಸರು ವಿನಾಕಾರಣ ತನಿಖೆ ಮುಂದುವರೆಸಲು ನಿರಾಕರಿಸಿದರೆ, ಅಥವಾ ಅತ್ಯಂತ ನಿಧಾನವಾಗಿ ತನಿಖೆ ನಡೆಸುತ್ತಿದ್ದರೆ, ಅಥವಾ ದೊರೆತ ಸುಳಿವುಗಳ ಜಾಡನ್ನು ಹಿಡಿದು ಸರಿಯಾಗಿ ತನಿಖೆ ನಡೆಸದಿದ್ದರೆ ನೀವು ಹಿರಿಯ ಪೊಲೀಸ್ ಅಧಿಕಾರಿಗಳಲ್ಲಿ, ಅಥವಾ ಹತ್ತಿರದ ಮ್ಯಾಜಿಸ್ಟ್ರೇಟರಲ್ಲಿ ದೂರು ಸಲ್ಲಿಸಬಹುದು. ತನಿಖೆಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲು ಅವುಗಳನ್ನು ಕರೆತರಿಸುವ ಅಧಿಕಾರ ಇವರಿಗಿದೆ. ಈ ಸಂದರ್ಭದಲ್ಲಿಯೂ ಎಲ್ಲ ವ್ಯವಹಾರಗಳನ್ನು ಲಿಖಿತ ರೂಪದಲ್ಲಿ ಮಾಡಿ ನಿಮ್ಮ ಅಹವಾಲುಗಳ ಸ್ವೀಕೃತಿಯನ್ನು ಜೋಪಾನವಾಗಿ ಇಟ್ಟುಕೊಳ್ಳುವುದು ಅತ್ಯಗತ್ಯ.




ಹಿರಿಯರಿಂದ ಬಳುವಳಿ

**70. ನನಗೆ ಅಗತ್ಯವಿದ್ದಾಗಲೆಲ್ಲಾ ಪೊಲೀಸರನ್ನು ಬರಹೇಳಬಹುದೆ?**

ಕೆಲವು ಸಂದರ್ಭಗಳಲ್ಲಿ ಮಾತ್ರ ಬರಹೇಳಬಹುದು. ಪೊಲೀಸರ ಸಂಖ್ಯೆ ಕಡಿಮೆ ಇರುವುದರಿಂದ ಹಾಗೂ ಅವರ ಮೇಲಿನ ಕೆಲಸದ ಒತ್ತಡ ಅತಿಯಾಗಿರುವುದರಿಂದ ಸಣ್ಣಪುಟ್ಟ ಸಮಸ್ಯೆಗಳಿಗೆ ಅಥವಾ ಆಧಾರವಿಲ್ಲದ ಆರೋಪಗಳ ವಿಚಾರಣೆ ನಡೆಸಲು ಅವರನ್ನು ಪದೇ ಪದೇ ಸಂಪರ್ಕಿಸುವುದು ಸರಿಯಲ್ಲ. ಆದರೆ ನೀವೇನಾದರೂ ತೊಂದರೆಗೆ ಸಿಲುಕಿದ್ದರೆ, ಇಲ್ಲವೆ

ಯಾವುದೇ ಅಪರಾದ ಘಟಿಸಿದ್ದರೆ, ಅಥವಾ ಘಟಿಸುತ್ತಿದ್ದರೆ, ಅಥವಾ ದೊಂಬಿ, ಗಲಭೆಯಾಗುವ ಸಂಭವವಿದ್ದರೆ, ಇಲ್ಲವೆ ಕೆಲವು ವ್ಯಕ್ತಿಗಳು ಹೊಡೆದಾಡುತ್ತಿದ್ದು ಶಾಂತಿ ವ್ಯವಸ್ಥೆಗೆ ಭಂಗವಾಗುವಂತಿದ್ದರೆ ಅಥವಾ ನಿಮ್ಮ ಬಳಿ ನೀಡಲು ಇನ್ನಾವುದೇ ಗಂಭೀರ ಮಾಹಿತಿ ಇದ್ದರೆ ನೀವು ಪೊಲೀಸರನ್ನು ಬರಹೇಳಬಹುದು. ಆದರೆ ಪೋಲೀಸರ ಕರ್ತವ್ಯಗಳಿಗೆ ಸಂಬಂಧಪಡದ ವಿಷಯಗಳಿಗಾಗಿ ನೀವು ಅವರನ್ನು ಬರಹೇಳುವಂತಿಲ್ಲ. ಕೆಲವೊಮ್ಮೆ ಏನೇ ಘಟನೆ ನಡೆಯದಿದ್ದರೂ ಚೇಷ್ಟೆಗಾಗಿ ಕೆಲವರು ಪೊಲೀಸರನ್ನು ಬರಹೇಳುತ್ತಾರೆ. ಈ ರೀತಿಯಾಗಿ ಕುಚೋದ್ಯ ಮಾಡುವವರನ್ನು ಶಿಕ್ಷೆಗೆ ಗುರಿಪಡಿಸಬಹುದು.

**71. ಯಾವುದೇ ಪೊಲೀಸ್ ಅಧಿಕಾರಿಯು ಹೇಳದೆ ಕೇಳದೆ ನಮ್ಮ ಮನೆಗೆ ನುಗ್ಗಿ ತಪಾಸಣೆ ನಡೆಸಿ ಏನೇ ವಸ್ತುಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳಬಹುದೇ?**

ಕೆಲವೇ ಕೆಲವು ಸೀಮಿತ ಸಂದರ್ಭಗಳಲ್ಲಿ ಮಾತ್ರ ಪೊಲೀಸರು ಹಾಗೆ ನಡೆದುಕೊಳ್ಳಬಹುದು. ಪೊಲೀಸರು ನಿಮ್ಮನ್ನು ಪ್ರಶ್ನಿಸಲು ಬಂದರೆ ನಿಮ್ಮ ಆಹ್ವಾನವಿಲ್ಲದೆ ಅವರು ನಿಮ್ಮ ಮನೆಯ ಒಳಗೆ ಬರುವಂತಿಲ್ಲ. ಆದರೆ ಒಂದು ವೇಳೆ ನೀವು ಅಪರಾಧಿಯನ್ನು ಇಲ್ಲವೇ ಶಂಕಿತ ವ್ಯಕ್ತಿಯನ್ನು ಬಚ್ಚಿಟ್ಟಿದ್ದೀರಿ ಎಂದಾಗಲಿ, ಅಥವಾ ಕಳ್ಳಮಾಲನ್ನು ಮುಚ್ಚಿಟ್ಟಿದ್ದೀರಿ ಎಂದಾಗಲಿ, ಅಥವಾ ನಿಮ್ಮ ಮನೆಯಲ್ಲಿ ಅಕ್ರಮ ಶಸ್ತ್ರಾಸ್ತ್ರವಿದೆ ಎಂದಾಗಲಿ ಪೊಲೀಸರಿಗೆ ಬಲವಾದ ಅನುಮಾನವಿದ್ದರೆ ಅವರು ನಿಮ್ಮ ಮನೆಯೊಳಗೆ ಪ್ರವೇಶಿಸಬಹುದು. ಆಗಲೂ ಸಹ ಅವರು ಮ್ಯಾಜಿಸ್ಟ್ರೇಟರಿಂದ ವಾರಂಟ್ ಪಡೆದಿರಬೇಕು. ಆದರೆ ಅಪರಾಧಿಯನ್ನು ಅಥವಾ ವಸ್ತುಗಳನ್ನು ತುರ್ತಾಗಿ ವಶಪಡಿಸಿಕೊಳ್ಳದಿದ್ದಲ್ಲಿ ಕೈತಪ್ಪಿ ಹೋಗುವ ಸಂಭವವಿದ್ದರೆ ಪೊಲೀಸರು ವಾರಂಟ್ ಇಲ್ಲದೆ ನಿಮ್ಮ ಮನೆಯೊಳಗೆ ಪ್ರವೇಶ ಮಾಡಬಹುದು.



**72. ಅಂದರೆ ಪೊಲೀಸರು ನನ್ನ ಮನೆಯೊಳಗೆ ನುಗ್ಗಿ ಯಾವುದೇ ವಸ್ತುವನ್ನು ವಶಪಡಿಸಿಕೊಳ್ಳಬಹುದೇ?**

ಇಲ್ಲ. ತುರ್ತಾದ ಸಂದರ್ಭಗಳಲ್ಲಿ ಮಾತ್ರ ಹಾಗೆ ಮಾಡಲು ಸಾಧ್ಯ– ಉದಾಹರಣೆಗೆ ಅಪರಾಧಿ ಇಲ್ಲವೇ ಶಂಕಿತ ವ್ಯಕ್ತಿಯು ತಪ್ಪಿಸಿಕೊಳ್ಳುವ ಸಾಧ್ಯತೆ ಇದ್ದಾಗ ಅಥವಾ ಪುರಾವೆಗಳನ್ನು ನಾಶಪಡಿಸುವ ಸಂಭವ ಇದ್ದಾಗ ಮಾತ್ರ ಪೊಲೀಸರು ವಾರಂಟ್ ಇಲ್ಲದೆ ನಿಮ್ಮ ಮನೆಯನ್ನು ಪ್ರವೇಶಿಸಬಹುದು.

ವಾರಂಟ್ ಇರಲಿ ಅಥವಾ ಇಲ್ಲದಿರಲಿ, ತಪಾಸಣೆಯ ವಿಧಾನದ ನಿಯಮಗಳನ್ನು ಪೊಲೀಸರು ಅನುಸರಿಸಲೇಬೇಕು. ಪೊಲೀಸರು ತಮ್ಮೊಡನೆ ಸ್ವತಂತ್ರವಾದ ಮತ್ತು ಸ್ಥಳೀಯರಾದ ಕನಿಷ್ಠ ಇಬ್ಬರು ಸಾಕ್ಷಿಗಳನ್ನು ತಂದಿರಬೇಕು. ತಪಾಸಣೆಯ ಸಂದರ್ಭದಲ್ಲಿ ಮನೆಯ ಯಜಮಾನರನ್ನು ಹೊರಹೋಗಲು ಹೇಳುವಂತಿಲ್ಲ. ಪೊಲೀಸರು ತಾವು ವಶಕ್ಕೆ ತೆಗೆದುಕೊಳ್ಳುವ ಎಲ್ಲ ವಸ್ತುಗಳ ಪಟ್ಟಿ ಮಾಡಬೇಕು, ವಶಪಡಿಸಿಕೊಂಡ ವಸ್ತುಗಳನ್ನು ಪರಿಶೀಲಿಸಿ ತಯಾರಿಸಿದ ಪಟ್ಟಿಯ ಮೇಲೆ ಸಾಕ್ಷಿಗಳು, ಪೊಲೀಸರು ಮತ್ತು ಮನೆಯ ಯಜಮಾನರು ಸಹಿ ಮಾಡಬೇಕು. ಮನೆಯಲ್ಲಿ ಬುರ್ಖಾ (ಪರದಾ) ಧರಿಸುವ ಮಹಿಳೆಯರಿದ್ದರೆ ತಪಾಸಣೆ ನಡೆಸುವ ದಳದಲ್ಲಿ ಮಹಿಳಾ ಅಧಿಕಾರಿ ಇರಬೇಕು. ಅಷ್ಟೇ ಅಲ್ಲ, ಆ ಮಹಿಳೆಯರ ಘನತೆಗೆ ಧಕ್ಕೆಯಾಗದಂತೆ ತಪಾಸಣೆ ನಡೆಸಬೇಕು.

**73. ತಪಾಸಣೆಯ (ಸರ್ಚ್) ವಾರಂಟ್ ಎಂದರೇನು?**

ಸಾರ್ವಜನಿಕರ ಮನೆಗಳು ಹಾಗೂ ಕಚೇರಿಗಳು ಅವರ ಖಾಸಗಿ ಸ್ಥಳಗಳಾಗಿರುವುದರಿಂದ ಸೂಕ್ತ ಕಾರಣವಿಲ್ಲದೆ ಅವುಗಳನ್ನು ಪ್ರವೇಶಿಸಿ ತಪಾಸಣೆ ನಡೆಸಲು ಯಾವುದೇ ಅಧಿಕಾರಿಗೆ ಅವಕಾಶವಿಲ್ಲ. ಹೀಗಾಗಿ ಕಾನೂನು ರೀತ್ಯಾ ಈ ಸ್ಥಳಗಳನ್ನು ಪ್ರವೇಶಿಸಿ ಸಾರ್ವಜನಿಕರ ಖಾಸಗಿ ಜೀವನದ ಅಧಿಕಾರವನ್ನು ಅತಿಕ್ರಮಿಸಲು ಸಮರ್ಪಕವಾದ ಕಾರಣಗಳನ್ನು ನೀಡುವುದು ಅಗತ್ಯ. ಆದುದರಿಂದ ಪೊಲೀಸರು ತಾವು ಯಾವ ಕಾರಣಗಳಿಗಾಗಿ ಯಾವುದೇ ಸ್ಥಳದಲ್ಲಿ ವಸ್ತುಗಳನ್ನು ಅಥವಾ ದಾಖಲೆಗಳನ್ನು ಬಚ್ಚಿಡಲಾಗಿದೆ, ಅಥವಾ ಆರೋಪಿಗಳು ಇಲ್ಲವೇ ಶಂಕಿತ ವ್ಯಕ್ತಿಗಳು ಅಡಗಿಕೊಂಡಿದ್ದಾರೆ ಎಂದು ಗುಮಾನಿ ಪಡುತ್ತಿದ್ದೇವೆ ಎಂಬುದನ್ನು ಮ್ಯಾಜಿಸ್ಟ್ರೇಟರ ಮುಂದೆ ಬಹಿರಂಗ ಪಡಿಸಬೇಕು.




ಪೊಲೀಸರು ನೀಡಿದ ಕಾರಣಗಳು ಸಮಂಜಸವಾಗಿದ್ದು ಬರಿದೇ ಹುಡುಕಾಟದ ಸಬೂಬುಗಳಲ್ಲ ಎಂದು ಮ್ಯಾಜಿಸ್ಟ್ರೇಟರಿಗೆ ಮನವರಿಕೆಯಾದರೆ ತಪಾಸಣೆ ನಡೆಸುವ ಅಧಿಕಾರದ ವಾರಂಟ್ ನೀಡಬಹುದು. ಈ ಅಧಿಕಾರವು ಸೀಮಿತ ರೂಪದ್ದಾಗಿದ್ದು ತಪಾಸಣೆ ನಡೆಸಲು ಅಧಿಕಾರ ಪಡೆದ ಪೊಲೀಸ್ ಅಧಿಕಾರಿಯ ಹೆಸರು ಮತ್ತು ಹುದ್ದೆಯನ್ನು ವಾರಂಟಿನ ಮೇಲೆ ನಮೂದಿಸಲಾಗಿರುತ್ತದೆ. ಈ ವಾರಂಟ್ ನ್ಯಾಯಾಲಯದ ಹಸ್ತಾಕ್ಷರ ಮತ್ತು ಮುದ್ರೆಯನ್ನು ಒಳಗೊಂಡಿರುತ್ತದೆ.

**74. ನಾನು ರಸ್ತೆಯಲ್ಲಿ ಹೋಗುತ್ತಿರುವಾಗ ಪೊಲೀಸರು ನನ್ನನ್ನು ನಿಲ್ಲಿಸಿ ಅವರ ಮನ ಬಂದಂತೆ ಪ್ರಶ್ನೆಗಳನ್ನು ಕೇಳಬಹುದೆ?**

ಇಲ್ಲ. ಸಾಧಾರಣವಾಗಿ ಕಾನೂನಿಗೆ ವಿಧೇಯಕರಾದಂತಹ ಸಾರ್ವಜನಿಕರ ದೈನಂದಿನ ಚಟುವಟಿಕೆಗಳಲ್ಲಿ ಪೊಲೀಸರು ಹಸ್ತಕ್ಷೇಪ ಮಾಡುವಂತಿಲ್ಲ. ಆದರೆ ಯಾವುದೇ ವ್ಯಕ್ತಿಯು ಯಾವುದೇ ಸ್ಥಳದಲ್ಲಿ, ವಿಶೇಷವಾಗಿ ಕತ್ತಲಾದ ಮೇಲೆ, ಠಳಾಯಿಸುತ್ತಿದ್ದರೆ, ಪೊಲೀಸರು ಆತನನ್ನು ನಿಲ್ಲಿಸಿ ಆತನ ಹೆಸರು, ವೃತ್ತಿ ಇತ್ಯಾದಿಗಳ ಬಗ್ಗೆ ಪ್ರಶ್ನಿಸಬಹುದು. ಆತ ಅಲ್ಲಿ ಏನು ಮಾಡುತ್ತಿದ್ದಾನೆ ಎಂದು ವಿಚಾರಿಸಬಹುದು. ಆತನ ಚಲನವಲನಗಳು ಅನುಮಾನಾಸ್ಪದವಾಗಿ ಕಂಡು ಬಂದರೆ ಪೊಲೀಸರು ಆತನನ್ನು ಬಂಧಿಸಲೂಬಹುದು. ಅನೇಕ ಬಾರಿ ಪೊಲೀಸರು ಅನುಮಾನಾಸ್ಪದವಾಗಿ ಕಂಡುಬರುವ ವ್ಯಕ್ತಿಗಳನ್ನು ಮತ್ತು ಪದೇ ಪದೇ ಅಪರಾಧ ಮಾಡುವವರನ್ನು ಬಂಧಿಸಲು ಈ ಅಧಿಕಾರವನ್ನು ಬಳಸುತ್ತಾರೆ. ಈ ಅಧಿಕಾರದ ಅತ್ಯಧಿಕ ಬಳಕೆಯ ಬಗ್ಗೆ ಅನೇಕ ಬಾರಿ ಪೊಲೀಸ್ ಸುಧಾರಣಾ ಸಮಿತಿಗಳಲ್ಲಿ ಚರ್ಚಿಸಲಾಗಿದೆ ಮತ್ತು ಈ ಅಧಿಕಾರದ ದುರ್ಬಳಕೆಯನ್ನು ಖಂಡಿಸಲಾಗಿದೆ.

**75. ನಾನು ಯಾವುದಾದರೂ ಮೆರವಣಿಗೆ ಇಲ್ಲವೇ ರಸ್ತೆ ಬದಿಯ ಸಭೆಯಲ್ಲಿ ಭಾಗವಹಿಸುತ್ತಿದ್ದಾಗ ಪೊಲೀಸರು ನನಗೆ ತಡೆ ಒಡ್ಡಬಹುದೆ?**

ಶಾಂತಿಯುತವಾಗಿ ಸಾಗುತ್ತಿರುವ ಮೆರವಣಿಗೆ ಇಲ್ಲವೇ ಸಭೆಯಲ್ಲಿ ನೀವು ಭಾಗವಹಿಸುತ್ತಿದ್ದರೆ ನಿಮಗೆ ತಡೆ ಒಡ್ಡುವ ಅಧಿಕಾರ ಪೊಲೀಸರಿಗಿಲ್ಲ. ಮೆರವಣಿಗೆಗೆ ಸ್ಥಳೀಯ ಪೊಲೀಸರ ಪರವಾನಗಿ ಪಡೆಯುವುದು ಅಗತ್ಯ. ಯಾವುದೇ ಮೆರವಣಿಗೆಯು ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡಬಹುದು ಅಥವಾ ಹಿಂಸಾಚಾರಕ್ಕೆ ತಿರುಗಬಹುದು ಎಂಬ ಅನುಮಾನ ಪೊಲೀಸರಿಗೆ ಇದ್ದರೆ ಅವರು ಆ ಮೆರವಣಿಗೆಗೆ ಅನುಮತಿ ನೀಡಲು ನಿರಾಕರಿಸಬಹುದು. ಮೆರವಣಿಗೆಯು ಕ್ರಮೇಣ ಅಂಕೆ ತಪ್ಪಿದರೆ ಪೊಲೀಸರು ಅದನ್ನು ನಿಲ್ಲಿಸಬಹುದು. ಗುಂಪುಗೂಡಿದ ಜನರಿಗೆ ಆ ಸ್ಥಳದಿಂದ ನಿರ್ಗಮಿಸಲು ಆದೇಶ ನೀಡಬಹುದು. ತಮ್ಮ ಆದೇಶದ ಪಾಲನೆಯಾಗದಿದ್ದರೆ ಮೆರವಣಿಗೆಯನ್ನು ಚದುರಿಸಲು ಪೊಲೀಸರು ಕ್ರಮಕೈಗೊಳ್ಳಬಹುದು. ಒಂದೆಡೆ ಪರಿಸ್ಥಿತಿಯು ಶಾಂತವಾಗಿ ಇರುವಂತೆ ನೋಡಿಕೊಳ್ಳುವುದು ಪೊಲೀಸರ ಜವಾಬ್ದಾರಿಯಾದರೆ ಇನ್ನೊಂದೆಡೆ ಶಾಂತಿಯುತವಾಗಿ ಸಾರ್ವಜನಿಕ ಸಭೆಗಳನ್ನು ನಡೆಸುವ ನಾಗರಿಕರ ಮೂಲಭೂತ ಹಕ್ಕಿನ ಚಲಾವಣೆಗೆ ಅವಕಾಶ ಒದಗಿಸುವುದು ಕೂಡ ಅವರ ಕರ್ತವ್ಯ.

**76. ಮೆರವಣಿಗೆಯನ್ನು ಇಲ್ಲವೆ ಬೀದಿ ಬದಿಯ ಸಭೆಯನ್ನು ಚದುರಿಸಲು ಪೊಲೀಸರು ಬಲಪ್ರಯೋಗ ಮಾಡಬಹುದೇ?**

ಹೌದು ಪೊಲೀಸರು ಹಾಗೆ ಮಾಡಬಹುದು. ಆದರೆ ಅವರು ಏನೇ ಮಾಡಿದರೂ ಅದು ನ್ಯಾಯೋಚಿತವಾಗಿರಬೇಕು. ನಾಗರಿಕರನ್ನು ಶಿಕ್ಷಿಸುವುದು ಪೊಲೀಸರ ಕೆಲಸವಲ್ಲ. ಸಾರ್ವಜನಿಕರ



ಸುರಕ್ಷತೆ ಹಾಗೂ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದು ಮಾತ್ರ ಅವರ ಕೆಲಸ. ನಿಯಮಾನುಸಾರವಾಗಿ, ಜನಸಂದಣಿಯನ್ನು ನಿಯಂತ್ರಿಸಲು ಪೊಲೀಸರು ಬಲಪ್ರಯೋಗವನ್ನು ಅಂತಿಮ ಅಸ್ತ್ರವನ್ನಾಗಿ ಬಳಸಬೇಕು. ಬಲಪ್ರಯೋಗ ಮಾಡಲೇ ಬೇಕಾದ ಸಂದರ್ಭ ಎದುರಾದರೆ ಪೊಲೀಸರು ಕನಿಷ್ಠ ಪ್ರಮಾಣದಲ್ಲಿ ಮತ್ತು ಪರಿಸ್ಥಿತಿಗೆ ಅನುಗುಣವಾಗಿ ಪ್ರತಿಕ್ರಿಯಿಸಬೇಕು. ಪರಿಸ್ಥಿತಿ ಹತೋಟಿಗೆ ಬರುತ್ತಿದ್ದಂತೆಯೇ ಬಲಪ್ರಯೋಗ ಮಾಡುವುದನ್ನು ನಿಲ್ಲಿಸಬೇಕು. ವಾಸ್ತವದಲ್ಲಿ ಕಾರ್ಯಪಾಲಕ ಮ್ಯಾಜಿಸ್ಟ್ರೇಟರ ಅನುಮತಿ ಇಲ್ಲದೇ ಪೊಲೀಸರು ಬಲಪ್ರಯೋಗ ಮಾಡುವಂತಿಲ್ಲ. ಸ್ಥಳದಲ್ಲಿ ಕಾರ್ಯಪಾಲಕ ಮ್ಯಾಜಿಸ್ಟ್ರೇಟರು ಹಾಜರಿದ್ದು ಬಲವನ್ನು ಪ್ರಯೋಗಿಸಲು ಪೊಲೀಸರಿಗೆ ಆದೇಶ ನೀಡಬೇಕಾಗುತ್ತದೆ. ಈ ರೀತಿಯಾಗಿ ಆದೇಶ ದೊರೆತ ನಂತರವೇ ಯಾವ ಪ್ರಮಾಣದಲ್ಲಿ ಬಲಪ್ರಯೋಗ ಮಾಡಬೇಕೆಂಬುದನ್ನು ಪೊಲೀಸರು ತೀರ್ಮಾನಿಸತಕ್ಕದ್ದು.

**77. ಪೊಲೀಸರು ತಮಗಿಷ್ಟ ಬಂದಂತೆ ಗುಂಡು ಹಾರಿಸಬಹುದೇ?**

ಖಂಡಿತವಾಗಿಯೂ ಇಲ್ಲ, ಮಾರಕಾಸ್ತ್ರಗಳನ್ನು ಪೊಲೀಸರು ಅತ್ಯಂತ ವಿರಳವಾಗಿ ಉಪಯೋಗಿಸಬೇಕು. ಅಸಾಧಾರಣ ಪರಿಸ್ಥಿತಿಗಳಲ್ಲಿ ನಿಯಂತ್ರಣದ ಬೇರೆಲ್ಲ ವಿಧಾನಗಳು ವಿಫಲವಾದ ನಂತರವೇ ಪೊಲೀಸರು ಮಾರಕಾಸ್ತ್ರಗಳನ್ನು ಪ್ರಯೋಗಿಸಬೇಕು. ಇಂತಹ ಸಂದರ್ಭದಲ್ಲಿಯೂ ಕೂಡಾ ಸ್ಥಳದಲ್ಲಿ ಮ್ಯಾಜಿಸ್ಟ್ರೇಟರು ಹಾಜರಿದ್ದು ಪೊಲೀಸರಿಗೆ ಮಾರಕಾಸ್ತ್ರಗಳನ್ನು ಪ್ರಯೋಗಿಸಲು ಅನುಮತಿ ನೀಡಬೇಕಾಗುತ್ತದೆ.

**78. ಜನರ ದೊಂಬಿಯು ಹಿಂಸಾತ್ಮಕ ರೂಪ ತಳೆದು ಕಲ್ಲು ತೂರಾಟದಲ್ಲಿ ತೊಡಗಿದರೆ ಅಥವಾ ಆಸ್ತಿಪಾಸ್ತಿಗೆ ಹಾನಿ ಉಂಟು ಮಾಡಿದರೆ ಪೊಲೀಸರು ಯಾವ ಕ್ರಮ ಕೈಗೊಳ್ಳಬಹುದು?**

ನಾಗರಿಕರ ಪ್ರಾಣ ಮತ್ತು ಆಸ್ತಿಪಾಸ್ತಿಗೆ ಹಾನಿ ಆಗದಂತೆ ನೋಡಿಕೊಳ್ಳುವುದು ಪೊಲೀಸರ ಜವಾಬ್ದಾರಿ. ಆದರೆ ಅವರು ಈ ಜವಾಬ್ದಾರಿಯನ್ನು ಕ್ರಮಬದ್ಧವಾಗಿ ನಿರ್ವಹಿಸಬೇಕು. ಪ್ರಥಮವಾಗಿ, ದೊಂಬಿಗೆ ಚದುರುವಂತೆ ಅನೇಕ ಬಾರಿ ಎಚ್ಚರಿಕೆ ನೀಡಬೇಕು. ಗುಂಪುಗೂಡಿದ



ಜನರಿಗೆ ಚದುರಿಹೋಗಲು ಸಾಕಷ್ಟು ಕಾಲಾವಕಾಶ ನೀಡಬೇಕು. ಅಷ್ಟಾದರೂ ಪರಿಸ್ಥಿತಿಯು ಸುಧಾರಿಸದಿದ್ದಲ್ಲಿ ಮತ್ತೊಮ್ಮೆ ಎಚ್ಚರಿಕೆ ನೀಡಿ ಲಾಠಿ ಪ್ರಹಾರ ಮಾಡಬೇಕು. ಲಾಠಿಯ ಪ್ರಯೋಗ ಸೊಂಟದ ಕೆಳಭಾಗದ ಮೇಲೆ ಮಾತ್ರ ಮಾಡಬೇಕು, ತಲೆ ಮತ್ತು ಭುಜಗಳ ಮೇಲೆ ಹೊಡೆಯುವಂತಿಲ್ಲ. ಗೋಲೀಬಾರ್ ಮಾಡುವುದು ಅನಿವಾರ್ಯವಾದರೆ ಪೊಲೀಸರು ದೊಂಬಿಯ ಮೇಲೆ ಗುರಿ ಇಟ್ಟು "ಗುಂಡು ಹಾರಿಸುವೆವು" ಎಂಬುದಾಗಿ ಎಚ್ಚರಿಕೆಯನ್ನು ನೀಡಬೇಕು. ಇಲ್ಲಿಯೂ ಸಹ ಕನಿಷ್ಠ ಪ್ರಮಾಣದಲ್ಲಿ ಬಲಪ್ರಯೋಗ ಮಾಡಬೇಕೆಂಬ ನಿಯಮವಿದೆ. ಆದುದರಿಂದ ಆದಷ್ಟು ಕೆಳಗಿನವರೆಗೆ ಗುರಿ ಇಟ್ಟು ದೊಂಬಿಯ ಅತ್ಯಂತ ಅಪಾಯಕಾರಿಯಾದ ಭಾಗದೆಡೆಗೆ ಗುಂಡು ಹಾರಿಸಬೇಕು. ದೊಂಬಿಯನ್ನು ಚದುರಿಸುವುದಷ್ಟೇ ಗೋಲೀಬಾರಿನ ಉದ್ದೇಶ, ಗುಂಪುಗೂಡಿದ ಜನರನ್ನು ಸಾವಿಗೀಡು ಮಾಡುವುದಲ್ಲ. ದೊಂಬಿಯು ಚದುರುವ ಲಕ್ಷಣಗಳು ಕಂಡುಬರುತ್ತಿದ್ದಂತಯೇ ಗುಂಡು ಹಾರಿಸುವುದನ್ನು ನಿಲ್ಲಿಸಬೇಕು. ಗಾಯಾಳುಗಳನ್ನು ಶೀಘ್ರವಾಗಿ ಆಸ್ಪತ್ರೆಗೆ ಸಾಗಿಸುವ ವ್ಯವಸ್ಥೆ ಮಾಡಬೇಕು. ಇಷ್ಟೇ ಅಲ್ಲದೆ ಪ್ರತಿಯೊಬ್ಬ ಅಧಿಕಾರಿಯೂ ಕಾರ್ಯಾಚರಣೆಯಲ್ಲಿ ತಾನು ನಿರ್ವಹಿಸಿದ ಪಾತ್ರದ ಬಗ್ಗೆ ವರದಿಯನ್ನು ದಾಖಲಿಸಬೇಕು.

**79. ಪೊಲೀಸರು ನನ್ನನ್ನು ಗೌಪ್ಯವಾದ ಸ್ಥಳದಲ್ಲಿ ಹಿಡಿದಿಡಬಹುದೇ ಅಥವಾ ನನ್ನನ್ನು ಹಿಡಿದಿಟ್ಟಿರುವ ವಿಚಾರವನ್ನು ಯಾರಿಗೂ ತಿಳಿಸದೇ ಇರಬಹುದೆ?**

ಇಲ್ಲ. ಪೊಲೀಸರು ಆಗಾಗ್ಗೆ ಈ ರೀತಿ ಮಾಡುತ್ತಾರಾದರೂ ಇದು ಕಾನೂನಿಗೆ ವಿರುದ್ಧವಾದ ಕ್ರಮ. ಪೊಲೀಸರು ನಿಮ್ಮನ್ನು ತಮ್ಮ ವಶಕ್ಕೆ ತೆಗೆದುಕೊಂಡ ಕೂಡಲೆ ನಿಮ್ಮ ಹಕ್ಕುಗಳನ್ನು ಗೌರವಿಸಬೇಕು. ನಿಮ್ಮ ದೈಹಿಕ ಸುಭದ್ರತೆಯ ಜವಾಬ್ದಾರಿಯೂ ಅವರದಾಗುತ್ತದೆ. ನಿಮಗೇನಾದರೂ ಹಾನಿಯಾದರೆ ಅಥವಾ ನಿಮ್ಮ ಹಕ್ಕುಗಳ ಉಲ್ಲಂಘನೆಯಾದರೆ ಪೊಲೀಸರೇ ಅದಕ್ಕೆ ಜವಾಬ್ದಾರರು.

ಪೊಲೀಸ್ ಠಾಣೆಗೆ ಬರುವ ಎಲ್ಲ ವ್ಯಕ್ತಿಗಳ ವಿವರಗಳನ್ನು ಠಾಣೆಯ ಸಾಮಾನ್ಯ ದಿನಚರಿಯಲ್ಲಿ (ಸ್ಟೇಶನ್ ಡೈರಿ) ದಾಖಲು ಮಾಡುವುದು ಪೊಲೀಸರ ಕರ್ತವ್ಯ. ನಿಮ್ಮನ್ನು ಯಾವಾಗ ಠಾಣೆಗೆ ಕರೆತರಲಾಯಿತು ಹಾಗೂ ಯಾವಾಗ ಬಂಧಿಸಲಾಯಿತು ಎಂಬುದು ಠಾಣೆಯ ದಿನಚರಿಯಿಂದ ತಿಳಿಯುತ್ತದೆ. ಈ ವಿವರ ತನಿಖೆ ನಡೆಸುತ್ತಿರುವ ಅಧಿಕಾರಿಯ ಪ್ರಕರಣದ ದಿನಚರಿಯಲ್ಲಿಯೂ (ಕೇಸ್ ಡೈರಿ) ದಾಖಲಾಗಿರುತ್ತದೆ. ಕಳೆದ 12 ಗಂಟೆಗಳಲ್ಲಿ ಯಾರನ್ನೆಲ್ಲ ಬಂಧಿಸಲಾಯಿತು ಎಂಬುದರ ವಿವರಗಳನ್ನು ಪೊಲೀಸ್ ನಿಯಂತ್ರಣ ಕೊಠಡಿಯಲ್ಲಿ (ಕಂಟ್ರೋಲ್ ರೂಂ) ಪ್ರದರ್ಶಿಸಬೇಕು.

ಇಷ್ಟೇ ಅಲ್ಲದೆ ಪೊಲೀಸರಿಂದ ನಿಮ್ಮ ವಿಚಾರಣೆ ನಿಮ್ಮ ವಕೀಲರ ಸಮ್ಮುಖದಲ್ಲಿ ನಡೆಯಬೇಕು. ಇದು ನಿಮ್ಮ ಹಕ್ಕು. ಇದರಿಂದಾಗಿ ಕನಿಷ್ಠ ಪಕ್ಷ ನಿಮ್ಮನ್ನು ಪೊಲೀಸರು ಎಲ್ಲಿ ಬಂಧಿಸಿಟ್ಟಿದ್ದಾರೆ ಎಂಬ ಮಾಹಿತಿಯು ನಿಮ್ಮ ಬಂಧು ಮಿತ್ರರಿಗೆ ದೊರೆಯುತ್ತದೆ.

**80. ಪೊಲೀಸರು ನನ್ನನ್ನು ಠಾಣೆಯಲ್ಲಿ ಹಿಡಿದಿಡಬಹುದೇ ಅಥವಾ ನನಗೆ ಬೇಕೆನಿಸಿದಾಗ ನಾನು ಠಾಣೆಯಿಂದ ಹೊರಬರಬಹುದೇ?**

ಸರಿಯಾದ ಕಾರಣಗಳಿಗಾಗಿ ಪೊಲೀಸರು ನಿಮ್ಮನ್ನು ಅಧಿಕೃತವಾಗಿ ಬಂಧನಕ್ಕೊಳಪಡಿಸದಿದ್ದರೆ ಠಾಣೆಯಲ್ಲಿ ನಿಮ್ಮನ್ನು ಹಿಡಿದಿಡುವಂತಿಲ್ಲ.

ಪೊಲೀಸರು ನಿಮ್ಮನ್ನು ವಿಚಾರಣೆಗೆ ಕರೆದಾಗ ಅವರೊಂದಿಗೆ ಸಹಕರಿಸುವುದು ನಿಮ್ಮ ಕರ್ತವ್ಯ. ಪೊಲೀಸರು ನಿಮ್ಮ ವಿಚಾರಣೆಯನ್ನು ತ್ವರಿತವಾಗಿ ಮತ್ತು ಸಮರ್ಥವಾಗಿ ನಡೆಸಬೇಕು. ವಿಚಾರಣೆಯನ್ನು ಗಂಟೆಗಟ್ಟಲೆ ಎಳೆಯುವಂತಿಲ್ಲ, ಅಥವಾ ನಿಮ್ಮನ್ನು ಹೆಚ್ಚು ಸಮಯದವರೆಗೆ ಠಾಣೆಯಲ್ಲಿ ಇರಿಸಿ ಕೊಳ್ಳುವಂತಿಲ್ಲ. ಅದೇನೇ ಆದರೂ ನೀವು ಅಗತ್ಯವೆನಿಸಿದಾಗ ಠಾಣೆಯಿಂದ ನಿರ್ಗಮಿಸಬಹುದು.



**81. ಒಂದು ವೇಳೆ ಪೊಲೀಸ್ ಅಧಿಕಾರಿಯು ನನಗೆ ನಿರ್ಗಮಿಸಲು ಅವಕಾಶ ನೀಡದಿದ್ದರೆ ಏನು ಮಾಡಬೇಕು?**

ಅಧಿಕೃತವಾಗಿ ನಿಮ್ಮನ್ನು ಮಾಡಿರದಿದ್ದರೆ ಕ್ಷಣ ಕಾಲವೂ ನಿಮ್ಮ ಇಚ್ಛೆಗೆ ವಿರುದ್ಧವಾಗಿ ನಿಮ್ಮನ್ನು ಬಂಧನದಲ್ಲಿರಿಸುವುದು ಗಂಭೀರ ಅಪರಾಧವಾಗುತ್ತದೆ. ಇದನ್ನು ಅಕ್ರಮ ಸೆರೆ ಎಂದು ಪರಿಗಣಿಸಲಾಗುತ್ತದೆ. ನೀವಾಗಲೀ ನಿಮ್ಮ ಕುಟುಂಬದವರಾಗಲೀ, ಅಥವಾ ನಿಮ್ಮ ಸ್ನೇಹಿತರಾಗಲೀ ನಿಮ್ಮ ಅಕ್ರಮ ಸೆರೆಗೆ ಕಾರಣರಾದ ಪೊಲೀಸ್ ಅಧಿಕಾರಿಯ ವಿರುದ್ಧ ಆತನ ಮೇಲಧಿಕಾರಿಗೆ ಅಥವಾ ಮ್ಯಾಜಿಸ್ಟ್ರೇಟರಿಗೆ ದೂರು ನೀಡಬಹುದು. ಅತ್ಯಂತ ಮುಖ್ಯವಾದ ವಿಷಯವೇನೆಂದರೆ ನೀವು ತತ್‌ಕ್ಷಣವೇ ನಿಮ್ಮ ವಕೀಲರ, ನಿಮ್ಮ ಕುಟುಂಬದವರ, ಇಲ್ಲವೇ ಸ್ನೇಹಿತರ ಮೂಲಕ ಉಚ್ಚ ನ್ಯಾಯಾಲಯದಲ್ಲಿ ಇಲ್ಲವೇ ಸರ್ವೋಚ್ಚ ನ್ಯಾಯಾಲಯದಲ್ಲಿ ನಿಮ್ಮನ್ನು ಕೂಡಲೇ ಬಿಡುಗಡೆ ಮಾಡುವಂತೆ ದಾವೆ ಹೂಡಬಹುದು. ಇದಕ್ಕೆ ವ್ಯಕ್ತಿಯ ಪ್ರತ್ಯಕ್ಷ ಹಾಜರಿ ದಾವೆ ಅಥವಾ ಹೇಬಿಯಸ್ ಕಾರ್ಪಸ್ ಪಿಟೀಶನ್ ಎಂದು ಹೆಸರು.

**82. ಹೇಬಿಯಸ್ ಕಾರ್ಪಸ್ ಎಂದರೇನು?**




ಹಿಂದಿನ ಕಾಲದಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ ಸರ್ವಶಕ್ತ ರಾಜ ಮಹಾರಾಜರ ಬಂಟರು ಅಸಹಾಯಕ ಜನರನ್ನು ಸೆರೆ ಹಿಡಿದಿಟ್ಟಾಗ ಅವರನ್ನು ಬಿಡುಗಡೆಗೊಳಿಸಲು ಉಪಯೋಗಿಸಲಾಗುತ್ತಿದ್ದ ಪರಿಹಾರೋಪಾಯವೇ ಹೇಬಿಯಸ್ ಕಾರ್ಪಸ್ ಪಿಟೀಶನ್. ಕನ್ನಡದಲ್ಲಿ ಇದಕ್ಕೆ ವ್ಯಕ್ತಿಯ ಪ್ರತ್ಯಕ್ಷ ಹಾಜರಿ ದಾವೆ ಎಂದು ಹೆಸರು. ಅಧಿಕಾರದ ದುರುಪಯೋಗಕ್ಕೆ ಈ ದಾವೆ ಹಳೆ ಮದ್ದು. "ಶರೀರವನ್ನು ಪ್ರತ್ಯಕ್ಷವಾಗಿ ಹಾಜರು ಪಡಿಸು" ಎಂಬುದು ಇದರ ಅರ್ಥ. ಅಕ್ರಮ ಸೆರೆಗೆ ಇದು ಸರಿಯಾದ ಪರಿಹಾರ. ನ್ಯಾಯಾಲಯಗಳು ಒಂದೋ ಉಚ್ಚ ನ್ಯಾಯಾಲಯ ಇಲ್ಲವೇ ಸರ್ವೋಚ್ಚ ನ್ಯಾಯಾಲಯ ಈ ದಾವೆಯನ್ನು ತಡಮಾಡದೆ ತುರ್ತಾಗಿ ವಿಚಾರಣೆಗೆ ಎತ್ತಿಕೊಳ್ಳುತ್ತವೆ. ಕಣ್ಮರೆಯಾದ ವ್ಯಕ್ತಿಯು ಅಂತಿಮ ಬಾರಿ ಪೊಲೀಸರ ವಶದಲ್ಲಿ ಇದ್ದಂತೆ ನಿಮ್ಮ ದಾವೆಯಿಂದ ಕಂಡುಬಂದರೆ ನ್ಯಾಯಾಲಯವು ಆ ವ್ಯಕ್ತಿಯನ್ನು ಶೀಘ್ರಾತಿಶೀಘ್ರವಾಗಿ ಹಾಜರುಪಡಿಸುವಂತೆ ಪೊಲೀಸರಿಗೆ ಆದೇಶ ನೀಡುತ್ತದೆ. ಆ ವ್ಯಕ್ತಿಯನ್ನು ಬಂಧನದಲ್ಲಿಡಲು ನ್ಯಾಯಬದ್ಧ ಕಾರಣಗಳಿಲ್ಲದಿದ್ದರೆ ಆತನನ್ನು ಕೂಡಲೇ ಬಿಡುಗಡೆಗೊಳಿಸುವಂತೆ ಪೊಲೀಸರಿಗೆ ಆದೇಶ ನೀಡುತ್ತದೆ. ಇಂತಹ ಪ್ರಕರಣಗಳಲ್ಲಿ ಅಕ್ರಮಸೆರೆಗೀಡಾದ ವ್ಯಕ್ತಿಗಳಿಗೆ ಪರಿಹಾರಧನ ನೀಡುವಂತೆ ನ್ಯಾಯಾಲಯವು ಸರ್ಕಾರಕ್ಕೆ ಆದೇಶ ನೀಡಬಹುದು.

**83. ಅಕ್ರಮವಾಗಿ ಬಂಧನಕ್ಕೊಳಗಾದ ವ್ಯಕ್ತಿಯು ಎಲ್ಲಿದ್ದಾನೆ ಎಂಬುದನ್ನು ತಿಳಿದುಕೊಳ್ಳಲು ಇನ್ನಾವುದಾದರೂ ದಾರಿ ಇದೆಯೇ?**

ಹೌದು ಇನ್ನೊಂದು ದಾರಿ ಇದೆ. ನೀವು ಮಾಹಿತಿ ಹಕ್ಕು ಕಾಯ್ದೆ, *2005* ರ ಅನುಸಾರ ಪೊಲೀಸ್ ಠಾಣೆಯಲ್ಲಿ ಅರ್ಜಿ ಸಲ್ಲಿಸಿ ಅಕ್ರಮ ಸೆರೆಯಲ್ಲಿರುವ ವ್ಯಕ್ತಿಯ ಬಗ್ಗೆ ಮಾಹಿತಿ ಕೇಳಬಹುದು. ಇದು ವ್ಯಕ್ತಿಯ ಪ್ರಾಣ ಹಾಗೂ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟಿರುವುದರಿಂದ ಪೊಲೀಸರು 48 ಗಂಟೆಗಳ ಒಳಗಾಗಿ ನಿಮಗೆ ಮಾಹಿತಿ ನೀಡಬೇಕು.

**84. ಯಾವುದೇ ಕಾರಣವನ್ನು ನೀಡದೆ ಪೊಲೀಸರು ನನ್ನನ್ನು ಬಂಧಿಸಬಹುದೇ?**

ಇಲ್ಲ. ಸರಿಯಾದ ಕಾರಣವಿಲ್ಲದೆ ಪೊಲೀಸರು ಯಾರನ್ನೂ ಬಂಧಿಸುವಂತಿಲ್ಲ. ಯಾವುದೇ ವ್ಯಕ್ತಿಯು ಅಪರಾಧ ಮಾಡುತ್ತಿರುವಾಗ ರೆಡ್‌ಹ್ಯಾಂಡಾಗಿ (ಪ್ರತ್ಯಕ್ಷವಾಗಿ)ಸಿಕ್ಕಿಬಿದ್ದರೆ ಇಲ್ಲವೇ ತನಿಖೆಯ ಸಂದರ್ಭದಲ್ಲಿ ಯಾವುದೇ ವ್ಯಕ್ತಿಯ ಬಗ್ಗೆ ಬಲವಾದ ಗುಮಾನಿ ಉಂಟಾದರೆ ಪೊಲೀಸರು ಆತನನ್ನು ಬಂಧಿಸ ಬಹುದಾಗಿದೆ. ಒಬ್ಬ ವ್ಯಕ್ತಿಯು ಮತ್ತೊಬ್ಬನಿಗೆ ಅಪರಾಧ ಮಾಡಲು ಅಥವಾ

ಅಪರಾಧ ಮಾಡಿದ ನಂತರ ಪರಾರಿಯಾಗಲು, ಇಲ್ಲವೇ ಅಪರಾಧದ ಸಾಕ್ಷ್ಯಗಳನ್ನು ನಾಶಮಾಡಲು ಸಹಾಯ ಮಾಡಿದರೆ ಆತನನ್ನೂ ಬಂಧಿಸಬಹುದಾಗಿದೆ. ಯಾರನ್ನೇ ಆಗಲಿ ಬಂಧಿಸಲು ಬಲವಾದ ಕಾರಣಗಳಿರ ಬೇಕು. ಯಾರೋ ಒಬ್ಬರು ಎಫ್.ಐ.ಆರಿನಲ್ಲಿ ಇನ್ಯಾರೋ ವ್ಯಕ್ತಿಯನ್ನು ಹೆಸರಿಸಿದ ಮಾತ್ರಕ್ಕೆ ಆತನನ್ನು ಬಂಧಿಸುವಂತಿಲ್ಲ. ಯಾವುದೇ ವ್ಯಕ್ತಿಯನ್ನು ಬಂಧಿಸಬೇಕಿದ್ದರೆ ಆತನ ವಿರುದ್ಧ ಸಾಕಷ್ಟು ಪ್ರಮಾಣದಲ್ಲಿ ಸಾಕ್ಷ್ಯಗಳಿರಬೇಕು. ಭಾರತದಲ್ಲಿ ಶೇಕಡ 60ರಷ್ಟು ದಸ್ತಗಿರಿಗಳು ಅನಾವಶ್ಯಕ ಅಥವಾ ನ್ಯಾಯಬಾಹಿರವಾದವು ಎಂಬುದು ಕಾನೂನು ತಜ್ಞರ ವಾದ.

**85. ನಾನು ಯಾವುದಾದರೂ ಅಪರಾಧ ಮಾಡಿದ್ದೇನೆ ಎಂಬ ಅನುಮಾನದ ಮೇಲೆ ಪೊಲೀಸರು ನನ್ನ ಕುಟುಂಬದವರನ್ನೂ ಬಂಧಿಸಬಹುದೆ?**

ಇಲ್ಲ ಹಾಗೆ ಮಾಡುವಂತಿಲ್ಲ. ಅಪರಾಧಿಯೊಡನೆ ಏನೋ ಸಂಬಂಧವಿದೆ ಎಂಬ ಒಂದೇ ಕಾರಣಕ್ಕಾಗಿ ಯಾರನ್ನೂ ದಸ್ತಗಿರಿ ಮಾಡುವಂತಿಲ್ಲ. ಒಬ್ಬ ವ್ಯಕ್ತಿಯು ದೋಷಿಯೇ ಅಥವಾ ನಿರ್ದೋಷಿಯೇ ಎಂಬುದನ್ನು ಆತನ ಕೃತ್ಯಗಳ ಆಧಾರದ ಮೇಲೆ ತೀರ್ಮಾನಿಸಬೇಕು. ಯಾವುದೋ ಸಂಶಯಾಸ್ಪದ ವ್ಯಕ್ತಿಗೆ ಹತ್ತಿರದವರು ಅಥವಾ ಆತನ ಸಂಬಂಧಿಕರು ಎಂಬ ಕಾರಣಕ್ಕಾಗಿ ಯಾರನ್ನೂ ದೋಷಿ ಎಂದು ಪರಿಗಣಿಸುವಂತಿಲ್ಲ. ನ್ಯಾಯಬದ್ಧವಾದ ಕಾರಣವಿಲ್ಲದೆ ಪೊಲೀಸರು ಯಾವುದೇ ವ್ಯಕ್ತಿಯ ಸ್ವಾತಂತ್ರ್ಯಹರಣ ಮಾಡುವಂತಿಲ್ಲ.

ಪೊಲೀಸರು ಆರೋಪಿಗಳ ಕುಟುಂಬದವರನ್ನು ಅಥವಾ ಅವರ ಸ್ನೇಹಿತರನ್ನು ಬೆದರಿಸುವಂತಿಲ್ಲ. ಅವರನ್ನು ಸೆರೆಯಲ್ಲಿಡುವುದಾಗಲೀ ಇಲ್ಲವೇ ದಾಳಗಳಂತೆ ಬಳಸುವುದಾಗಲೀ ಸಲ್ಲದು. ಆರೋಪಿಗಳ ಕುಟುಂಬದವರನ್ನು ಮತ್ತು ಸ್ನೇಹಿತರನ್ನು ಒತ್ತೆಯಾಳುಗಳಂತೆ ಬಳಸಿಕೊಳ್ಳುವುದು 'ಅಕ್ರಮ ಸೆರೆ' ಎಂಬ ಗಂಭೀರ ಅಪರಾಧವಾಗುತ್ತದೆ. ಇಲ್ಲವೇ ಕನಿಷ್ಠ ಪಕ್ಷ ಇದನ್ನು ಅಪಹರಣವೆಂದು ಪರಿಗಣಿಸಲಾಗುತ್ತದೆ.

ಪ್ರಕರಣವು ಎಷ್ಟೇ ಕ್ಲಿಷ್ಟವಾಗಿದ್ದರೂ ಪೊಲೀಸರು ಕಾನೂನು ಬಾಹಿರ ಕ್ರಮಗಳನ್ನು ಕೈಗೊಂಡು ಶಂಕಿತ ವ್ಯಕ್ತಿಯ ಮೇಲೆ ಒತ್ತಡ ಹೇರಿ ಪೊಲೀಸರಿಗೆ ಶರಣಾಗುವಂತೆ ಬಲವಂತ ಮಾಡುವ ಹಾಗಿಲ್ಲ. ತಪ್ಪೊಪ್ಪಿಗೆ ನೀಡುವಂತೆಯೂ ಬಲವಂತ ಮಾಡುವ ಹಾಗಿಲ್ಲ. ಯಾವುದೇ ವ್ಯಕ್ತಿಯು ಅಪರಾಧವೆಸಗಿದ್ದಾನೆ ಎಂಬ ಆರೋಪಕ್ಕೆ ನ್ಯಾಯೋಚಿತವಾದ ಆಧಾರ ಗಳಿದ್ದರೆ ಮಾತ್ರ ಆತನನ್ನು ದಸ್ತಗೀರು ಮಾಡಲು ಕಾನೂನಿನಲ್ಲಿ ಅವಕಾಶವಿದೆ.



**86. ಮಹಿಳೆಯರನ್ನು ದಸ್ತಗಿರಿ ಮಾಡುವ ಬಗ್ಗೆ ಹಾಗೂ ಬಂಧನದಲ್ಲಿಟ್ಟ ಮಹಿಳೆಯರನ್ನು ನೋಡಿಕೊಳ್ಳುವ ಬಗ್ಗೆ ವಿಶೇಷವಾದ ನಿಯಮಗಳಿವೆಯೇ?**

ಖಂಡಿತವಾಗಿಯೂ ಇವೆ. ಅತ್ಯಂತ ವಿಶೇಷವಾದ ಕಾರಣಗಳಿಲ್ಲದೆ ಸೂರ್ಯಾಸ್ತವಾದ ಮೇಲೆ ಹಾಗೂ ಸೂರ್ಯೋದಯದ ಮುನ್ನ ಮಹಿಳೆಯರನ್ನು ದಸ್ತಗಿರಿ ಮಾಡುವಂತಿಲ್ಲ. ಅಪವೇಳೆಯಲ್ಲಿ ಒಬ್ಬ ಮಹಿಳೆಯ ದಸ್ತಗಿರಿ ಮಾಡಬೇಕಿದ್ದರೆ ಮ್ಯಾಜಿಸ್ಟ್ರೇಟರಿಂದ ಲಿಖಿತದಲ್ಲಿ ವಿಶೇಷ ಅನುಮತಿಯನ್ನು ಪಡೆಯಬೇಕಾಗುತ್ತದೆ. ಅನುಮತಿ ನೀಡುವ ಮುನ್ನ ಅಪವೇಳೆಯಲ್ಲಿ ಆ ಮಹಿಳೆಯನ್ನು ಬಂಧಿಸಲು ಬಲವಾದ ಕಾರಣಗಳಿವೆ ಎಂದು ಮ್ಯಾಜಿಸ್ಟ್ರೇಟರಿಗೆ ಮನವರಿಕೆ ಮಾಡಿಕೊಡಬೇಕಾಗುತ್ತದೆ. ಯಾವುದೇ ಮಹಿಳೆಯನ್ನು ಪೊಲೀಸರು ದಸ್ತಗಿರಿ ಮಾಡುವಾಗ ಮಹಿಳಾ ಪೊಲೀಸ್ ಅಧಿಕಾರಿಯು ಹಾಜರಿರುವುದು ಅತ್ಯಗತ್ಯ. ಬಂಧಿಸಿದ ಮಹಿಳೆಯನ್ನು ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಲಾಕಪ್ಪಿನಲ್ಲಿ ಇರಿಸಬೇಕು. ಮಹಿಳಾ ಅಧಿಕಾರಿ ಅಥವಾ ಮಹಿಳಾ ವೈದ್ಯರು ಮಾತ್ರ ಬಂಧಿಸಲ್ಪಟ್ಟ ಮಹಿಳೆಯ ದೇಹಪರೀಕ್ಷೆ ಅಥವಾ ತಪಾಸಣೆಯನ್ನು ನಡೆಸಬೇಕು. ಮಹಿಳೆಯರನ್ನು ಬಂಧಿಸುವಾಗ ಈ ಎಲ್ಲ ವಿಶೇಷ ನಿಯಮಗಳನ್ನು ಪಾಲಿಸಿದ ಬಗ್ಗೆ ಎಚ್ಚರಿಕೆಯಿಂದ ಮತ್ತು ಕೂಲಂಕಷವಾಗಿ ದಾಖಲೆಗಳನ್ನು ತಯಾರು ಮಾಡಿಡುವುದು ಪೊಲೀಸರ ಹಿತದೃಷ್ಟಿಯಿಂದ ಒಳ್ಳೆಯದು. ಪೊಲೀಸರ ವಶದಲ್ಲಿರುವ ಮಹಿಳೆಯು ತನ್ನ ಮಾನಭಂಗವಾಯಿತೆಂದು ಆರೋಪ ಮಾಡಿದರೆ ನ್ಯಾಯಾಲಯವು ಅದನ್ನು ಕೇವಲ ಆಕೆಯ ಹೇಳಿಕೆಯ ಆಧಾರದ ಮೇಲೆ ಸತ್ಯವೆಂದು ಒಪ್ಪಿಕೊಳ್ಳುತ್ತದೆ. ಆ ಆರೋಪವು ಸತ್ಯಾಧಾರಿತವಾದುದಲ್ಲ ಎಂಬುದನ್ನು ಸಾಬೀತುಗೊಳಿಸುವುದು ಪೊಲೀಸ್ ಅಧಿಕಾರಿಯ ಜವಾಬ್ದಾರಿ.

**87. ಮಕ್ಕಳನ್ನು ಬಂಧಿಸುವ ಬಗ್ಗೆ ಏನಾದರೂ ವಿಶೇಷವಾದ ಕ್ರಮವಿದೆಯೇ?**



ಸಾಮಾನ್ಯ ಕಾಯ್ದೆಯ ಪ್ರಕಾರ ಏಳು ವರ್ಷಕ್ಕೂ ಕಿರಿಯ ವಯಸ್ಸಿನ ಮಕ್ಕಳನ್ನು ಅಪರಾಧಿಗಳೆಂದು ಪರಿಗಣಿಸುವಂತಿಲ್ಲ. ಆದುದರಿಂದ, ಪೊಲೀಸರು ಮಕ್ಕಳನ್ನು ತಮ್ಮ ವಶಕ್ಕೆ **ತೆಗೆದುಕೊಳ್ಳುವಂತಿಲ್ಲ**. ಆದರೆ 18 ವರ್ಷದವರೆಗಿನ ಮಕ್ಕಳನ್ನು ಪ್ರಶ್ನಿಸುವ ಬಗ್ಗೆ, ಜಾಮೀನು ನೀಡುವ ಬಗ್ಗೆ ಸಂಬಂದಪಟ್ಟ ನಿಯಮಗಳು ಬಾಲಾಪರಾಧಿ ಕಾಯ್ದೆಯಲ್ಲಿವೆ. [ಜುವೆನೈಲ್ ಜಸ್ಟೀಸ್ *(ಕೇರ್ ಅಂಡ್ ಪ್ರೊಟೆಕ್ಷನ್ ಆಫ್ ಚಿಲ್ಡ್ರನ್) ಆಕ್ಟ್, 2002*]

ಪ್ರತಿಯೊಂದು ಪೊಲೀಸ್ ಠಾಣೆಯಲ್ಲಿಯೂ ನುರಿತ ಅಧಿಕಾರಿಗಳನ್ನು ಒಳಗೊಂಡಂತಹ ಬಾಲಾಪರಾಧಿ ಘಟಕವಿರಬೇಕು. ಠಾಣೆಗೆ ಕರೆತಂದ ಮಕ್ಕಳ ಹಿತರಕ್ಷಣೆ ಪೊಲೀಸರ ಜವಾಬ್ದಾರಿ. ಮಕ್ಕಳನ್ನು ಲಾಕಪ್ಪಿನಲ್ಲಿ ಇಡಲೇಬಾರದು. ಠಾಣೆಗೆ ಕರೆತಂದ ಮಕ್ಕಳನ್ನು ವಿಳಂಬವಿಲ್ಲದಂತೆ ಜಾಮೀನಿನ ಮೇಲೆ ಅಥವಾ ಸದ್ವ್ಯವಹಾರದ ಆಶ್ವಾಸನೆಗಳ ಮೇರೆಗೆ ಅವರ ಪೋಷಕರಿಗೆ ಹಿಂದಿರುಗಿಸತಕ್ಕದ್ದು. ಪೋಷಕರು ಇಲ್ಲದಿದ್ದರೆ ಅಥವಾ ಮಕ್ಕಳು ದುಷ್ಟರ ಸಹವಾಸಕ್ಕೆ ಬೀಳುವ ಸಂಭವವಿದ್ದರೆ ಅವರನ್ನು ಬಾಲಾಪರಾಧ ನ್ಯಾಯಾಲಯದ ಮುಂದೆ ಹಾಜರುಪಡಿಸುವ ತನಕ ಸ್ಥಳೀಯ ನಿಗಾವಣಾ ಗೃಹಕ್ಕೆ (ಅಬ್ಸರ್ವೇಶನ್ ಹೋಮ್) ಕಳುಹಿಸಬೇಕು. ಕಾನೂನಿನೊಂದಿಗೆ ತೊಡಕಿಗೆ ಸಿಲುಕಿದ ಮಕ್ಕಳ ಬಗ್ಗೆ ಕೈಗೊಳ್ಳುವ ಎಲ್ಲಾ ಕ್ರಮಗಳು ಅವರಿಗೆ ಅನುಕೂಲಕರವಾದಂತಹವು ಆಗಿರಬೇಕು. ಆ ಮಕ್ಕಳ ಸರ್ವಶ್ರೇಷ್ಠ ಹಿತದ ದೃಷ್ಟಿಯಿಂದ ಅವರ ಸಂಪೂರ್ಣ ಪುನರ್ವಸತಿಗೆ ಅನುವು ಮಾಡಿಕೊಡುವಂತಿರಬೇಕು ಎಂಬುದು ಬಾಲಾಪರಾಧ ಕಾಯ್ದೆಯ ಪ್ರಮುಖ ಸಿದ್ಧಾಂತ.

**88. ಪೊಲೀಸರು ನನ್ನನ್ನು ದಸ್ತಗೀರು ಮಾಡಿದರೆ ಅವರಿಗೆ ಇಷ್ಟ ಬಂದಷ್ಟು ಸಮಯ ನನ್ನನ್ನು ಬಂಧನದಲ್ಲಿ ಇಡಬಹುದೇ?**

ಖಂಡಿತವಾಗಿಯೂ ಇಲ್ಲ. ಒಬ್ಬ ವ್ಯಕ್ತಿಯನ್ನು ಹೆಚ್ಚೆಂದರೆ 24 ಗಂಟೆಗಳ ಕಾಲ ಮಾತ್ರ ಪೊಲೀಸ್ ಠಾಣೆಯಲ್ಲಿ ಇರಿಸಿಕೊಳ್ಳಬಹುದು. ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡ ವ್ಯಕ್ತಿಯನ್ನು 24 ಗಂಟೆಗಳ ಒಳಗಾಗಿ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಬೇಕು. ಆತನ ದಸ್ತಗಿರಿಯ ಅಗತ್ಯತೆಯನ್ನು ಸಾಬೀತುಪಡಿಸುವ ಎಲ್ಲ ಕಾಗದ ಪತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು.

**89. ಹಾಗಿದ್ದರೂ ಸಹಾ ಪೊಲೀಸರು ವ್ಯಕ್ತಿಗಳನ್ನು ಶುಕ್ರವಾರ ಸಂಜೆ ದಸ್ತಗಿರಿ ಮಾಡಿ ಮುಂದಿನ ಸೋಮವಾರದವರೆಗೂ ಬಂಧನದಲ್ಲಿ ಇಡುವುದು ಏಕೆ?**

ವಾರಾಂತ್ಯದಲ್ಲಿ ಮ್ಯಾಜಿಸ್ಟ್ರೇಟರು ರಜೆಯ ಮೇಲಿರುತ್ತಾರೆ ಎಂಬ ಸಬೂಬು ನೀಡಿ ಪೊಲೀಸರು ಈ ಕಾನೂನು ಬಾಹಿರವಾದ ಕ್ರಮವನ್ನು ಕೈಗೊಳ್ಳುತ್ತಾರೆ. ಆದರೆ ವಾಸ್ತವವಾಗಿ ವಾರದ ಎಲ್ಲಾ ದಿನಗಳೂ ಮತ್ತು ದಿನದ 24 ಗಂಟೆಗಳೂ ಒಬ್ಬರಲ್ಲ ಒಬ್ಬರು ಮ್ಯಾಜಿಸ್ಟ್ರೇಟರು ಪಾಳಿಯಂತೆ ಕರ್ತವ್ಯ ನಿರತರಾಗಿರುತ್ತಾರೆ. ಪೊಲೀಸರ ವಶದಲ್ಲಿರುವ ವ್ಯಕ್ತಿಯ 24 ಗಂಟೆಗಳ ಸೆರೆಯ ಕಾಲ ಮಿತಿಯು ನ್ಯಾಯಾಲಯವು ಮುಚ್ಚಿದ ನಂತರ ಪೂರ್ಣಗೊಳ್ಳುತ್ತಿದ್ದರೆ ಆತನನ್ನು ಮ್ಯಾಜಿಸ್ಟ್ರೇಟರ ಮನೆಯಲ್ಲಿ ಹಾಜರುಪಡಿಸಬಹುದು. ಪೊಲೀಸರಿಂದ ಬಂಧಿಸಲ್ಪಟ್ಟ ವ್ಯಕ್ತಿಯನ್ನು ಕಾಣಲು ಮ್ಯಾಜಿಸ್ಟ್ರೇಟರು ನಿರಾಕರಿಸುವಂತಿಲ್ಲ.



**90. ಪೊಲೀಸರಿಂದ ಬಂಧಿಸಲ್ಪಟ್ಟ ನಂತರ ನಾನು ಎಲ್ಲಿದ್ದೇನೆ ಎಂಬುದನ್ನು ಇತರರು ತಿಳಿಯುವ ಬಗೆ ಹೇಗೆ?**

ಪೊಲೀಸ್ ವ್ಯವಸ್ಥೆಯಲ್ಲಿ ನೀವು ಕಳೆದುಹೋಗುವ ಪ್ರಸಂಗವನ್ನು ತಪ್ಪಿಸಲು ಕಾನೂನಿನಲ್ಲಿ ಅನೇಕ ರಕ್ಷಣೆಗಳನ್ನು ಒದಗಿಸಲಾಗಿದೆ. ನಿಮ್ಮನ್ನು ಬಂಧಿಸಿದ ಕೂಡಲೆ ಪೊಲೀಸರು ಅನೇಕ ರೀತಿಯ ಕ್ರಮಗಳನ್ನು ಕೈಗೊಳ್ಳಬೇಕು. ಅವರು ಬಂಧನ ಜ್ಞಾಪನಾಪತ್ರವನ್ನು (ಮೆಮೊ ಆಫ್ ಅರೆಸ್ಟ್) ಸಿದ್ಧಪಡಿಸಿ ಅದನ್ನು ಸ್ಥಳೀಯ ಮ್ಯಾಜಿಸ್ಟ್ರೇಟರಿಗೆ ಕಳುಹಿಸಬೇಕು. ನಿಮ್ಮ ಸ್ವಂತದ, ಇಲ್ಲವೇ ಕಾನೂನು ಸೇವಾ ವ್ಯವಸ್ಥೆಯ ಮೂಲಕ ದೊರೆಯುವ, ವಕೀಲರ ಸಹಾಯ ಪಡೆಯುವ ಅಧಿಕಾರ ನಿಮಗಿದೆ ಎಂಬುದನ್ನು ಪೊಲೀಸರು ನಿಮಗೆ ಸರಿಯಾಗಿ ಮನವರಿಕೆ ಮಾಡಿಕೊಡಬೇಕು. ನೀವು ಎಲ್ಲಿದ್ದೀರಿ ಎಂಬುದನ್ನು ನಿಮ್ಮ ಕುಟುಂಬದ ಸದಸ್ಯರಿಗೆ ಇಲ್ಲವೇ ನೀವು ಸೂಚಿಸಿದ ಸ್ನೇಹಿತರಿಗೆ ಪೊಲೀಸರು ತಿಳಿಸಲೇಬೇಕು. ಪೊಲೀಸರು ತಮ್ಮ ಅಧಿಕಾರಗಳ ದುರುಪಯೋಗ ಮಾಡುವ ಸಂದರ್ಭಗಳು ಉಂಟಾಗದಿರಲಿ ಎಂದು ಈ ಎಲ್ಲಾ ಅಂಶಗಳನ್ನು ಕಾನೂನಿನ ಮೂಲಕ ನಿಗದಿ ಪಡಿಸಲಾಗಿದೆ. ಪೊಲೀಸರು ಈ ನಿಯಮಗಳನ್ನು ಪಾಲಿಸದಿದ್ದರೆ ನ್ಯಾಯಾಲಯವು ಅವರನ್ನು ತರಾಟೆಗೆ ತೆಗೆದುಕೊಳ್ಳಬಹುದು.

**91. ಬಂಧನ ಜ್ಞಾಪನಾಪತ್ರದಿಂದ (ಮೆಮೊ ಆಫ್ ಅರೆಸ್ಟ್) ನನಗೇನು ಪ್ರಯೋಜನ?**

ಬಂಧನ ಜ್ಞಾಪನಾ ಪತ್ರವು ಅಕ್ರಮ ಸೆರೆಯ ವಿರುದ್ಧ ಒಂದು ರಕ್ಷಾ ಕವಚವಿದ್ದಂತೆ. ಅದರಲ್ಲಿ ನಿಮ್ಮ ಹೆಸರು, ನಿಮ್ಮನ್ನು ಬಂಧಿಸಿದ ವೇಳೆ, ದಿನಾಂಕ ಹಾಗೂ ಸ್ಥಳ, ಬಂಧಿಸಲು ಕಾರಣ ಮತ್ತು ಶಂಕಿತ ಅಪರಾಧಗಳ ಪಟ್ಟಿ ಇತ್ಯಾದಿಗಳನ್ನು ನಮೂದಿಸಲಾಗಿರುತ್ತದೆ. ಸತ್ಯಾಂಶಗಳನ್ನೇ ದಾಖಲು ಮಾಡಲಾಗಿದೆ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಲು ಅದರ ಮೇಲೆ ಪೊಲೀಸ ಅಧಿಕಾರಿ, ಇಬ್ಬರು ಸಾಕ್ಷಿಗಳು ಹಾಗೂ ನೀವು ಸಹಿ ಮಾಡಬೇಕು. ಬಂಧನ ಜ್ಞಾಪನಾಪತ್ರವನ್ನು ಮ್ಯಾಜಿಸ್ಟ್ರೇಟರಿಗೆ ಸಲ್ಲಿಸಲಾಗುತ್ತದೆ. ನಿಮ್ಮನ್ನು ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ಮ್ಯಾಜಿಸ್ಟ್ರೇಟರೆದುರು ಹಾಜರುಪಡಿಸಿದಾಗ ಅವರು ಆ ಪತ್ರದಲ್ಲಿ ನಮೂದಿಸಲಾಗಿರುವ ಅಂಶಗಳು ಸರಿಯಾಗಿವೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳುತ್ತಾರೆ. ಪೊಲೀಸರು ಒಂದು ದೈಹಿಕ ತಪಾಸಣೆಯ ಜ್ಞಾಪನಾಪತ್ರವನ್ನೂ (ಇನ್‌ಸ್ಪೆಕ್ಷನ್ ಮೆಮೊ) ಕೂಡಾ ತಯಾರಿಸಬೇಕು.

**92. ತಪಾಸಣೆಯ ಜ್ಞಾಪನಾಪತ್ರ (ಇನ್‌ಸ್ಪೆಕ್ಷನ್ ಮೆಮೊ) ಎಂದರೇನು?**

ನಿಮ್ಮನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡ ಸಮಯ ಮತ್ತು ನಿಮ್ಮ ಆಗಿನ ದೇಹಸ್ಥಿತಿಯ ಸಂಕ್ಷಿಪ್ತ ದಾಖಲೆಯೇ ತಪಾಸಣೆಯ ಜ್ಞಾಪನಾ ಪತ್ರ. ನಿಮ್ಮ ಸಾಧಾರಣ ದೈಹಿಕ ಸ್ಥಿತಿಯ ಬಗ್ಗೆ ಮತ್ತು ನಿಮ್ಮ ದೇಹದ ಮೇಲೆ ಮೇಲ್ನೋಟಕ್ಕೆ ಕಂಡುಬರುವ ದೊಡ್ಡ ಹಾಗೂ ಚಿಕ್ಕ ಗಾಯಗಳನ್ನು ಇದರಲ್ಲಿ ದಾಖಲಿಸಬೇಕು. ಈ ದಾಖಲೆಯ ಮೇಲೆಯೂ ನೀವೂ ಮತ್ತು ನಿಮ್ಮನ್ನು ಬಂಧಿಸಿದ ಪೊಲೀಸ್ ಅಧಿಕಾರಿಯೂ ಸಹಿ ಮಾಡಬೇಕು. ನಿಮಗೆ ಈ ದಾಖಲೆಯ ಒಂದು ಪ್ರತಿಯನ್ನು ನೀಡಲಾಗುತ್ತದೆ. ಆದರೆ ಬಂಧನ ಜ್ಞಾಪನಾ ಪತ್ರಕ್ಕೂ ತಪಾಸಣೆಯ ಜ್ಞಾಪನಾಪತ್ರಕ್ಕೂ ಇರುವ ವ್ಯತ್ಯಾಸವೇನೆಂದರೆ ತಪಾಸಣೆಯ ಜ್ಞಾಪನಾಪತ್ರಕ್ಕಾಗಿ ನೀವು ಮನವಿಯನ್ನು ಸಲ್ಲಿಸಬೇಕಾಗುತ್ತದೆ. ನೀವು ಮನವಿ ಮಾಡಿಕೊಳ್ಳದಿದ್ದರೆ ಈ ದಾಖಲೆಯನ್ನು ತಯಾರಿಸುವ ಅಗತ್ಯವಿಲ್ಲ. ಇದು ನೀವು ಪೊಲೀಸರ ವಶದಲ್ಲಿದ್ದಾಗ ಅವರು ನಿಮ್ಮನ್ನು ಹೊಡೆದು ಬಡಿದು ಹಿಂಸಿಸಬಾರದು ಎಂಬುದನ್ನು ಖಚಿತಪಡಿಸಲು ತೆಗೆದುಕೊಳ್ಳಬಹುದಾದ ಕ್ರಮ. ಆದರೆ ಯಾರು ನಿಮ್ಮ ಶರೀರ ಪರೀಕ್ಷೆಯನ್ನು ಮಾಡಬೇಕು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ನಿಮ್ಮನ್ನು ಬಂಧಿಸಿದ ಪೊಲೀಸ್ ಅಧಿಕಾರಿಯೇ ನಿಮ್ಮ ದೇಹದ ತಪಾಸಣೆಯನ್ನು ಮಾಡುವುದಾದರೆ ಅದರ ದಾಖಲೆಯಿಂದ ನಿಮಗೆ ಹೆಚ್ಚಿನ ರಕ್ಷಣೆ ದೊರೆಯಲಿಕ್ಕಿಲ್ಲ. ಆದರೆ ಪ್ರಥಮ ಬಾರಿಗೆ ನಿಮ್ಮನ್ನು ಮ್ಯಾಜಿಸ್ಟ್ರೇಟರ ಸಮ್ಮುಖದಲ್ಲಿ ಹಾಜರುಪಡಿಸುವಾಗ ಬೇರೆಲ್ಲ ದಾಖಲೆಗಳೊಂದಿಗೆ ಅಂಗೀಕೃತ ವೈದ್ಯರು ನೀಡಿದ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾಗುತ್ತದೆ. ನಿಮ್ಮನ್ನು ಮ್ಯಾಜಿಸ್ಟ್ರೇಟರ ಎದುರು ಹಾಜರುಪಡಿಸುವ ಮುನ್ನ ಒಬ್ಬ ವೈದ್ಯರು ನಿಮ್ಮ ಶರೀರ ಪರೀಕ್ಷೆಯನ್ನು ಮಾಡಿದ್ದು ನಿಮ್ಮ ದೈಹಿಕ ಸ್ಥಿತಿಯ ಬಗ್ಗೆ ತಮ್ಮ ಹೇಳಿಕೆಯನ್ನು ಈ ಪ್ರಮಾಣ ಪತ್ರದಲ್ಲಿ ದಾಖಲಿಸಿರಬೇಕು.

**93. ಈ ಎಲ್ಲಾ ವಿಷಯಗಳು ನನಗೆ ತಿಳಿಯುವ ಬಗೆ ಹೇಗೆ?**

ನಿಮ್ಮನ್ನು ಬಂಧಿಸುವ ಸಮಯದಲ್ಲಿ ನಿಮ್ಮೆಲ್ಲಾ ಅಧಿಕಾರಗಳ ಬಗ್ಗೆ ಪೊಲೀಸರು ನಿಮಗೆ ತಿಳಿಸಿಕೊಡಬೇಕೆಂದು ಕಾನೂನು ಹೇಳುತ್ತದೆ. ಇಷ್ಟೇ ಅಲ್ಲದೆ ಡೀ.ಕೆ. ಬಾಸು ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ತಿಳಿಸಿರುವಂತೆ ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಸೂಚನಾಫಲಕದ ಮೇಲೆ ಎಲ್ಲಾ ಪೊಲೀಸ್ ಠಾಣೆ ಮತ್ತು ಪೊಲೀಸ್ ಚೌಕಿಗಳಲ್ಲಿ ಪ್ರದರ್ಶಿಸಬೇಕು.

**94. ಪೊಲೀಸರ ವಶದಲ್ಲಿದ್ದಾಗ ಅವರು ನನ್ನನ್ನು ಥಳಿಸಬಹುದೆ?**

ಇಲ್ಲ. ನೀವು ಪೊಲೀಸರ ವಶದಲ್ಲಿದ್ದಾಗ ಅವರು ನಿಮ್ಮನ್ನು ಥಳಿಸುವಂತಿಲ್ಲ, ಕೆನ್ನೆಗೆ ಬಾರಿಸುವಂತಿಲ್ಲ ಅಥವಾ ಹೆದರಿಸುವಂತಿಲ್ಲ ಅಥವಾ ನಿಮಗೆ ಬೆದರಿಕೆ ಹಾಕುವಂತಿಲ್ಲ. ಹಾಗೆ ಮಾಡುವುದು ಕಾನೂನಿಗೆ ವಿರುದ್ಧವಾಗುತ್ತದೆ. ಹಾಗೆ ವರ್ತಿಸುವ ಪೊಲೀಸರನ್ನು ಶಿಕ್ಷೆಗೆ ಗುರಿಪಡಿಸಬಹುದಾಗಿದೆ.



**95. ತಪ್ಪೊಪ್ಪಿಕೊಳ್ಳುವಂತೆ ಪೊಲೀಸರು ನನ್ನನ್ನು ಒತ್ತಾಯಿಸಬಹುದೆ?**

ಇಲ್ಲ ಹಾಗೆ ಮಾಡುವಂತಿಲ್ಲ. ಪೊಲೀಸರಿಗೆ ನಿಮ್ಮನ್ನು ಪ್ರಶ್ನಿಸುವ ಅಧಿಕಾರ ನೀಡಲಾಗಿದೆಯೇ ಹೊರತು ನಿಮಗೆ ತಿಳಿದಿಲ್ಲದ ವಿಷಯದ ಬಗ್ಗೆ ಹೇಳಿಕೆ ನೀಡಲು ಒತ್ತಾಯಿಸುವಂತಿಲ್ಲ. ನಿಮ್ಮ ಇಚ್ಛೆಗೆ ವಿರುದ್ಧವಾಗಿ ಏನನ್ನೂ ಹೇಳುವಂತೆ ಬಲವಂತ ಮಾಡುವ ಹಾಗಿಲ್ಲ, ಅಥವಾ ನೀವು ಮಾಡದಿರುವ ಅಪರಾಧವನ್ನು 'ಮಾಡಿದೆನೆಂದು' ಒಪ್ಪಿಕೊಳ್ಳುವಂತೆ ಒತ್ತಾಯ ಮಾಡುವ ಹಾಗಿಲ್ಲ. ಪೊಲೀಸ್ ಅಧಿಕಾರಿಯ ಸಮ್ಮುಖದಲ್ಲಿ ನೀಡಿದ ತಪ್ಪೊಪ್ಪಿಗೆಯನ್ನು ಏನೇ ಆಗಲಿ ನ್ಯಾಯಾಲಯವು ಸ್ವೀಕರಿಸುವುದಿಲ್ಲ.

**96. ಇಷ್ಟೆಲ್ಲ ನಿರ್ಬಂಧನೆಗಳಿರುವಾಗ ಪೊಲೀಸರು ದೋಷಿಗಳನ್ನು ಬಂಧಿಸುವ ತಮ್ಮ ಕರ್ತವ್ಯವನ್ನು ನಿಭಾಯಿಸಲು ಸಾಧ್ಯವೇ?**

ಪ್ರಪ್ರಥಮವಾಗಿ ಯಾರು ದೋಷಿ, ಯಾರು ನಿರ್ದೋಷಿ ಎಂಬುದನ್ನು ನಿರ್ಧರಿಸುವುದು ಪೊಲೀಸರ ಕರ್ತವ್ಯವಲ್ಲ. ಅಪರಾಧಿಗಳನ್ನು ಇಲ್ಲವೆ ಶಂಕಿತ ವ್ಯಕ್ತಿಗಳನ್ನು ಬಂಧಿಸುವುದು ಮಾಡುವುದು ಮಾತ್ರ ಪೊಲೀಸರ ಕೆಲಸ. ತಾವು ಸೆರೆಹಿಡಿದ ವ್ಯಕ್ತಿಯೇ ದೋಷಿ ಎಂದು ತೀರ್ಮಾನಿಸಿ ಆತನನ್ನು ದಂಡಿಸುವುದು ಸಲ್ಲದು. ಈ ಜವಾಬ್ದಾರಿಯು ನ್ಯಾಯಾಲಯಗಳದ್ದಾಗಿದೆ. ಈ ಸಂದರ್ಭಗಳಲ್ಲಿ ಪೊಲೀಸರ ವಶದಲ್ಲಿರುವ ವ್ಯಕ್ತಿಗಳಿಗೆ ಎಲ್ಲಾ ರೀತಿಯ ಮಿಥ್ಯಾರೋಪಗಳಿಂದ ಮತ್ತು ಪೊಲೀಸರ ದುರ್ವ್ಯವಹಾರಗಳಿಂದ ರಕ್ಷಣೆಯನ್ನು ನೀಡುವುದು ಅತ್ಯಗತ್ಯ. ಆದುದರಿಂದ ಈ ಎಲ್ಲ ಕಟ್ಟುಪಾಡುಗಳನ್ನು ಕಾನೂನಿನಲ್ಲಿ ಅಳವಡಿಸಲಾಗಿದೆ. ವಾಸ್ತವವಾಗಿ ಇವು ಕಟ್ಟುಪಾಡುಗಳಲ್ಲ. ಇವು ನ್ಯಾಯಾಲಯದ ಮುಂದೆ ಪ್ರತಿಯೊಬ್ಬ ವ್ಯಕ್ತಿಗೂ ತಾನು ನಿರ್ದೋಷಿ ಎಂದು ಸಾಬೀತುಪಡಿಸಲು ನ್ಯಾಯೋಚಿತವಾದ ಅವಕಾಶವನ್ನು ಮಾಡಿಕೊಡಲು ಇರುವ ನಿಯಮಗಳು.

**97. ಆಪಾದಿತನಿಗೆ ಅನೇಕ ಹಕ್ಕುಗಳು ಇವೆಯಲ್ಲವೆ? ಆದರೆ ಅಪರಾಧಕ್ಕೆ ಬಲಿಯಾದವರ ಪಾಡೇನು?**

ಅಪರಾಧಕ್ಕೆ ಬಲಿಯಾದವರ ಬಗ್ಗೆ ಯಾರೂ ಚಿಂತಿಸುವುದಿಲ್ಲ ಎಂಬ ಅಭಿಪ್ರಾಯವು ಸರ್ವೇಸಾಮಾನ್ಯವಾದುದು. ಆದರೆ ವಾಸ್ತವವಾಗಿ ರಾಜ್ಯದ ಸಂಪೂರ್ಣ ಶಕ್ತಿಸಾಮರ್ಥ್ಯವು ಅಪರಾಧಕ್ಕೀಡಾದವರನ್ನು ಬೆಂಬಲಿಸುತ್ತದೆ. ಅವರ ಪರವಾಗಿ ಅಪರಾಧಿಯನ್ನು ಪತ್ತೆ ಹಚ್ಚಲು ಕ್ರಮ ಕೈಗೊಳ್ಳುತ್ತದೆ. ಅಪರಾಧಕ್ಕೀಡಾದವರ ವತಿಯಿಂದ ನ್ಯಾಯಾಲಯದಲ್ಲಿ ವಾದವನ್ನು ಮಂಡಿಸಲು ರಾಜ್ಯವು ಅಭಿಯೋಜಕರನ್ನು (ಪ್ರಾಸಿಕ್ಯೂಟರ್) ನೇಮಕ ಮಾಡುತ್ತದೆ. ರಾಜ್ಯವು ದೋಷಿಗಳನ್ನು ದಂಡಿಸುವುದೂ ಸಹ ಅಪರಾಧಕ್ಕೀಡಾದವರ ಪರವಾಗಿಯೇ. ಆದರೆ ಆರೋಪಿಯು ಮಾತ್ರ ಯಾವಾಗಲೂ ಒಬ್ಬಂಟಿಯಾಗಿ ನಿಲ್ಲುತ್ತಾನೆ. ಆತ ನಿರಪಾರಾಧಿಯೂ ಆಗಿರಬಹುದು. ರಾಜ್ಯದ ಬಲಾಢ್ಯ ಶಕ್ತಿಯನ್ನು ಎದುರಿಸುವ ಒಬ್ಬಂಟಿ ಆಪಾದಿತನನ್ನು

ಸರಿದೂಗಿಸಲು ಕಾನೂನು ಆತನಿಗೆ ರಕ್ಷಾ ಕವಚವನ್ನು ಒದಗಿಸಿಕೊಡುತ್ತದೆ. ಉದಾಹರಣೆಗೆ ತಾನು ನಿರ್ದೋಷಿ ಎಂದು ಸಾಬೀತು ಪಡಿಸಿಕೊಳ್ಳಲು ದೊರೆಯುವ ಅವಕಾಶ, ಸ್ವತ: ವಕೀಲರ ಸಹಾಯವನ್ನು ಪಡೆಯುವ ಸಾಮರ್ಥ್ಯವಿಲ್ಲದಿದ್ದರೆ ಉಚಿತವಾಗಿ ಕಾನೂನಿನ ನೆರವನ್ನು ಪಡೆಯುವುದು ಇತ್ಯಾದಿ ಈ ರಕ್ಷಾ ಕವಚದ ಅಂಶಗಳಾಗಿವೆ.

**98. ಪೊಲೀಸರಿಂದ ನನಗೆ ಜಾಮೀನು ದೊರೆಯಬಹುದೇ?**

ಜಾಮೀನು ದೊರೆಯುವುದೇ ಇಲ್ಲವೇ ಎಂಬುದು ಅಪರಾಧದ ಗಂಭೀರತೆಯನ್ನು ಅವಲಂಬಿಸಿದೆ. ಗಂಭೀರವಲ್ಲದ ಅಪರಾಧವಾಗಿದ್ದರೆ ಪೊಲೀಸರಿಂದ ನಿಮಗೆ ವಿಳಂಬವಿಲ್ಲದೆ ಜಾಮೀನು ದೊರೆಯಬೇಕು. ಆದರೆ ಜಾಮೀನಿಗೆ ಯೋಗ್ಯವಲ್ಲದ ಅಪರಾಧವನ್ನು ಮಾಡಿದ್ದರೆ ಪೊಲೀಸರು ಜಾಮೀನಿನ ಆಧಾರದ ಮೇಲೆ ನಿಮ್ಮನ್ನು ಬಿಡುಗಡೆ ಮಾಡುವಂತಿಲ್ಲ.

**99. ಜಾಮೀನು ದೊರೆಯಬಹುದಾದಂತಹ ಅಪರಾಧ ಹಾಗೂ ಜಾಮೀನು ದೊರೆಯದಂತಹ ಅಪರಾಧದ ಬಗ್ಗೆ ತಿಳಿದುಕೊಳ್ಳುವುದು ಮುಖ್ಯವೆ?**

ಹೌದು. ಗಂಭೀರವಲ್ಲದ ಅಪರಾಧಗಳು ಜಾಮೀನಿಗೆ ಯೋಗ್ಯವಾದಂತಹ ಅಪರಾಧಗಳು. ಅಂತಹ ಪ್ರಕರಣಗಳಲ್ಲಿ ಪೊಲೀಸರಿಂದ ಕೂಡಲೆ ಜಾಮೀನು ಪಡೆಯುವುದು ನಿಮ್ಮ ಹಕ್ಕು. ಸಾಮಾನ್ಯವಾಗಿ ಗಂಭೀರವಾದ ಅಪರಾಧಗಳು ಜಾಮೀನಿಗೆ ಯೋಗ್ಯವಾದವುಗಳಲ್ಲ. ಇಂತಹ ಅಪರಾಧಗಳನ್ನು ಮಾಡಿದರೆ ಜಾಮೀನು ಹಕ್ಕಿನ ರೂಪದಲ್ಲಿ ದೊರೆಯುವುದಿಲ್ಲ. ಆದರೆ ಸುಯೋಗವಶಾತ್ ನ್ಯಾಯಾಲಯಗಳ ಮೂಲಕ ನಿಮಗೆ ಜಾಮೀನು ದೊರೆಯಬಹುದು.

**100. ಜಾಮೀನಿಗೆ ಅವಕಾಶವಿಲ್ಲದ ಅಪರಾಧದ ಆರೋಪವು ನನ್ನ ಮೇಲಿದ್ದರೆ ನನಗೆ ಜಾಮೀನು ದೊರೆಯುವ ಸಾಧ್ಯತೆಗಳೇ ಇಲ್ಲವೆ?**

ಹಾಗೆಂಬ ನಿಯಮವೇನೂ ಇಲ್ಲ. ಜಾಮೀನಿಗೆ ಅವಕಾಶವಿಲ್ಲದ ಅಪರಾಧ ಮಾಡಿದ್ದರೂ ನಿಮಗೆ ಜಾಮೀನು ದೊರೆಯುವ ಸಂಭವವಿದೆ. ಜಾಮೀನು ಕೋರಿ ನೀವು ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬೇಕು. ನ್ಯಾಯಾಲಯವು ಅಪರಾಧದ ಗಂಭೀರತೆಯನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಜೊತೆಗೆ ನಿಮ್ಮನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ ನೀವು ಪರಾರಿಯಾಗುವಿರೆ, ಅಥವಾ ಸಾಕ್ಷಿಗಳನ್ನು ಬೆದರಿಸುವಿರೆ, ಅಥವಾ ಸಾಕ್ಷ್ಯಗಳನ್ನು ನಾಶಪಡಿಸುವಿರೆ ಎಂಬೆಲ್ಲ ಅಂಶಗಳನ್ನು ನ್ಯಾಯಾಲಯವು ಪರಿಶೀಲಿಸುತ್ತದೆ. ಇಂತಹ ದುಷ್ಕೃತ್ಯಗಳನ್ನು ನೀವು ಮಾಡಲಾರಿರಿ ಎಂದು ಮನವರಿಕೆಯಾದರೆ ನ್ಯಾಯಾಲಯವು ನಿಮಗೆ ಜಾಮೀನು ನೀಡಬಹುದು.

**101. ಈಗ ನಾನು ಸ್ವತಂತ್ರ ಎಂಬುದು ಇದರ ಅರ್ಥವೇ?**

ಖಂಡಿತವಾಗಿಯೂ ಅಲ್ಲ. ನ್ಯಾಯಾಲಯದಲ್ಲಿ ನಿಮ್ಮ ಪ್ರಕರಣದ ಬಗ್ಗೆ ನಡೆಯುವ ವಿಚಾರಣೆಯನ್ನು ನೀವು ಎದುರಿಸಲೇಬೇಕು. ನೀವು ಅಪರಾಧಿಯೇ ಅಲ್ಲವೇ ಎಂಬುದನ್ನು ನ್ಯಾಯಾಲಯವು ತೀರ್ಮಾನಿಸುತ್ತದೆ.



# ಪೊಲೀಸ್ ಲಾಂಛನಗಳು



ಪೊಲೀಸ್ ಮಹಾ ನಿರ್ದೇಶಕ
(ಡಿ.ಜಿ.ಪಿ.)



ಪೊಲೀಸ್ ಮಹಾ
ನಿರೀಕ್ಷಕ(ಐ.ಜಿ.ಪಿ.)



ಉಪ ಪೊಲೀಸ್
ಮಹಾ ನಿರೀಕ್ಷಕ(ಡಿ.ಐ.ಜಿ.)



ಹಿರಿಯ ಪೊಲೀಸ್
ಸೂಪರಿಂಟೆಂಡೆಂಟ್
(ಎಸ್.ಎಸ್.ಪಿ.)



ಪೊಲೀಸ್ ಸೂಪರಿಂಟೆಂಡೆಂಟ್
(ಎಸ್.ಪಿ.)



ಹೆಚ್ಚುವರಿ ಪೊಲೀಸ್
ಸೂಪರಿಂಟೆಂಡೆಂಟ್
(ಅಡಿಷನಲ್ ಎಸ್.ಪಿ.)



ಸಹಾಯಕ / ಉಪ ಪೊಲೀಸ್
ಸೂಪರಿಂಟೆಂಡೆಂಟ್
(ಎ.ಎಸ್.ಪಿ. ಡಿ.ವೈ.ಎಸ್.ಪಿ.)



ನಿರೀಕ್ಷಕ(ಐ.ಪಿ.)



ಉಪ ನಿರೀಕ್ಷಕ(ಎಸ್.ಐ.)



ಸಹಾಯಕ ಉಪ ನಿರೀಕ್ಷಕ
(ಎ.ಎಸ್.ಐ.)



ಹೆಡ್ ಕಾನ್ಸ್ಟೇಬಲ್
(ಹೆಚ್.ಸಿ.)

# ಸಿ.ಎಚ್.ಆರ್.ಐ. ಕಾರ್ಯಕ್ಷೇತ್ರ

ಮಾನವ ಹಕ್ಕು ಪರಿಶುದ್ಧ ಪ್ರಜಾಪ್ರಭುತ್ವ ಹಾಗೂ ಅಭಿವೃದ್ಧಿ ಕಾರ್ಯಗತವಾಗಬೇಕಾದರೆ, ಕಾಮನ್‌ವೆಲ್ತ್ ಹಾಗೂ ಅದರ ಸದಸ್ಯ ರಾಷ್ಟ್ರಗಳಲ್ಲಿ ಉತ್ತಮ ಗುಣಮಟ್ಟದ ಹೊಣೆಗಾರಿಕೆ ಹಾಗೂ ಭಾಗವಹಿಸುವಿಕೆ ಇರಬೇಕೆಂದು ಸಿ.ಎಚ್.ಆರ್.ಐ.ನ ನಂಬಿಕೆಯಾಗಿದೆ. ಮಾನವ ಹಕ್ಕುಗಳ ಬಗ್ಗೆ ಜನಾಂದೋಳನ ನಡೆಸುವುದರ ಜೊತೆಗೆ, ಸಿ.ಎಚ್.ಆರ್.ಐ. ಮಾಹಿತಿ ಹಕ್ಕು ಹಾಗೂ ನ್ಯಾಯದ ಹಕ್ಕನ್ನು ಪ್ರತಿಪಾದಿಸುತ್ತದೆ. ಅಧ್ಯಯನ, ಪ್ರಕಟಣೆ, ಕಾರ್ಯಾಗಾರ ಶಿಬಿರ ಹಾಗೂ ಮಾಹಿತಿ ಹಂಚುವಿಕೆಯ ಮೂಲಕ ಈ ಕೆಲಸ ಮಾಡುತ್ತಿದೆ.

**ಮಾನವ ಹಕ್ಕು ಆಂದೋಲನ :** ಕಾಮನ್‌ವೆಲ್ತ್ ರಾಷ್ಟ್ರಗಳು ಸದಸ್ಯ ರಾಷ್ಟ್ರಗಳಿಗೆ ನಿಯಮಿತವಾಗಿ ವರದಿ ಸಲ್ಲಿಸುವುದಲ್ಲದೆ ಅಗತ್ಯವಾದಾಗಲೆಲ್ಲ ಸತ್ಯ ಸಂಶೋಧನಾ (Fact Finding) ಕಾರ್ಯಕ್ರಮ ಹಮ್ಮಿಕೊಳ್ಳುತ್ತದೆ. 1995 ರಿಂದ ಸಿ.ಎಚ್.ಆರ್.ಐ. ನೈಜೀರಿಯಾ, ಜಾಂಬಿಯಾ, ಫಿಜಿ ದ್ವೀಪ ಹಾಗೂ ಸಿಯಾರಾ ಲೇಓನ್ ರಾಷ್ಟ್ರಗಳಿಗೆ ಆಯೋಗಗಳನ್ನು ಕಳುಹಿಸಿದೆ. ಸಿ.ಎಚ್.ಆರ್.ಐ. ಕಾಮನ್‌ವೆಲ್ತ್ ಹ್ಯೂಮನ್ ರೈಟ್ಸ್ ನೆಟ್‌ವರ್ಕ್ ಜೊತೆಗೂಡಿ ಮಾನವ ಹಕ್ಕು ಬಗ್ಗೆ ವ್ಯಾಪಕವಾಗಿ ಕೆಲಸ ಮಾಡುತ್ತಿದೆ. ಸಿ.ಎಚ್.ಆರ್.ಐ.ನ ಮಾಧ್ಯಮ ವಿಭಾಗವು ಮಾನವ ಹಕ್ಕು ಬಗ್ಗೆ ಸಾರ್ವಜನಿಕ ಅಭಿಪ್ರಾಯ ರೂಪಿಸಲು ಪ್ರಯತ್ನಿಸುತ್ತಿದೆ.

## ಮಾಹಿತಿ ಹಕ್ಕು

ಸಾರ್ವಜನಿಕ ಸಂಸ್ಥೆ ಹಾಗೂ ಸರ್ಕಾರದ ಜೊತೆ ನಿಕಟ ಸಂಪರ್ಕ ಹೊಂದಿರುವ ಸಿ.ಎಚ್.ಆರ್.ಐ. ಮಾಹಿತಿ ಹಕ್ಕು ವಿಷಯದಲ್ಲಿ ತಾಂತ್ರಿಕ ಸಲಹೆ, ಸೂಚನೆ ನೀಡುವುದಲ್ಲದೆ ಅದರ ಅನುಷ್ಠಾನಕ್ಕೆ ಅಗತ್ಯವಾದ ಕ್ರಮ ಕೈಗೊಳ್ಳಲು ಸಹಕರಿಸುತ್ತಿದೆ. ಸಾರ್ವಜನಿಕ ಸಂಸ್ಥೆಗಳು ಹಾಗೂ ಸರ್ಕಾರದ ಸಬಲೀಕರಣಕ್ಕೆ ಸಿ.ಎಚ್.ಆರ್.ಐ. ಪಣತೊಟ್ಟಿದೆ. ಸಿ.ಎಚ್.ಆರ್.ಐ. ದಕ್ಷಿಣ ಏಷ್ಯಾದಲ್ಲಿ ಹೆಚ್ಚು ಕ್ರಿಯಾಶೀಲ ವಾಗಿದ್ದು ಇತ್ತೀಚೆಗಷ್ಟೆ ಭಾರತದಲ್ಲಿ ಮಾಹಿತಿ ಹಕ್ಕು ಕಾಯ್ದೆ ಜಾರಿಗೆ ಬರಲು ಪ್ರಮುಖ ಪಾತ್ರ ವಹಿಸಿದೆ. ಆಫ್ರಿಕಾ ದೇಶದ ಮಾಹಿತಿ ಹಕ್ಕು ಕಾಯ್ದೆಯ ರಚನೆಯಲ್ಲಿ ಸಿ.ಎಚ್.ಆರ್.ಐ. ಸಹಾಯ ಮಾಡಿದೆ. ಇದೇ ರೀತಿ ಪೆಸಿಫಿಕ್‌ನಲ್ಲೂ ಕಾರ್ಯಕ್ರಮ ಹಮ್ಮಿಕೊಂಡಿದೆ.

**ಸಂವಿಧಾನ :** ಸಾರ್ವಜನಿಕರು ಸಂವಿಧಾನ ರಚಿಸಬೇಕಲ್ಲದೆ ಅವರೆ ಅದರ ಒಡೆಯರಾಗಿರಬೇಕು ಎಂದು ಸಿ.ಎಚ್.ಆರ್.ಐ.ನ ನಂಬಿಕೆಯಾಗಿದೆ. ಸಂವಿಧಾನದ ಮರುಪರಿಶೀಲನೆಗೆ ಅನುಕೂಲವಾಗುವ ದೃಷ್ಟಿಯಿಂದ ಕೆಲವು ಮಾರ್ಗಸೂಚಿಯನ್ನು ಸಿದ್ದಪಡಿಸಲಾಗಿದೆ. ಸಂವಿಧಾನ ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸಿ.ಎಚ್.ಆರ್.ಐ. ವೆಬ್ (Website) ಆಧಾರಿತ ತರಬೇತಿಯನ್ನು ಕಾಮನ್‌ವೆಲ್ತ್ ಸಂಸದೀಯ ಸಂಸ್ಥೆಗಾಗಿ ತಯಾರಿಸಲಾಗಿದೆ. ಚುನಾವಣೆಯ ಸಂದರ್ಭದಲ್ಲಿ ಸಿ.ಎಚ್.ಆರ್.ಐ. ಸಾರ್ವಜನಿಕ ಸಂಸ್ಥೆಗಳ ಜಾಲ (Network) ನಿರ್ಮಿಸಿ ಮತದಾರರ ಶಿಕ್ಷಣ, ಅಭ್ಯರ್ಥಿಗಳ ವಿವರ, ಅವರ ಕಾರ್ಯಾಚರಣೆ, ಆರೋಪ ಹೊತ್ತಿರುವ ಅಭ್ಯರ್ಥಿಗಳ ವಿವರ ಇತ್ಯಾದಿಗಳ ಬಗ್ಗೆ ಜನಾಭಿಪ್ರಾಯ ಮೂಡಿಸಲು ಪ್ರಯತ್ನಿಸುತ್ತಿದೆ.

## ನ್ಯಾಯದ ಹಕ್ಕು

**ಪೊಲೀಸ್ ಸುಧಾರಣೆ :** ಹಲವಾರು ರಾಷ್ಟ್ರಗಳಲ್ಲಿ ಪೊಲೀಸ್ ವ್ಯವಸ್ಥೆ, ಸಿಬ್ಬಂದಿ, ನಾಗರಿಕರ ಹಕ್ಕುಗಳನ್ನು ರಕ್ಷಿಸುವುದರ ಬದಲು ಅದರ ಉಲ್ಲಂಘನೆಗೆ ಕಾರಣವಾಗಿದ್ದು, ನಾಗರಿಕರಿಗೆ ನ್ಯಾಯ ದೊರೆಯದಂತೆ ಮಾಡಿದೆ. ಪೊಲೀಸ್ ನ್ಯಾಯ ಮತ್ತು ಕಾನೂನನ್ನು ಎತ್ತಿ ಹಿಡಿಯುವವರಾಗಬೇಕೆಂಬ ಉದ್ದೇಶದಿಂದ ಪೊಲೀಸ್ ವ್ಯವಸ್ಥೆಯನ್ನು ಸುಧಾರಿಸಲು ಸಿ.ಎಚ್.ಆರ್.ಐ. ಪ್ರಯತ್ನಿಸುತ್ತಿದೆ. ಪೊಲೀಸ್ ಸುಧಾರಣೆಗೆ ಸಾರ್ವಜನಿಕರ ಸಹಕಾರ ಪಡೆಯಲು ಸಿ.ಎಚ್.ಆರ್.ಐ. ಕಾರ್ಯಕ್ರಮ ಹಮ್ಮಿಕೊಂಡಿದೆ. ಘಾನಾ ಹಾಗೂ ಪೂರ್ವ ಆಫ್ರಿಕಾ ರಾಷ್ಟ್ರಗಳಲ್ಲಿ ಪೊಲೀಸರ ಹೊಣೆಗಾರಿಕೆ ಹಾಗೂ ರಾಜಕೀಯ ಹಸ್ತಕ್ಷೇಪದ ಬಗ್ಗೆ ತನಿಖೆ ನಡೆಸುತ್ತಿದೆ.

**ಬಂದೀಖಾನೆ ಸುಧಾರಣೆ :** ಜೈಲುಗಳು ಮೂಲತಃ ಸಾರ್ವಜನಿಕರಿಗೆ ತೆರೆದಿಲ್ಲವಾದ ಕಾರಣ ಅವುಗಳು ನ್ಯಾಯ ಉಲ್ಲಂಘನೆಯ ಕೇಂದ್ರವಾಗಿವೆ. ಜೈಲುಗಳ ಪರಿಶೀಲನೆಗೆ ಇರುವ ವ್ಯವಸ್ಥೆ ಸಂಪೂರ್ಣವಾಗಿ ಜಾರಿಗೆ ಬಾರದ ಕಾರಣ, ಸಾರ್ವಜನಿಕರಿಗೆ ಮುಕ್ತ ಅವಕಾಶ ಇಲ್ಲದಂತಾಗಿದೆ. ಆದ್ದರಿಂದ ಸಿ.ಎಚ್.ಆರ್.ಐ. ಜೈಲುಗಳು ಸಾರ್ವಜನಿಕರ ಪರಿಶೀಲನೆಗೆ ಅವಕಾಶ ಮಾಡಿಕೊಡಲು ಪ್ರಯತ್ನಿಸುತ್ತಿವೆ.

**ನ್ಯಾಯಾಂಗ ಶಿಕ್ಷಣ :** ಸಮಾಜದ ಶೋಷಿತ ವರ್ಗದ ಜನರಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಸಿ.ಎಚ್.ಆರ್.ಐ. ನ್ಯಾಯಾಂಗ ಶಿಕ್ಷಣದಲ್ಲಿ ತೊಡಗಿದೆ. ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ನ್ಯಾಯಾಧೀಶರು, ಕಾರ್ಯಕರ್ತರಿಂದ ಹಾಗೂ ಪರಿಣತರಿಂದ ನೇರವಾಗಿ ಅನುಭವಗಳನ್ನು ಕೇಳುವ ಅಲ್ಲದೆ, ನ್ಯಾಯಾಂಗ ಕ್ಷೇತ್ರದಲ್ಲಿ ಸ್ಥಳೀಯ ಸಮಸ್ಯೆಗಳ ನಿರ್ವಹಣಾ ಕ್ರಮ ಮತ್ತು ಸಾಮಾಜಿಕ ಹಾಗೂ ವೈಜ್ಞಾನಿಕ ಬೆಳವಣಿಗೆಗಳ ಬಗ್ಗೆ ತಿಳಿದುಕೊಳ್ಳುವ ಅವಕಾಶವಿದೆ. ಈ ಕಾರ್ಯಕ್ರಮವು ಕೆಲವು ವರ್ಷಗಳ ಹಿಂದೆ INTERRIGHTS ನೊಂದಿಗೆ ಆರಂಭವಾಯಿತು. ಈಗ ಸಿ.ಎಚ್.ಆರ್.ಐ. ಸ್ವತಂತ್ರವಾಗಿ ಈ ಕಾರ್ಯಕ್ರಮದಲ್ಲಿ ತೊಡಗಿದ್ದು, ನ್ಯಾಯ ಒದಗಿಸಿಕೊಡುವ ಪ್ರಕ್ರಿಯೆಯಲ್ಲಿ ಮಾನವಹಕ್ಕುಗಳ ಮಹತ್ವದ ಬಗ್ಗೆ ಸ್ಥಳೀಯ ಮಟ್ಟದ ನ್ಯಾಯಾಧೀಶರಲ್ಲಿ ಅರಿವು ಮೂಡಿಸುತ್ತಿದೆ.

# ವಯಸ್ಕರೂ ಓದಿ ತಿಳಿಯಬೇಕಾದ ಮಕ್ಕಳ ಪುಸ್ತಕ

ಕಾಮನ್‌ವೆಲ್ತ್ ಹ್ಯೂಮನ್ ರೈಟ್ಸ್ ಇನಿಶಿಯೇಟಿವ್
ಬಿ-117, 2ನೇ ಮಹಡಿ, ಸರ್ವೋದಯ ಎನ್‌ಕ್ಲೇವ್, ನವ ದೆಹಲಿ – 110 017
ಫೋನ್ : + 91-(0)11 4318 0200, 2686 0523
ಫ್ಯಾಕ್ಸ್ : + 91-(0)11 2682 4688
info@humanrightsinitiative.org;  www.humanrightsinitiative.org

ಮುದ್ರಣ : ನವಕರ್ನಾಟಕ ಪ್ರಿಂಟರ್ಸ್, ಬೆಂಗಳೂರು – 560 058

ಬೆಲೆ : ₹ 90